ಸಂಕಲನ

ವರ್ಷ ೮

ಸೆಪ್ಟಂಬರ್ + ಅಕ್ಟೋಬರ್

೨೦೦೮

೩೧

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ

ಹೇಮಾ ಪಟ್ಟಣಶೆಟ್ಟಿ

ಪರಿವಿಡಿ : ಸಂಕಲನ - ೪೧

೧. ನನ್ನ ಅವ್ವ ನನ್ನ ಅಪ್ಪ : ಕೃತಜ್ಞತೆ -೩೯ - ಎಸ್. ಆರ್. ಗುಂಜಾಳ ೪-೮
೨. ನನ್ನ ಅವ್ವ ನನ್ನ ಅಪ್ಪ : ಕೃತಜ್ಞತೆ -೪೦ -ಯಶವಂತ ಸರದೇಶಪಾಂಡೆ ೯-೧೩
೩. ನನ್ನ ಅವ್ವ ನನ್ನ ಅಪ್ಪ : ಕೃತಜ್ಞತೆ -೪೧ -ಬಾಳಣ್ಣ ಸೀಗೀಹಳ್ಳಿ ೧೩-೧೭
೪. ನನ್ನ ಶಾಲಾ ಗುರುಗಳು : ಗೌರವ-೨೩ - ರಾಗಿಣಿ ಆರ್. ೧೮-೨೫
೫. ಕಾರಂತರ ಜೀವಂತ ಪಾತ್ರಗಳು-೧೧+೧೨+೧೩-ಸಿ. ಸೋಮಶೇಖರಯ್ಯ ೨೬-೪೦
೬. ಷ. ಶೆಟ್ಟರ್ ಅವರ 'ಶಂಗಂ ತಮಿಳಗಂ ಮತ್ತು...' - ಸಿ. ನಾಗಭೂಷಣ ೪೧-೫೨
೭. ತುಂತುರು ಮಳೆ ಎಳೆ ಬಿಸಿಲಲಿ -ಎಂ. ರಾಜ್‌ಕುಮಾರ್ ೫೨-೫೭
೮. ಒಡೆಯಲಾರದ ಪ್ರತಿಮೆ -ಬಸವರಾಜ ವಕ್ಕುಂದ ೫೮-೬೧
೯. ಮೀರಾ ಪ್ರೇಮ ಧಾರಾ : ೪ -ಬಸವರಾಜ ವಕ್ಕುಂದ ೬೨-೬೪
೧೦. ವಾಸ್ತವ - ಅಶೋಕ ನರೋಡೆ ೬೫
೧೧. ನಾಲ್ಕು ಕವಿತೆಗಳು -ಚನ್ನಪ್ಪ ಅಂಗಡಿ ಬಮ್ಮನಹಳ್ಳಿ ೬೫-೬೮
೧೨. ಎರಡು ಕವಿತೆಗಳು -ಚೇತನ್ ಮುಂಡಾಜೆ ೬೯
೧೩. ಬಿನ್ನಹ -ವಿ. ಹರಿನಾಥ ಬಾಬು ೬೯
೧೪. ಎರಡು ಕವಿತೆಗಳು -ರಜಿಯಾ ಡಿ. ಬಿ. ೭೦
೧೫. ಪುಸ್ತಕ ಪರಿಶೀಲನೆ ೭೧-೭೭
  ೧. ಮಂದ್ರಾವಲೋಕನ : ಸಂ. ಎಂ. ಎಸ್. ವೆಂಕಟರಾಮಯ್ಯ,
  ೨. ಶ್ರೀ ಕನಕದಾಸರು : ಬಸವರಾಜ ನಾಯ್ಕರ -ಪ್ರಕಾಶ ಕಡಮೆ
  ೩. ಮುಳ್ಳಿನ ಬಾಯಿಯಲ್ಲಿ... : ಜಂಬಣ್ಣ ಅಮರಚಿಂತ -ಸುನಂದಾ ಕಡಮೆ
  ೪. ವೀರಶೈವಾಂಧ್ರ ವಾಙ್ಮಯ : ಮೂಲ ಶಿಷ್ಟಾ ರಾಮಕೃಷ್ಣಶಾಸ್ತ್ರಿ, ಅನು : ಕಾರುಪಲ್ಲಿ ಜಾನಕಿರಾಮಯ್ಯ -ಬಿ. ಜಿ. ಚನ್ನೇಶ್ ಹೊನ್ನಾಳಿ
  ೫. ಸಮನ್ವಯ : ಎಸ್.ವಿ. ಪ್ರಭಾವತಿ -ಪದ್ಮ ಟಿ. ಶೆಟ್ಟಿ
  ೬. ಮಡಿಚಿಟ್ಟ ಕೌದಿ : ಡಿ. ಬಿ. ರಜಿಯಾ -ನಾ. ದಾಮೋದರ ಶೆಟ್ಟಿ
೧೬. ಸಂಕಲನ : ಅನಿಸಿಕೆ ೭೭-೭೯
೧೭. ಕಡೀಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ ೮೦-೮೧

ಸಂಕಲನ

ಸಪ್ಟೆಂಬರ್ + ಅಕ್ಟೋಬರ್ ೨೦೦೮

ಸಂಪಾದಕರು

ಸಿದ್ಧಲಿಂಗ ಪಟ್ಟಣಶೆಟ್ಟಿ

ಹೇಮಾ ಪಟ್ಟಣಶೆಟ್ಟಿ

ಸಂಕಲನ ಪ್ರಕಾಶನ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ

ಧಾರವಾಡ – ೫೮೦ ೦೦೪

R N I No. KARKAN 14160 /10 / 1 / 2002 - TC

SANKALANA :

A Kannada Literary Magazine

Volume 7, Issue 5 : September + October 2008

Edited by

Dr. Siddhaling Pattanshetti

Hoomane, Shridevinagar, Vidyagiri, Dharwad - 580 004

E mail :sankalana.sp@gmail.com

siddhaling.pattanshetti@rediffmail.com

Printed by Saraswati Offset Printers, Shivaji Road, Dharwad- 580 001

●

ಸಂಕಲನ – ೪೧

ಸಂಪುಟ ೭, ಸಂಚಿಕೆ ೫ : ಸಪ್ಟಂಬರ್ + ಅಕ್ಟೋಬರ್ ೨೦೦೮

ಸಂಪಾದಕರು : ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ ಮತ್ತು ಡಾ. ಹೇಮಾ ಪಟ್ಟಣಶೆಟ್ಟಿ

ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ – ೫೮೦ ೦೦೪

✆ :೦೮೩೬–೨೪೬ ೨೭೧೮

ಸಿ.ಪ. : ೯೪೪೮೬ ೩೦೬೩೭

ಹೇಮಾ: ೯೪೪೮೮ ೬೧೬೦೪

ಲೇಖನ ಕಳಿಸಲು **E mail : siddhaling.pattanshetti@rediffmail.com**

sankalana.sp@gmail.com

ಸಂಕಲನದಲ್ಲಿ ಪ್ರಕಟವಾದ ಲೇಖನಗಳಲ್ಲಿ ವ್ಯಕ್ತವಾದ
ಅಭಿಪ್ರಾಯಗಳ ಹೊಣೆ, ಹಕ್ಕು ಇತ್ಯಾದಿ ಎಲ್ಲ ಆಯಾ ಲೇಖಕರವು.

ವಾರ್ಷಿಕ ಚಂದಾ ರೂ. ೨೦೦/– (ಚೆಕ್ ೨೨೦/–)

ಡಿಟಿಪಿ + ಮುದ್ರಣ :

ಸರಸ್ವತಿ ಆಫ್‌ಸೆಟ್ ಪ್ರಿಂಟರ್ಸ್, ಶಿವಾಜಿ ಬೀದಿ, ಧಾರವಾಡ–೫೮೦ ೦೦೧

✆ : ೦೮೩೬–೨೪೪೪ ೧೦೬೫

ಸಂಪಾದಕರ ಮಾತು

ಸಂಕಲನ ದ್ವೈಮಾಸಿಕದ ಮೊದಲ ಸಂಚಿಕೆ ೨೦೦೨ ಜನೆವರಿಯಲ್ಲಿ ಪ್ರಕಟವಾಗಿತ್ತು. ಆಗಿನಿಂದ ಈ ವರೆಗೆ ನಿಯಮಿತವಾಗಿ ಪ್ರಕಟವಾಗುತ್ತಿರುವ ಈ ಸಾಹಿತ್ಯ ಪತ್ರಿಕೆಗೆ ೨೦೦೮ ಡಿಸೆಂಬರ್ ತಿಂಗಳಿಗೆ ಏಳು ವರ್ಷ ತುಂಬುತ್ತಿವೆ.

ಸಂಕಲನ ನಮಗೆ ಅಸಂಖ್ಯ ಸ್ನೇಹಿತರನ್ನು, ಆಪ್ತರನ್ನು ಒದಗಿಸಿಕೊಟ್ಟಿದೆ.

ವಿವಿಧ ಕಾರಣಗಳಿಂದಾಗಿ ಇದು ಪ್ರಕಟಣೆಯ ಕೊನೆಯ ವರ್ಷ, ಮತ್ತು ಮುಂದಿನ ಸಂಚಿಕೆ ಸಂಕಲನ-೪೨ ಕೊನೆಯ ಸಂಚಿಕೆ ಎಂದು ತಿಳಿಸಲು ಹರ್ಷ ಮತ್ತು ವಿಷಾದಗಳ ಮಿಶ್ರ ಭಾವನೆ ನಮ್ಮಲ್ಲಿದೆ.

ಪ್ರಥಮ ಸಂಚಿಕೆಯಲ್ಲಿ ಘೋಷಿಸಿದ್ದ ನಮ್ಮ ಎಲ್ಲ ಮಾತುಗಳನ್ನು ಉಳಿಸಿಕೊಂಡಿದ್ದೇವೆ, ಮತ್ತು ಪ್ರೀತಿಯಿಂದ ಪಾಲಿಸಿದ್ದೇವೆ.

ಸಂಕಲನದಲ್ಲಿ ಪ್ರಕಟಣೆಗೆ ಸ್ವೀಕೃತವಾಗಿದ್ದು, ಈ ವರೆಗೆ ಪ್ರಕಟವಾಗದೇ ಉಳಿದಿದ್ದ ಎಲ್ಲ ಲೇಖನಗಳನ್ನು ಆಯಾ ಲೇಖಕರಿಗೆ, ವಿಷಯ ತಿಳಿಸಿ, ೨೦೦೮ ಆಗಸ್ಟ್ ಕೊನೆಯಲ್ಲಿ ಮರಳಿಸಲಾಗಿದೆ.

೨೦-೨೫ ಜನ ಅಭಿಮಾನಿ ಚಂದಾದಾರರು ಮುಂದಿನ ೧-೨ ವರ್ಷಗಳ ಮುಂಗಡ ಚಂದಾಹಣ ಕಳಿಸಿದ್ದಾರೆ. ಈ ವರ್ಷದ ಚಂದಾ ಹಣ ಮಾತ್ರ ಇಟ್ಟುಕೊಂಡು, ಉಳಿದ ಮೊತ್ತವನ್ನು ಅವರಿಗೆ ಬರುವ ಡಿಸೆಂಬರ್ ಒಳಗಾಗಿ ಕೃತಜ್ಞತೆಯೊಂದಿಗೆ ಮರಳಿಸಲಾಗುವುದು.

ಸಂಕಲನವನ್ನು ಮೆಚ್ಚಿದ, ಪ್ರೀತಿಸಿದ, ಪ್ರೋತ್ಸಾಹಿಸಿದ, ಆದರಿಸಿದ, ಸಹಕರಿಸಿದ ಎಲ್ಲ ಲೇಖಕರನ್ನು, ವಿಮರ್ಶಕರನ್ನು, ಚಂದಾದಾರರನ್ನು, ಗ್ರಂಥಾಲಯ ಅಧಿಕಾರಿಗಳನ್ನು, ಇತರ ಎಲ್ಲ ಆತ್ಮೀಯರನ್ನು ಹೃತ್ಪೂರ್ವಕ ನೆನೆಯುತ್ತೇವೆ.

ನಮಸ್ಕಾರ.

೧ ಸಪ್ಟಂಬರ್ ೨೦೦೮
ಹೂಮನೆ, ಧಾರವಾಡ-೪

ಸಿದ್ಧಲಿಂಗ ಪಟ್ಟಣಶೆಟ್ಟಿ
ಹೇಮಾ ಪಟ್ಟಣಶೆಟ್ಟಿ

ಅಪ್ಪ – ಅಮ್ಮ

ಎಸ್. ಆರ್. ಗುಂಜಾಳ

ನನ್ನ ಜನ್ಮಸ್ಥಳ ಕುಮಾರವ್ಯಾಸನ ಕೋಳಿವಾಡ. ನನ್ನ ಅಪ್ಪ ರಾಯಪ್ಪ, ಅಮ್ಮ ರುದ್ರಮ್ಮ ಮಧ್ಯಮ ವರ್ಗದ ಕುಟುಂಬಕ್ಕೆ ಸೇರಿದವರು. ನನ್ನ ಜನನ ತಾರೀಖು ೨೫-೬-೧೯೩೨ ಎಂದು ಶಾಲಾ ರಜಿಸ್ಟರಿನಲ್ಲಿ ದಾಖಲಾಗಿದೆ. ನಾನು ಒಂದು ವರುಷದ ಮಗುವಾಗಿದ್ದಾಗ ನನ್ನ ತಂದೆ ತೀರಿಹೋದರೆಂದು ನನ್ನ ಅಮ್ಮ (ಅವ್ವ) ದುಃಖದಿಂದ ನನಗೆ ತಿಳಿವಳಿಕೆ ಬಂದ ನಂತರ ಹೇಳಿದ ಮಾತು. ಹೀಗಾಗಿ ನನ್ನ ಅಪ್ಪ ನನಗೆ ಒಬ್ಬ ಅದೃಶ್ಯಮೂರ್ತಿ. ಅವ್ವ ಹೇಳಿದ– ಆಗಾಗ ಹೇಳುತ್ತಿದ್ದ– ಶಬ್ದಚಿತ್ರಗಳಿಂದ ನಾನು ಊಹಿಸಿಕೊಂಡದ್ದು ಹೀಗೆ:

ಅವನೊಬ್ಬ ಸುಂದರ ಪುರುಷ. ಮೂರು–ನಾಲ್ಕು ಇಯತ್ತೆ ಶಿಕ್ಷಣ ಪಡೆದವ. ಒಕ್ಕಲುತನ ಮೂಲೋದ್ಯೋಗ. ಅವಿಭಕ್ತ ಕುಟುಂಬ. ಅವನಿಗೊಬ್ಬ ಅಣ್ಣ. ಅವನ ಮದುವೆಯಾಯಿತು. ಅನಂತರ ಏಳು ವರುಷಗಳು ಕಳೆಯುವಷ್ಟರಲ್ಲಿ ನನ್ನ ಅಪ್ಪನ ಮದುವೆಯಾಯಿತು (೧೯೨೫?). ಹೆಂಡಂದಿರ ಕಾಟದಿಂದ ಕುಟುಂಬ ಒಡೆದು ಎರಡಾಯಿತು. ನನ್ನ ಅಪ್ಪ–ಅಮ್ಮ ಸ್ವತಂತ್ರರಾದರು. ಹೊಲ–ಮನೆ ಇಬ್ಭಾಗವಾದವು. ಊರ ಹಿರಿಯರು ಮಾಡಿದ ಕೃಷ್ಣಸಂಧಾನ ಫಲಿಸಲಿಲ್ಲ.

ಇದೇ ಸಮಯಕ್ಕೆ ಊರಿಗೆ ಬರಗಾಲದ ಬಿಸಿ ತಟ್ಟಿತು. ಬದುಕು ಕಷ್ಟಮಯವಾಯಿತು. ಜೀವನ ನಿರ್ವಹಣೆಗಾಗಿ ನಿರ್ವಾಹವಿಲ್ಲದೆ ತಾಯಿ ತನ್ನ ತವರು ಮನೆಯಿಂದ ತಂದ ಹಿಂಡುವ ಎಮ್ಮೆಯನ್ನು ಅಪ್ಪ ಮಾರಿದರು. ಅದರ ಹೈನದಿಂದಲೇ ಅಷ್ಟಿಷ್ಟು ಆದಾಯ ಮನೆಯನ್ನು ನಡೆಸಲು ಉಪಯೋಗವಾಗುತ್ತಿತ್ತು. ಅಪ್ಪ ಮಾರಿದ್ದರಿಂದ ಅಮ್ಮನ ಕೈ ಪೂರ್ಣ ಕಟ್ಟಾಯಿತು. ಆದರೂ ಬದುಬೇಕಲ್ಲ? ಅಮ್ಮ ಕೂಲಿ ಮಾಡುವ ಪ್ರಸಂಗ ಬಂತು. ಬರಗಾಲವೆಂದ ಮೇಲೆ ಕೂಲಿಗಾಗಿ ಕರೆಯುವರಾರು? ಹಣದ ಅಡಚಣೆ ಅತಿಯಾಯಿತು. ಸತಿ–ಪತಿಗಳಿಬ್ಬರೂ ಕೂಡಿ ಚರ್ಚಿಸಿದರು. ಸಾಲ ಮಾಡಬೇಕೆಂದರು. ತಮ್ಮ ಪಾಲಿಗೆ ಬಂದ ಜಮೀನಿನ ಒಂದಿಷ್ಟು ಭಾಗವನ್ನು ಮಾರಬೇಕೆಂದರು. ಆದರೆ ಬರಗಾಲದಲ್ಲಿ ಸಾಲ ಕೊಡುವವರಾರು? ಹೊಲ ಖರೀದಿಸುವವರಾರು? ನಾಲ್ಕೂ ನಿಟ್ಟಿನಿಂದ ಆರ್ಥಿಕ ದಿಗ್ಬಂಧನವಾಯಿತು.

ನನ್ನ ಅಮ್ಮನಿಗೆ ಮದುವೆಯ ಕಾಣಿಕೆಯಾಗಿ ಆಕೆಯ ತಂದೆ ಕೊಟ್ಟಿದ್ದ ಎರಡು ತೊಲೆಯ ಬಂಗಾರದ ಟೀಕೆ(ಆಭರಣ)ಯನ್ನು ಮಾರಿ ಅಥವಾ ಒತ್ತೆಯಿಟ್ಟು ಹಣ ತರುವಂತೆ ಅವ್ವ ನನ್ನ ಅಪ್ಪನಿಗೆ ಸೂಚಿಸಿದಳು. ಅದನ್ನು ಅಪ್ಪನ ಕೈಯಲ್ಲಿ ಕೊಡುವಾಗ ಅವ್ವನ ಕಣ್ಣಲ್ಲಿ ನೀರು ಸುರಿದವು. ಅದನ್ನು ಅಣ್ಣಿಗೇರಿಯ ಸರಾಫನಲ್ಲಿ ಒತ್ತೆಯಿಟ್ಟು ೩೦ ರೂ. ಹಣ ಸಾಲ ಪಡೆಯುವಾಗ ಅಪ್ಪನ ಕಣ್ಣಲ್ಲಿ ನೀರು ಸುರಿದವು. ಮುಂದೆ ಬಡತನದ ನಿಮಿತ್ತ ಅವಧಿಗೆ ಸರಿಯಾಗಿ ಸಾಲ ಮುಟ್ಟಿಸಲಾಗಲಿಲ್ಲ. ತನ್ನ ತಂದೆಯು ಪ್ರೀತಿಯ ಕಾಣಿಕೆಯಾಗಿ ಕೊಟ್ಟ ಒಂದೇ ಒಂದಾದ ಚಿನ್ನದ ಆಭರಣ ಮರೆಯಾಗಿ ಹೋದಾಗ ತಾಯಿ ದುಃಖಿಸಿದಳು. ಅಪ್ಪ ಸಂತೈಸಿದ. ಮತ್ತೊಂದು ಬಂಗಾರದ ಟೀಕೆಯನ್ನು ಮಾಡಿಸಿಕೊಡುವದಾಗಿ ಧೈರ್ಯ ಹೇಳಿದ. ಅವ್ವ ಆಗಾಗ ನನ್ನೆದುರು "ಗಂಡನ ಮುಂದೆ ಯಾವ ಆಭರಣ ಹೆಚ್ಚಿನದೆನಿಸೀತು" ಎಂದು ಹೇಳುತ್ತಿದ್ದಳು. ಅಪ್ಪ ಅಮ್ಮನ ಮೇಲೆ

ಹೆಚ್ಚಿನ ಪ್ರೀತಿಯನ್ನಿಟ್ಟಿದ್ದ, ನನ್ನ ತಾಯಿಯದು ಅಪ್ಪನ ಮೇಲೆ ಇನ್ನೂ ಅಧಿಕ ಪ್ರೇಮ.

ಅಪ್ಪ-ಅಮ್ಮ ಕೂಡಿ ಬಾಳಿದ್ದು ಕೇವಲ ೭-೮ ವರುಷ ಮಾತ್ರ. ನಾನು ಹುಟ್ಟಿದ್ದು ೧೯೩೨ ರಲ್ಲಿ. ಬಡತನದ ಬೇಗೆಯಿಂದ ಬಸವಳಿದ ನನ್ನ ಅಪ್ಪ ೧೯೩೩ ರಲ್ಲಿ ಅಸು ನೀಗಿದರೆಂದು ತಾಯಿ ಹೇಳುತ್ತಿದ್ದರು. ಅವರು ಸಂಗೀತಗಾರರು. ಹಳ್ಳಿಯ ದೊಡ್ಡಾಟಗಳಲ್ಲಿ ವೇಷ ಧರಿಸುತ್ತಿದ್ದರು. ಅವರು ಧರಿಸುತ್ತಿದ್ದ ತಲೆಕಿರೀಟ ಮತ್ತು ಭುಜಕೀರೀಟಗಳನ್ನು ನಾನು ೬-೭ ವರ್ಷದವನಾದಾಗ ಧರಿಸಿಕೊಂಡು ಓಣಿ ಓಣಿ ತಿರುಗುತ್ತಿದ್ದೆ. ನನ್ನನ್ನು ನೋಡಿ ತಾಯಿ ಹರ್ಷಿಸುತ್ತಿದ್ದಳು. ಅದೇ ಸಮಯಕ್ಕೆ ದುಃಖಿಸುತ್ತಿದ್ದಳು. ಯಾಕೆಂದು ಆಗ ನನ್ನ ಬಾಲಭಾವಕ್ಕೆ ತಿಳಿಯುತ್ತಿದ್ದಿಲ್ಲ.

ವಿಧವೆಯಾದ ಅವ್ವನ ವನವಾಸ ಅಪ್ಪ ತೀರಿಕೊಂಡ ಮರುದಿನವೇ ಪ್ರಾರಂಭವಾಯಿತು. ತಂದೆಯಿಲ್ಲದೆ ತಬ್ಬಲಿಯಾದ ನನ್ನನ್ನು ಉಡಿಯಲ್ಲಿ ಇಟ್ಟುಕೊಂಡು ಸಂರಕ್ಷಿಸಿದ ಆಕೆಯ ರೀತಿಯನ್ನು ನೆನೆಸಿಕೊಂಡಾಗಲೆಲ್ಲ ನನ್ನ ಕಣ್ಣುಗಳು ತೇವಗೊಳ್ಳುತ್ತಿದ್ದವು.

ಆಕೆಯದು ಆಕರ್ಷಕ ಬಣ್ಣ. ಬಟ್ಟಗಣ್ಣಿನ ಚೆಲುವೆ. ಅಪ್ಪನನ್ನು ಕಳೆದುಕೊಂಡಾಗ ಆಕೆಗೆ ೨೫ ವರುಷದ ಹರೆಯ. ಅಪ್ಪನ ಮರಣದ ನಂತರ ಅಪ್ಪನ ಅಣ್ಣ-ನನ್ನ ದೊಡ್ಡಪ್ಪ- ಅಪ್ಪನ ಹಿಸ್ಸೆಗೆ ಬಂದಿದ್ದ ಹೊಲವನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡ. ಅಬಲೆಯಾದ ಅವ್ವ ನಿರುಪಾಯಳಾಗಿ ಅವನ ಮನೆಯಲ್ಲಿ ನನ್ನೊಂದಿಗೆ ಇರಬೇಕಾಯಿತು. ಆಕೆ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಂಡು ದಾಸ್ಯತ್ವಕ್ಕೆ ಶರಣಾಗುವದು ಅನಿವಾರ್ಯವಾಯಿತು. ಅಂದಿನಿಂದ ಅವಳ ನರಕಯಾತನೆ ಪ್ರಾರಂಭವಾಯಿತು (೧೯೩೩). ನಾನು ಬಿ.ಎ. ಪದವೀಧರನಾಗುವ ವರೆಗೆ (೧೯೫೫) ಆಕೆ ಜೀವನವನ್ನು ಅತ್ಯಂತ ನಿಕೃಷ್ಟ ಸ್ಥಿತಿಯಲ್ಲಿ ಕಳೆದುದರ ಸ್ಪಷ್ಟ ಚಿತ್ರ ನನ್ನ ಮನದಲ್ಲಿ ಇಂದಿಗೂ ಅಚ್ಚೊತ್ತಿ ನಿಂತಿದೆ.

ನನ್ನ ದೊಡ್ಡಪ್ಪನ ಹೆಂಡತಿಯನ್ನು ನಾನಿಂದು ಯಾರಿಗಾದರೂ ಹೋಲಿಸಬೇಕೆಂದರೆ ವಿಶ್ವಾಮಿತ್ರನು ನೇಮಿಸಿದ 'ನಕ್ಷತ್ರಕ'ನಿಗೆ ಹೋಲಿಸಬಹುದು. ನನ್ನ ಅವ್ವ ನಸುಕಿನಲ್ಲಿ ಏಳಬೇಕು. ಪಾತ್ರೆ ಪಡಗ ತೊಳೆದುಕೊಂಡು ಅಡಿಗೆಗೆ ಅಣಿಯಾಗಬೇಕು. ಊರ ಹೊರಗಿನ ಬಾವಿಯಿಂದ ಕೊಡದಲ್ಲಿ ನೀರು ಹೊತ್ತು ತರಬೇಕು. ಹೊಲಕ್ಕೆ ಹೋಗಿ ಕಳೆ ತೆಗೆಯುವದು, ಹತ್ತಿ ಬಿಡಿಸುವುದು- ಇತ್ಯಾದಿ ಒಕ್ಕಲುತನದ ಕೆಲಸಗಳನ್ನು ಮಾಡಬೇಕು. ಮನೆಗೆ ಬರುವಾಗ ದನಗಳಿಗೆ ಹುಲ್ಲಿನ ಹೊರೆಯನ್ನು ಹೊತ್ತು ತರಬೇಕು. ಕುಟ್ಟುವ-ಬೀಸುವ ಕಾರ್ಯವನ್ನು ಆಕೆಯೇ ಮಾಡಿ ಅಡಿಗೆಯನ್ನು ಸಿದ್ಧಪಡಿಸುತ್ತಿದ್ದಳು. ತಾನು ಊಟ ಮಾಡಿ ಮಲಗಬೇಕಾದರೆ ಮಧ್ಯರಾತ್ರಿಯಾಗುತ್ತಿತ್ತು.

ನಾನು ಅವ್ವನ ಜೀವ ತಂತುವಾಗಿದ್ದೆ. ಆಕೆಯ ಎರಡೂ ಕಣ್ಣು ನಾನೇ ಆಗಿದ್ದೆ. ನಾನು ಬಾಲ್ಯದಲ್ಲಿ ಬಹಳ ಹಟಮಾರಿ. ನನಗೆ ಬೇಡಿದ ತಿಂಡಿ ಸಿಗದಿದ್ದರೆ, ಕೇಳಿದ ಆಟಿಗೆ ಸಾಮಾನು ದೊರೆಯದಿದ್ದರೆ ತಾಸುಗಟ್ಟಲೆ ಅಳುತ್ತ ಪೀಡಿಸುತ್ತಿದ್ದೆ. ಆದರೆ ನನ್ನ ಅವ್ವ ಎಳ್ಳಷ್ಟೂ ಸಿಟ್ಟಿಗೇಳುತ್ತಿರಲಿಲ್ಲ. ನನ್ನ ಬೇಡಿಕೆಗಳನ್ನು ಪೂರೈಸಲು ಅಸಹಾಯಕಳಾಗಿದ್ದಳು. ಅದಕ್ಕಾಗಿ ದುಃಖಿಸುತ್ತಿದ್ದಳು. ಆದರೆ ನನಗೆ ಪೆಟ್ಟು ಕೊಟ್ಟದ್ದಾಗಲೀ, ಸಿಟ್ಟು ಮಾಡಿದ್ದಾಗಲೀ ನನ್ನ ನೆನಪಿನಲ್ಲಿಲ್ಲ. ಆಕೆ ನನ್ನ ಮೇಲೆ ಪ್ರೀತಿಯ ಮಳೆಯನ್ನೇ ಸುರಿಸಿರುವಳು.

ಅವ್ವ ನಿರಕ್ಷರಿ, ಮುಗ್ಧೆ. 'ನಾನು ಆದಷ್ಟು ಬೇಗ ದೊಡ್ಡವನಾಗಬೇಕು; ಮದುವೆಯಾಗ ಬೇಕು. ಮೊಮ್ಮಕ್ಕಳಾಗಬೇಕು' ಎಂಬ ಆಸೆ ಅವಳಲ್ಲಿ ಬಲವತ್ತರವಾಗಿತ್ತು. ಯಾವುದಕ್ಕೂ ಸಮಯ, ವಯಸ್ಸು ಬೇಕೆಂದು ಬುದ್ಧಿ ಬೆಳೆದ ನಾವೆಲ್ಲ ತಾರ್ಕಿಕವಾಗಿ ಹೇಳುತ್ತೇವೆ.

ಆದರೆ ಮುಗ್ಧ ಸ್ವಭಾವದ ನನ್ನ ಅವ್ವ ಆ ಎಲ್ಲ ಕನಸನ್ನು ಕಾಣುತ್ತಿದ್ದುದರಲ್ಲಿ ಆಶ್ಚರ್ಯವೇನಿಲ್ಲ.

ನಾನು ಬಿ.ಎ. ಪದವೀಧರನಾದ ಮೇಲೆ ತಾಯಿಗೆ ಇರಲು ಒಂದು ಕೋಣೆಯನ್ನು ಸಿದ್ಧಪಡಿಸಿಕೊಟ್ಟೆ. ಹೊಲವನ್ನು ಹರಗಿ–ಬಿತ್ತಿಸಿ ಕೊಟ್ಟೆ. ಸ್ವಂತ ಮನೆಯಲ್ಲಿದ್ದು ಸ್ವಂತ ಹೊಲದಲ್ಲಿ ದುಡಿಯುವದು ಸಂತಸ ತಂದಿತು. ಮುಂದೆ ಎಂ.ಎ. ಅಭ್ಯಾಸ ಮುಗಿಸಿ ಹೈಸ್ಕೂಲ ಶಿಕ್ಷಕನಾದೆ. ಆಗ ನನ್ನದು ಕಡಿಮೆ ಪಗಾರವಾಗಿದ್ದರೂ ಮಿತವ್ಯಯ ಮಾಡಿ ಹಣ ಉಳಿಸಿದೆ. ನನ್ನ ಮನಸ್ಸಿನ ಭಿತ್ತಿಯ ಮೇಲೆ ಸ್ಪಷ್ಟ ಚಿತ್ರವನ್ನು ನಿರಂತರ ನೆನಪಿಸಿಕೊಳ್ಳುತ್ತಿದ್ದ ಅವ್ವನ ಚಿನ್ನದ ಟೀಕೆಯನ್ನು ಹೊಸದಾಗಿಕೊಂಡು ಕೊಡಿಸುವ ಕಾಲ ಕೂಡಿಬಂತು. ಆ ಆಭರಣವನ್ನು ತಂದು ಆಕೆಯ ಕೈಯಲ್ಲಿ ಕೊಟ್ಟಾಗ ಕಣ್ಣೀರು ಸುರಿಸಿದಳು. ಅವು ಅವಳ ಆನಂದಾಶ್ರು. ಅವ್ವನ ಬಹುದಿನದ ಆಸೆಯನ್ನು ಈಡೇರಿಸಿದ ಸಂತೃಪ್ತಿ ನನಗಾಯಿತು.

ಶಿಕ್ಷಕ ನೌಕರಿಯಲ್ಲಿ ಆರ್ಥಿಕ ಸಂಕಷ್ಟಕ್ಕೆ ಮೋಕ್ಷವಿಲ್ಲೆಂದು ಬಗೆದು ಗ್ರಂಥಾಲಯ ವಿಜ್ಞಾನದಲ್ಲಿ ಪದವಿ ಪಡೆಯ ಬಯಸಿ, ದಿಲ್ಲಿ ವಿಶ್ವವಿದ್ಯಾಲಯಕ್ಕೆ ಹೋದೆ (೧೯೬೧). ನಾನು ದಿಲ್ಲಿಯಿಂದ ಅವ್ವನಿಗೆ ನನ್ನ ಕ್ಷೇಮ ಸಮಾಚಾರ ವಿವರಿಸಿ ಪತ್ರ ಬರೆಯುತ್ತಿದ್ದೆ. ನನ್ನ ಪತ್ರ ಮುಟ್ಟಿದ ಬಗ್ಗೆ ತಿಳಿಸಲು ೮–೧೦ ಸ್ವವಿಳಾಸದ ಪೋಸ್ಟ್ ಕಾರ್ಡುಗಳನ್ನು ಕೊಟ್ಟು ಹೋಗಿದ್ದೆ. ಕೋಳಿವಾಡದ ಪರಿಚಿತ ಶಿಕ್ಷಕರಿಂದ ಉತ್ತರ ಬರೆಯಿಸಿ ಟಪ್ಪಾಲ ಪೆಟ್ಟಿಗೆಯಲ್ಲಿ ಹಾಕುವದನ್ನು ರೂಢಿಸಿಕೊಂಡಿದ್ದಳು. ಒಮ್ಮೆ ಆ ಶಿಕ್ಷಕರು ಲಭ್ಯವಾಗದಿದ್ದಾಗ ನಮ್ಮ ಮನೆಯ ಹತ್ತಿರ ವಾಸವಾಗಿದ್ದ ಒಬ್ಬ ಅರ್ಧಾಕ್ಷರಿಯಿಂದ (ಅಲ್ಪ ಸ್ವಲ್ಪ ಕಲಿತವ) ಬರೆಯಿಸಿ ಪತ್ರ ರವಾನೆ ಮಾಡಿದರು. ಅದರ ಒಕ್ಕಣಿಕೆ ಹೀಗಿತ್ತು :

ಚಿರಜಿವಿ ಶಿವಣ್ಣನಿಗೆ
ಎಳ್ಳ ಅಮಾಸಿ ಬಂದೈತಿ ಎಳ ಹೋಳ್ಗಿ ಮಾಡೀನಿ.
ಬುದ್ವಾರ ದಡಕ್ಕನ ಬಂದು ಉಂಡೋಹೋಗು.

ನಿನ್ನ ತಾಯಿ ರುದ್ರಮ್ಮ.

ಈ ಪತ್ರ ದಿಲ್ಲಿಯನ್ನು ತಲುಪಿದಾಗ 'ಎಳ್ಳ ಅಮಾಸಿ' ಮುಗಿದು ಎಂಟು ದಿನಗಳಾಗಿದ್ದವು. ಅಲ್ಲಿದ್ದ ನನ್ನ ಇನ್ನಿಬ್ಬರು ಸ್ನೇಹಿತರಾದ ಎಂ.ಆರ್. ಕುಂಭಾರ ಮತ್ತು ಎನ್.ಡಿ. ಬಗರಿ ಇವರ ಕೈಗೆ ಆ ಪತ್ರ ಸಿಕ್ಕಿತು. ಅವರು ಅದನ್ನೋದಿ ಮನಸಾರೆ ನಕ್ಕರು. "ಏ ಗುಂಜಾಳ, ಕೋಳಿವಾಡಕ್ಕೆ ಧಡಕ್ಕನ ಒಂದಿನಾ ದಿಲ್ಲಿಯಿಂದ ಹೋಗಿ ನಿಮ್ಮ ಅವ್ವ ಮಾಡಿಟ್ಟ ಎಳ್ಳ ಹೋಳಿಗಿ ತಿಂದ ಬರೋಣ ನಡಿ" ಎಂದು ಹಾಸ್ಯ ಮಾಡಿ ನಕ್ಕರು. ತಾಯಿಯ ಪ್ರೇಮರಸದ ಕುಂಭವನ್ನೇ ಹೊತ್ತು ತಂದ ಆ ಎರಡು–ಮೂರು ವಾಕ್ಯಗಳ ಪತ್ರವನ್ನೋದಿ ನನಗೆ ಆನಂದಾಶ್ರುಗಳು ಉಕ್ಕಿಬಂದವು. ಹೃದಯ ಹರ್ಷಪುಲಕಿತವಾಗಿತ್ತು. ಸಾವಿರಾರು ಮೈಲು ಅಂತರ ಕೋಳಿವಾಡ ಮತ್ತು ದಿಲ್ಲಿಯ ನಡುವೆ ಇದೆಯೆಂಬುದನ್ನು ಅರಿಯದ ನಿಷ್ಕಪಟ ಸಾತ್ವಿಕ ಹೃದಯ ನನ್ನ ಅವ್ವನದು.

ಅವ್ವನ ಪ್ರೇಮರಕ್ಷೆಯಲ್ಲಿ ನಾನು ಸಂಸ್ಕೃತಿಯ ಅರ್ಥ ಮಾಡಿಕೊಂಡಿದ್ದೇನೆ. ಆಕೆ ಕುಟ್ಟು ಬೀಸುವಾಗ ಹಾಡುತ್ತಿದ್ದ ಅನೇಕ ಜಾನಪದ ಪದ್ಯಗಳು ಇನ್ನೂ ನನ್ನ ನೆನಪಿನಂಗಳದಲ್ಲಿವೆ.

ನನ್ನ ಹುಟ್ಟೂರಲ್ಲಿಯ ಗ್ರಾಮದೇವತೆ ಅತ್ಯಂತ ಪ್ರಸಿದ್ಧ. ನಮ್ಮೂರ ಸುತ್ತಲಿನ ಹಳ್ಳಿಯ ಭಕ್ತರು ದೇವತೆಗೆ ನಡೆದುಕೊಳ್ಳುತ್ತಾರೆ. ಹರಕೆ ಹೊರುತ್ತಾರೆ. ಊರ ಜನರೆಲ್ಲ ವರ್ಷದಲ್ಲಿ ಒಮ್ಮೆಯಾದರೂ ಮಂದಿರಕ್ಕೆ ಹೋಗಿ ದೇವಿದರ್ಶನ ಪಡೆಯಲೇಬೇಕೆಂಬ ನಂಬಿಕೆ ಇದೆ. ಮಹಾನವಮಿ ಹಬ್ಬದ ಒಂಬತ್ತು ದಿನ ಊರ ಮಹಿಳೆಯರು ದೇವಿ ಹೆಸರಿನ ಮೇಲೆ

ಉಪವಾಸ ಮಾಡುತ್ತಾರೆ (ಅಸ್ಪೃಶ್ಯರನ್ನು ಹೊರತುಪಡಿಸಿ). ಅವರಲ್ಲಿ ಅವ್ವನೂ ಒಬ್ಬಾಕೆ. ನಗರವಾಸಿಯಾಗಿದ್ದ ನಾನು ರಜೆ ಸಿಕ್ಕ ರವಿವಾರ ಕೋಳಿವಾಡಕ್ಕೆ ಹೋಗಿ ತಾಯಿಯೊಂದಿಗೆ ಒಂದು ದಿನ ಇದ್ದು ಕುಂಬಳ ಗಾರಿಗೆ, ಎಳ್ಳು ಹೋಳಿಗೆ ತಿಂದು ಬರುವದು ಸಾಮಾನ್ಯ. ತಾಯಿಯ ಆತಿಥ್ಯದಲ್ಲಿ ದಿನ ಕಳೆದು ನಗರಕ್ಕೆ ಮರಳಿ ಹೊರಟಾಗ ನನ್ನ ಬಂಧು-ಬಳಗದ ಒಬ್ಬಿಬ್ಬರಾದರೂ ಅಲ್ಲಿ ಇರುತ್ತಿದ್ದು- "ದೇವಿಯ ದರ್ಶನ ತೆಗೆದುಕೊಂಡು ಬಂದಿಯಾ?" ಎಂದು ಪ್ರಶ್ನಿಸುತ್ತಿದ್ದರು.

"ದೇವಿಯ ದರ್ಶನಕ್ಕಾಗಿಯೇ ಈ ಊರಿಗೆ ಬರುತ್ತೇನೆ. ದೇವಿ ದರ್ಶನ ತೆಗೆದುಕೊಳ್ಳದೇ ಮರಳಿ ಹೋಗುವದು ಹೇಗೆ?" ಎಂದು ಉತ್ತರಿಸುತ್ತಿದ್ದೆ.

"ಊರಿಗೆ ಬಂದವನು ಮನೆಯಲ್ಲೇ ಕುಳಿತಿರುವೆ. ದೇವಿ ಗುಡಿಗೆ ಯಾವಾಗ ಹೋಗಿ ಬಂದೆ?" ಎಂದು ಒಬ್ಬರಾದರೂ ಕೇಳುತ್ತಿದ್ದರು. ಮನೆಯಲ್ಲಿಯೇ ಆಡಿಕೊಂಡಿದ್ದ ನನ್ನ ಅಣ್ಣ(ದೊಡ್ಡಪ್ಪನ ಮಗ)ನ ಮಗಳು ಸಂಶಯ ದೃಷ್ಟಿಯಿಂದ ವೀಕ್ಷಿಸುತ್ತಿದ್ದಳು.

"ಊರಿಗೆ ಬಂದಾಗಿನಿಂದ ಆ ದೇವಿಯ ಹತ್ತಿರವೇ ಇದ್ದೇನೆ. ಆಕೆಯೊಂದಿಗೇ ಮಾತಾಡಿದ್ದೇನೆ. ಆಕೆ ಕೊಟ್ಟ ಪ್ರಸಾದವನ್ನು ಸ್ವೀಕರಿಸಿದ್ದೇನೆ..." ಎನ್ನುತ್ತಾ ನನ್ನನ್ನು ಬೀಳ್ಕೊಡಲು ಎದ್ದು ನಿಂತ ಅವ್ವನ ಪವಿತ್ರ ಪಾದಗಳಿಗೆ ಎರಗುತ್ತಿದ್ದೆ. ನನ್ನ ಪೂಜ್ಯ ತಾಯಿ ಹರಸುತ್ತಿದ್ದಳು. ತಾಯಿಯನ್ನೇ ದೇವಿಯೆಂದು ತಿಳಿದ ನನ್ನನ್ನು ಕಂಡು ನೆರೆದು ಬಂದ ಬಂಧುಗಳು ನಗುತ್ತಿದ್ದರು. ಆದರೆ ನನ್ನ ಜೀವಂತ ದೇವಿಯ ಕಣ್ಣುಗಳಿಂದ ಆನಂದಬಾಷ್ಪಗಳು ಉದುರುತ್ತಿದ್ದವು. "ಮತ್ತ ಲಗೂನ ಬಾ ಶಿವಣ್ಣ" ಎಂದು ದೇವಿ ಹರಸುತ್ತಿದ್ದಳು. ಹರಕೆಯ ಭಾರದಲ್ಲಿ ನಗರದತ್ತ ಹೆಜ್ಜೆ ಹಾಕುತ್ತಿದ್ದೆ.

ನಾನು ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಹುದ್ದೆಯಲ್ಲಿದ್ದಾಗ ನನ್ನ ಅವ್ವನ ಮುಖದಲ್ಲಿ ಮುಪ್ಪಿನ ಲಕ್ಷಣಗಳು ಕಾಣಹತ್ತಿದವು. ನಾನು ನಿವೃತ್ತನಾಗುವ ಐದು ವರುಷ ಮುಂಚೆ ಗುಲಬರ್ಗಾದಲ್ಲಿ ನನ್ನ ಜೊತೆಯಲ್ಲಿಯೇ ಅವ್ವ ವಾಸವಾಗಿದ್ದಳು. ನನ್ನ ೬೦ ವರ್ಷಕ್ಕೆ ನಿವೃತ್ತನಾದೆ (೧೯೯೨). ಆಗ ಆಕೆಗೆ ಸುಮಾರು ೮೭ ವರುಷಗಳಾಗಿದ್ದವು. ಆ ಸಮಯಕ್ಕೆ ಪಾರ್ಶ್ವವಾಯು ರೋಗಕ್ಕೆ ತುತ್ತಾದಳು (೧೯೮೯). ಅಲೋಪತಿ, ಆಯುರ್ವೇದ, ಹೋಮಿಯೋಪತಿ, ಗಾವ್ಟಿ ಔಷಧಿಗಳನ್ನು ವೈದ್ಯರ ಸಲಹೆಯಂತೆ ಕೊಟ್ಟು ಉಪಚರಿಸಿದೆ. ಅವು ಹೆಚ್ಚು ಪ್ರಯೋಜನ ಬೀಳಲಿಲ್ಲ. ಅಸಹಾಯಕಳಾದಳು.

ನನ್ನ ನಿವೃತ್ತಿ ನಿಮಿತ್ತ ವಿದ್ಯಾರ್ಥಿ ಮಿತ್ರರು ನನಗೊಂದು 'ಗೌರವಗ್ರಂಥ'ವನ್ನು ಅರ್ಪಿಸಿದ್ದಾರೆ. ನಾನು ೧೯೫೪ ರಿಂದ ಬರೆಯುತ್ತ ಬಂದ 'ದಿನಚರಿ'ಗಳನ್ನು ಅವಲೋಕಿಸಿ ನನ್ನ ವಿದ್ಯಾರ್ಥಿ ನರಸಿಂಗ ಬೇಂದ್ರೆ 'ದಿನಚರಿಗಳಲ್ಲಿ ಕಂಡ ಪ್ರೊ. ಗುಂಜಾಳರು' ಎಂಬ ಲೇಖನ ಬರೆದಿದ್ದಾನೆ. ಅದರಲ್ಲಿ ತನ್ನ ಮನಸ್ಸಿಗೆ ಹಿಡಿಸಿದ ಕೆಲವು ಉಕ್ತಿಗಳನ್ನು ಎತ್ತಿ ಕೊಟ್ಟಿದ್ದಾನೆ. ಪಾರ್ಶ್ವವಾಯು ರೋಗಪೀಡಿತ ನನ್ನ ತಾಯಿಯ ಸೇವೆ ಮಾಡಿದ ವಿಷಯವನ್ನು ಎತ್ತಿಕೊಟ್ಟಿದ್ದಾನೆ (ಪುಟ : ೪೧) :

'ಗುಲಬರ್ಗಾ

೧೪-೨-೧೯೮೯

ತಾಯಿಯ ಸೇವೆಯನ್ನು ಭಕ್ತಿಗೌರವಗಳಿಂದ ಮಾಡುತ್ತಿದ್ದೇನೆ. ಬೆಳಗಿನ ೫ ಗಂಟೆಗೆ ಎದ್ದು ತಾಯಿಯ ಮೂತ್ರವನ್ನು ಬಚ್ಚಲಲ್ಲಿ ಸ್ವಚ್ಛಮಾಡುತ್ತೇನೆ. ಆಮೇಲೆ ಪಾಯಖಾನೆಗೆ ಕರೆದೊಯ್ದು ಮಲ-ಮೂತ್ರ ಮಾಡಿಸುತ್ತೇನೆ. ಕಾಲಗೇಟ್ ಪೇಸ್ಟಿನಿಂದ ಹಲ್ಲು ತಿಕ್ಕಿಸುತ್ತೇನೆ.

ಬಿಸಿ ನೀರಿನಿಂದ ಬಾಯಿ ತೊಳೆಯಿಸಿ ಜೇನುತುಪ್ಪದಲ್ಲಿ ಔಷಧಿ ಕಲಸಿ ನಾಲಿಗೆಗೆ ಚೀಪಿಸುತ್ತೇನೆ. ಅರ್ಧತಾಸಿನ ನಂತರ ಬಿಸಿ ಹಾಲಿನಲ್ಲಿ ತತ್ತಿ ಹಾಕಿ (ಪಾರ್ಶ್ವವಾಯು ರೋಗಿಗೆ ಕೊಡಲು ವೈದ್ಯರು ಹೇಳಿದ ಪ್ರಕಾರ) ಸಕ್ಕರೆ ಕಲಸಿ ಕುಡಿಸುತ್ತೇನೆ. ಅನಂತರ ೯ ಗಂಟೆಗೆ ಕೈಕಾಲು ಮೋರೆ ತೊಳೆಯಿಸುತ್ತೇನೆ. ೧೦ ಗಂಟೆಗೆ ಶಾಂತಾ ಅಡಿಗೆ ಮಾಡಿ ಉಣ್ಣಿಸುತ್ತಾಳೆ. ಸಂಜೆ ೫ ಗಂಟೆಗೆ ಪುನಃ ಮೈ ಕೈ ಕಾಲಿಗೆ ಆಯುರ್ವೇದ ಎಣ್ಣೆ ತಿಕ್ಕುತ್ತೇನೆ. ಕುಪ್ಪಸ ತೊಡಿಸುತ್ತೇನೆ. ಊಟ ಮಾಡಿಸಿ ಮಲಗಿಸುತ್ತೇನೆ. ಉಪಚಾರದಿಂದಾಗಿ ಬಹಳಷ್ಟು ಗುಣವಾಗಿದೆ. ಅಡ್ಡಾಡುವಂತಾಗಿದ್ದಾಳೆ. ತಾಯಿಯೇ ದೇವರೆಂದು ಹಿರಿಯರು ಹೇಳಿದ್ದಾರೆ. ಹೌದು ಆಕೆ ನನ್ನ ಸೇವೆಯನ್ನು ಬಹಳಷ್ಟು ಮಾಡಿದ್ದಾಳೆ. ಆಕೆ ನಮ್ಮ ಪಾಲಿನ ದೇವರು.'

ಇಂದಿನ ವರೆಗೂ (೨೦೦೮) ನಾನು ನನ್ನ ಡೈರಿ ಬರೆಯುತ್ತಲೇ ಬಂದಿದ್ದೇನೆ. ಅವುಗಳಲ್ಲಿ ಅಲ್ಲಲ್ಲಿ ನನ್ನ ದೇವತೆಯು ಕಾಣಿಸಿಕೊಳ್ಳುವದುಂಟು.

ನನ್ನ ಅವ್ವ ಜೀವಿಸಿರುವಾಗಲೇ, ಆಕೆ ಅಖಂಡ ಜೀವನವನ್ನು ಸವೆಯಿಸಿದ ಹೊಲದಲ್ಲಿಯೇ ಹೂಳಬೇಕೆಂದು ಬಯಸಿ ಧಾರವಾಡ ಜಿಲ್ಲಾಧಿಕಾರಿ ಅವರಿಂದ ಒಪ್ಪಿಗೆ ಪತ್ರ ಪಡೆದಿದ್ದೆ. ನನ್ನ ಜೀವಮಾನದ ಸ್ಮರಣೆಗಾಗಿ ಆಕೆಯನ್ನು ಆಕೆಯ ಹೊಲದಲ್ಲಿಯೇ ದಫನ ಮಾಡಿರುವೆ. ಆಕೆಯ ನೆನಪಾದಾಗಲೆ ನನ್ನಲ್ಲಿ ಅರುಣೋದಯವಾಗುತ್ತದೆ. ಆಗ ನನ್ನ ಮನಃಪಟಲದ ಮೇಲೆ ಮೂಡಿನಿಲ್ಲುತ್ತಾಳೆ. ಆಕೆಯ ಹೊಳೆವ ಕಣ್ಣುಗಳು ನನ್ನನ್ನು ನೋಡುತ್ತಿರುವಂತೆ ಭಾಸವಾಗುತ್ತದೆ. ಆಕೆಯ ಮುಗುಳುನಗೆ ನನ್ನಲ್ಲಿ ಸ್ಫೂರ್ತಿಯ ಸೆಲೆಯಾಗಿ ಅರಳುತ್ತದೆ.

ನನ್ನ ಅವ್ವ ನನ್ನ ಮೇಲೆ ಮಮತೆಯ ಮಳೆಯನ್ನೇ ಸುರಿಸಿದ್ದಾಳೆ. ಒಂದು ವರುಷವಲ್ಲ; ಎರಡು ವರುಷವಲ್ಲ; ಆರು ವರುಷವಲ್ಲ; ಅರವತ್ತು ವರುಷ!

ಕಣ್ಮರೆಯಾಗಿ ಹೋದ ನನ್ನ ಅವ್ವನ ಹೆಸರು ಚಿರಂತನ ಸ್ಮರಣೆಯಲ್ಲಿ ಉಳಿಯುವಂತೆ ಏನಾದರೊಂದು ಉತ್ತಮ ಕಾರ್ಯವನ್ನು ಮಾಡಬೇಕೆಂದು ಮನ ಬಯಸಿತು. ಆಕೆ ಸುಮಾರು ಎಪ್ಪತ್ತು ವರುಷ ನಡೆದಾಡಿದ ನನ್ನ ಜನ್ಮಸ್ಥಳದಲ್ಲಿ ಗ್ರಾಮೀಣ ಬಡ, ಬುದ್ಧಿವಂತ ಮಕ್ಕಳಿಗಾಗಿ ಅನುದಾನರಹಿತ ಒಂದು ಪ್ರಾಥಮಿಕ ಶಾಲೆಯನ್ನು ಅವ್ವನ ಸ್ಮಾರಕವಾಗಿ ತೆರೆಯಬೇಕೆಂಬ ಯೋಚನೆ ಮನದಲ್ಲಿ ಸುಳಿಯಿತು. 'ಶ್ರೀಮತಿ ರುದ್ರಮ್ಮ ರಾಯಪ್ಪ ಗುಂಜಾಳ ಚಾರಿಟೇಬಲ್ ಟ್ರಸ್ಟ್ ೨೫ ಜುಲೈ ೧೯೯೫ ರಂದು ಸ್ಥಾಪಿಸಿದೆ. ಕೋಳಿವಾಡದಲ್ಲಿ ನನ್ನ ಹೆಸರಿನಲ್ಲಿದ್ದ ಮನೆ, ಹಿತ್ತಲ ಆಸ್ತಿಯನ್ನು ಟ್ರಸ್ಟಿಗೆ ಕೈವರ್ತಿಸಿದೆ. ಹೊಲವನ್ನು ಮಾರಿ ಬಂದ ಹಣವನ್ನು (ಒಂದು ಲಕ್ಷ) ಟ್ರಸ್ಟ್ ಹೆಸರಿನಲ್ಲಿ ಠೇವಣಿ ಇಟ್ಟಿದ್ದೇನೆ. ಮನೆಯಲ್ಲಿಯೇ ಶಾಲೆಯನ್ನು ಪ್ರಾರಂಭಿಸಿದೆ. ಅದೀಗ ಬೆಳೆದು ೧೪೦ ವಿದ್ಯಾರ್ಥಿಗಳನ್ನು ಹೊಂದಿದೆ. ಕನ್ನಡ ೭ ನೇ ವರ್ಗಕ್ಕೆ ತಲುಪಿದೆ. ಅದರ ಅಭಿವೃದ್ಧಿಗಾಗಿ ಕಳೆದ ೧೩-೧೪ ವರುಷಗಳ ಅವಧಿಯಲ್ಲಿ ಐದು ಲಕ್ಷ ರೂಪಾಯಿಗಳನ್ನು ಕೈಯಿಂದ (ಪೆನ್‌ಶನ್ ಹಣದಿಂದ) ಖರ್ಚು ಮಾಡಿದ್ದೇನೆ. ಅವ್ವನ ಪ್ರೀತಿ, ತ್ಯಾಗ, ಸ್ಮರಣೆ ಶ್ರಮ-ಮುಂತಾದ ಲೋಕೋತ್ತರ ಗುಣಗಳ ಮುಂದೆ ಈ ಹಣದ ಮೌಲ್ಯ ಗೌಣ.

✦ **ಡಾ. ಎಸ್. ಆರ್. ಗುಂಜಾಳ,**

ನಂ.೧೧, ೩ನೇ ಮಹಡಿ, ಸಂತೂಬಾಯಿ ಅಪಾರ್ಟ್‌ಮೆಂಟ್,

ಕೋರ್ಟ್ ರಸ್ತೆ, ಅಪ್ಸರಾ ಹೊಟೆಲ್ ಎದುರು, **ಧಾರವಾಡ-೫೮೦ ೦೦೧** ✦

ಅಕ್ಕ-ಅಣ್ಣ ಅನ್ನೋ ಅವ್ವ ಅಪ್ಪ

ಯಶವಂತ ಸರದೇಶಪಾಂಡೆ

೧

ನಮ್ಮ ಅವ್ವನ ಮನಿಯಿಂದ ಈ ಫೋನ್ ಬಂದದ ಅಂತ ಗೊತ್ತಾಗತದ ನನಗ. ಯಾಕಂದರ ಅದಕ್ಕೊಂದು ರಿಂಗ್‌ಟೋನ್ ಬ್ಯಾರೇನ ಇಟಗೊಂಡೇನಿ ನಾನು! ಆ ತುದಿಯೊಳಗ ನನ್ನ ಅವ್ವ ಇಲ್ಲ ಅಪ್ಪ ಇರಬೇಕು... ಯಾವ್ರೊತ್ತೂ ಈ ಟಾಯಮ್ಮಿನ್ಯಾಗ ಫೋನ್ ಮಾಡವರಲ್ಲ ಇವರು... ಯಾಕ ಮಾಡ್ಯಾರ ಈಗ ಫೋನು... ಅನಕೋತ ಫೋನ್ ಎತ್ತಿದೆ...

"ಬಿಜಿ ಇದ್ದೀ ಅಂದರ ಹೇಳು, ಆಮ್ಯಾಲಿ ಮಾಡ್ತೇನಿ"- ಇದು ನಮ್ಮವ್ವ (ಕಲ್ಪನಾ ಶ್ರೀಧರ ಸರದೇಶಪಾಂಡೆ) ತುಸು ಅಳುಕಿನಿಂದ ಆಡಿದ ಮೊದಲ ಮಾತಾಗಿತ್ತು...

"ಬಿಜಿ ಇಲ್ಲ, ಹೇಳು. ಏನಾತು?" ಅಂತ ನಾ ಕೇಳಿದೆ.

"ಪ್ರಸನ್ನ(ನನ್ನ ತಮ್ಮ)ಗ ಫೋನ್ ಮಾಡಿದ್ದೆ. ನೀನು ಮುಂಬಯಿದಾಗ ಇದ್ದೀ. ಮೀಟಿಂಗ್ ಗೀಟಿಂಗ್‌ದಾಗಿರತಾನವಾ... ಯಾಕ್ ಫೋನ್ ಮಾಡ್ತಿ ಅವ್ಗಾಗ ಅಂತ ಅನ್ನಾಪಾಽಽ... ಅದಕ..." ಹಿಂಗ ನಮ್ಮವ್ವ ರಾಗ ಎಳದಾಗ ಏನರೇ ಬೇಡಿಕಿ ಇದ್ದಽ ಇರತದ ಅಂತ ನನ್ನ ಅನುಭವ ಹೇಳತದ!

"ಮೀಟಿಂಗ್‌ನ್ಯಾಗಿಲ್ಲ ಬಿಡು, ಹೇಳು ಏನಾತು?" ಅಂತ ನಾ ಅಂದಾಗ... "ಇವ್ರೊತ್ತ ೧೪ ಜುಲೈ, ನಿನ್ನ ಹದಿನೇಳನೇ ಮ್ಯಾರೇಜ್ ಹ್ಯಾಪಿ ಬರ್ತಡೇ... ಅದ್ನ ಹೇಳೋಣು ಅಂತ..." ನಮ್ಮವ್ವ ತನ್ನ ವಿಶಿಷ್ಟ ಪದಾವಳಿಗಳಲ್ಲಿ ಹೇಳಿದಾಗ ಒಂದು ಕ್ಷಣ ಕಸಿವಿಸಿ ಆತು ಮನದಾಗ... ಛೇ, ಎಂಥಾ ಮನಷ್ಯಾ ನಾ... ಬೆಳದೇನಿ... ದೊಡ್ಡವ್ನಾ ಆಗೇನಿ... ಆದರ ದೊಡ್ಡತನ ಬೆಳಸಿಗೊಳ್ಳಲಿಲ್ಲಲಾss...

ಕೆಲಸದ ನೆವದಾಗ ನಾನು ಸಂಸ್ಕಾರನ ಮರಿಬಾರದಾಗಿತ್ತು ಅನಿಸಿತು. ಯಾಕಂದರ ನಾ ಸಣ್ಣವಿದ್ದಾಗ ನಮ್ಮ ಹುಟ್ಟಿದ ಹಬ್ಬದ ದಿನ, ಬ್ಯಾರೆ ಬ್ಯಾರೆ ಹಬ್ಬಹರಿದಿನಗಳೊಳಗ, ಮುಂಜಾನೆದ್ದು ಸ್ನಾನ ಆದ ಕೂಡಲೆ ದೇವರ ಮುಂದ ನಿಂದರಿಸಿ ನಾಲ್ಕಾರ ಮಂತ್ರ ಹೇಳಿಸಿ, ಹಿರಿಯರಿಗೆ ನಮಿಸಿ, ಆಶೀರ್ವಾದ ಪಡಿಯೋ ಪರಿಪಾಠ ಹಾಕಿದ್ದರು ನಮ್ಮ ಮನ್ಯಾಗ. ಇಷ್ಟು ಮಾಡಲಿಲ್ಲಂದ್ರ ಮುಂಜಾನಿ ಟಿಫಿನ್ ಸಿಗತಿದ್ದಿಲ್ಲ! ರೂಢಿ ಮುಂದುವರೀತು.

ನಾನು ಬೆಳದು ಸಾಲಿ- ನಾಟಕ ಅನಕೋತ ಬ್ಯಾರೆ ಬ್ಯಾರೆ ಊರು ತಿರಗಲಿಕ್ಹತ್ತೆ. ಆಗೆಲ್ಲ ಮುಂಜಾನೆದ್ದು ಮಂತ್ರ ಅಂತಿದ್ದೆ, ಆದರ ನಮಸ್ಕರಿಸೋದು ಯಾರಿಗೆ? ಮನದಾಗ ಅವ್ವ-ಅಪ್ಪನ ನೆನಸತಿದ್ದೆ... ಹಬ್ಬ- ಹುಟ್ಟಿದ ಹಬ್ಬದ ದಿನಗಳಾದರ ಎಲ್ಲಿಂದರ ಫೋನ್ ಮಾಡಿ, "ಅವ್ವ ಇಲ್ಲೇ ಈ ಫೋನ್‌ನ್ಯಾಗಿಂದನಽ ಕಾಲಿಗೆ ಬೀಳತೇನಿ, ಆಶೀರ್ವಾದ ಮಾಡು" ಅಂತಿದ್ದೆ. ಕ್ರಮೇಣ ಕೆಲಸದ ರಭಸ ಜಾಸ್ತಿ ಆಗಿ ಫೋನಿನ ನಮಸ್ಕಾರಗಳು ಉಳದ ಹೋದವು... ಎರಡು ತಿಂಗಳಿಗೊಮ್ಮೆ, ಆರು ತಿಂಗಳಿಗೊಮ್ಮೆ ಊರಿಗೆ ಹೋದಾಗ

ನಮಸ್ಕಾರಸೋದು ಆಗತಿತ್ತು. ಇಂದ ಎಲ್ಲಿ ಉಲ್ಟಾ ಆಗಿ ಅವ್ವನಽ ಫೋನ್ ಮಾಡಿ ಏನ್ ಮಾಡೋ ಸ್ಥಿತಿ ಅದ... ಆದರ ತಾಯೀ ಕರಳು. ಏನೂ ತಿಳಕೊಳ್ಳದ ಫೋನ್ ಮಾಡಿ 'ಆರಾಂ ಇರು ಮಗನ!' ಅಂತ ಹರಸೋದ ಬಿಟ್ಟರ ಬ್ಯಾರೆ ಏನ ಮಾಡತದ ಹೇಳ್ರಿ... ಇಂಥಾ ಒಂದು ನೆವ ಇಟಗೊಂಡ, "ಯಾವಾಗ ಬರ್ತಿ ಹುಬ್ಬಳ್ಳಿಗೆ?" ಅಂತ ನಮ್ಮಪ್ಪ ಕೇಳಿದಾಗ, ಇಂಥಾದ್ದಽ ದಿನ ಬರ್ತೇನಿ ಅಂತ ಹೇಳಲಿಕ್ಕಾಗೂದಿಲ್ಲ ನನಗ...

ಇಂದೂ ಹಂಗಽ ಆತ... ಅವ್ವ ಅಪ್ಪನ ಗುಂಗು ಸಂಜೀ ತನಕ ಇತ್ತು...

೨

ನಾಗಪುರದಾಗ ನೌಕರಿಗಿದ್ದಾಗ ಅಲ್ಲಿಯ ಒಂದು ವಿಷವರ್ತುಲದ ಹೊಡತಕ್ಕ ತತ್ತರಿಸಿ ಕಂಗಾಲಾಗಿದ್ದೆ ನಾನು... ನೌಕರಿ ಬಿಟ್ಟು ಬಿಡಬೇಕು ಅಂತ ನಿರ್ಧರಿಸಿ ಅಲ್ಲಿಂದ ಹೊರಟಬಿಟ್ಟಿದ್ದೆ. ಆದರ "ಹಂಗ ನೌಕರಿ ಬಿಡೋದು ನಿನ್ನ ಹೇಡಿತನ ತೋರಸ್ತದ" ಅಂತ ಬೋಧಿಸಿದ ನಮ್ಮಪ್ಪ, (ಶ್ರೀಧರ ಗೋಪಾಲರಾವ್ ಸರದೇಶಪಾಂಡೆ) ಎದ್ದು ಬಿದ್ದು ಒದ್ದಾಡಿಕೋತ ನಾಗಪುರಕ್ಕ ಬಂದ... ಆಗ ಖರೇ ಅಂದ್ರ ಎಲ್ಲಾ ರೀತಿಯಿಂದ ನುಗ್ಗ ಮಾಡಿತ್ತು ನನ್ನ ಈ ಬದುಕು. ಸಾವರಿಸಿಗೊಂಡ ಸಹಿಸೋದ ಸರಳ ಇರಲಿಲ್ಲ... ಅಪ್ಪ ಎದುರು ನಿಂತಾಗ ಏನು ಧೈರ್ಯ ಬಂತೋ... ನನ್ನ ಕಛೇರಿ ವಿರುದ್ಧ ಧನಿ ಎತ್ತಿದೆ...

ನನ್ನ ಮತ್ತು ಆಫೀಸಿನ ನಡುವ ಸಾಕಷ್ಟು ಪತ್ರವ್ಯವಹಾರ ಆಗಿತ್ತು. ಆ ಒಂದೊಂದು ಹಾಳೆಗಳನ್ನ ಸೂಕ್ಷ್ಮವಾಗಿ ನೋಡಿ ನಮ್ಮಪ್ಪ ಅಂದ, "ಅಂಥಾದ್ದೇನು ಸಮಸ್ಯಾ ಇಲ್ಲ ಇದರಾಗ. ಅವರ ಕೇಳಿದ್ದಕ್ಕ ನೀ ಸರಿಯಾಗಿ ಉತ್ತರ ಕೊಟ್ಟದೀ... ಹಂಗೇನರ ಇನ್ನೂ ಎಳೆದಾಡಿದರ ನಾವು ಕೋರ್ಟಿಗೆ ಹೋಗೂಣು" ಅಂದ. ನಾನು ನನ್ನ ಕೆಲವು ಹಿರಿಯ ಗೆಳ್ಯಾರನ್ನ ಸಂಪರ್ಕ ಮಾಡಿದೆ... ಅವರೂ ಅದಽ ಮಾತಽ ಆಡಿದರು.

ನಾವು ನಾಗಪುರದಾಗ ವಕೀಲರನ್ನ ಹುಡುಕಿದಿವಿ, ಅವರ ಸಲಹಾದ ಮ್ಯಾಲ ಪೇಪರ ತಯಾರಿಸಿದ್ವಿ... ಒಂದು ದಿನ ವಕೀಲರ ಆಫೀಸಿಗೆ ನಾನು ನನ್ನ ಅಪ್ಪ ಹೋದ್ವಿ... ಊರ ನಡುವ ವಕೀಲರ ಆಫೀಸಿನ ಮುಂದ ಅಷ್ಟೇನು ಟ್ರಾಫಿಕ್ ಇರಲಿಲ್ಲ... ಆಗೊಂದು, ಈಗೊಂದು ಕಾರು ಓಡಾಡುವ ದೊಡ್ಡ ಮಂದಿ ಇರೋ ಪಾಶ್ ಏರಿಯಾ ಅದು. ನಾವು ಒಳಗ ಹೋದಾಗ ಅಲ್ಲಿ ಕೂತಿದ್ದ ಹಳೇ ಕ್ಲೈಂಟ್‌ಗಳು ಎದ್ದು ಹೊರಗ ಹೋದರು... ನಮ್ಮ ಕೇಸಿನ ಬಗ್ಗೆ ಸವಿಸ್ತಾರ ಚರ್ಚಾ ಆತು... ವಕೀಲರು ನಮ್ಮಪ್ಪನ್ನ ಉದ್ದೇಶಿಸಿ ಒಂದು ಮಾತು ಆಡಿದರು. "ನೀವು ಸ್ವಲ್ಪ ಹೊರಗಿರತೀರ್ಯಾ, ಏನೋ ಒಂದ ಚೂರು ಪರ್ಸನಲ್ ಮಾತಾಡೋದಿತ್ತು" ಅಂತ ಹಿಂದಿಯೊಳಗ ವಿನಂತಿಸಿದರು, ಆದರ ಅಲ್ಲಿದ್ದ ಆ ವಕೀಲರ ಸಹಾಯಕ, ಅವರು ನನ್ನ ತಂದಿ, ಅಂತ ಮರಾಠಿಯೊಳಗ ಹೇಳಿದ... ನಮಗ ಮರಾಠೀ ಬರಂಗಿಲ್ಲ ಅಂತ ಅವರ ನಂಬಿಕಿ...

"ಏನ್ ತೊಂದ್ರಿ ಇಲ್ಲಿ. ನೀವು ಮಾತಾಡ್ರಿ. ನಾ ಹೊರಗಿರತೇನಿ" ಅಂತ ನನ್ನ ಅಪ್ಪ ಎದ್ದಬಿಟ್ಟರು... "ಉಳದವರಿದ್ದಾಗ ರೊಕ್ಕದ ವಿಷಯ ಮಾತಾಡೋದು ಸರಿಯಲ್ಲ" ಅಂತ ನನ್ನ ವಕೀಲ ಮರಾಠಿಯೊಳಗ ತನ್ನ ಶಿಷ್ಯಗ ವಿವರಿಸಿದ.

ನಮ್ಮ ರೊಕ್ಕದ ಮಾತುಕಥಿ ಹೆಚ್ಚುಕಡಿಮಿ ಅರ್ಧಾ ತಾಸು ಮುಂದುವರೀತು, ಮತ್ತ ಆ ಚರ್ಚಾದಾಗ ನನ್ನ ಅಪ್ಪ ಹೊರಗ ಕೂತಾರ ಅಂತ ಮರತು ಬಿಟ್ಟಿತ್ತು. ಒಂದು

ಹಂತದಾಗ ಅಪ್ಪನ ನೆನಪಾತು... ಚಟ್ಟನ ಮಾತು ಮುಗಿಸಿ ಎದ್ದು ಹೊರಗ ಬಂದೆ... ನನ್ನ ಅಪ್ಪ ಅಲ್ಲೇ ದೂರದ ಮೂಲ್ಯಾಗಿನ ಒಂದು ಗಟಾರ ದಂಡಿಗೆ ಕಟ್ಟಿದ ಸಿಮೆಂಟಿನ ಕಟ್ಟೀ ಮ್ಯಾಲೆ ಕೂತಿದ್ದ. ಅಲ್ಲಿ ಇಲೆಕ್ಟ್ರಿಕ್ ಕಂಬಕ್ಕ ಹಾಕಿದ ಸೋಲಾರ ಬಲ್ಬ್ ಬೆಳಕು ಹಿಂದ... ನನ್ನ ಅಪ್ಪನ ಆಕೃತಿ ಸ್ಪಷ್ಟ ಇರಲಿಲ್ಲ. ಆದರ ಒಂದ ನಮೂನಿ ಕಟೌಟ್ ಇದ್ದ ಹಾಂಗ ಇತ್ತು ಅದು. ಮಂದ ಬೆಳಕಿನ್ಯಾಗ ಕುಳಿತ ಆ ಜೀವ ಬಿಟ್ಟ ಅಳಗ್ಯಾದಲಿಲ್ಲ. ಯಾವುದೋ ಗಾಢ ವಿಚಾರದಾಗ ಇದ್ದಂಗಿತ್ತು... ಆ ದೃಶ್ಯ ನನ್ನೊಳಗ ಎಲ್ಲಿಲ್ಲದ ದುಃಖ ಉಕ್ಕಿಸಿತು. ಯಾಕಂದರ ನನ್ನ ಸಲುವಾಗಿ ನನ್ನಪ್ಪ ಗಟಾರ ದಂಡೀ ಸಿಮೆಂಟ್ ಕಟ್ಟೀ ಮ್ಯಾಗ ಕೂಡೋಹಂಗಾತಲಾss. ಒರ‍್ರ ಅಂತ ಒದರಿತು ಮನಸ್ಸು... ಉಳದವರ ಹಂಗ ನಮ್ಮಪ್ಪ ಸಿಗರೇಟು ಸೇದಿ, ತಂಬಾಕ ಹಾಕಿ ಟೈಂಪಾಸ್ ಮಾಡಿದವ್ನ ಅಲ್ಲ... ಹಂಗ ನೋಡಿದರ ಯಾವ ದುಶ್ಚಟಾನೂ ಇಲ್ಲ. ಸಭ್ಯ ಮತ್ತು ಪ್ರಿಯ... ಇಂಥಾ ಮನಷ್ಯಾ ನನಗಾಗಿ ಇವೊತ್ತು ದಾರೀ ಮ್ಯಾಲ ಏನೂ ಕೆಲಸಿಲ್ಲದ ಕೂಡೂಹಂಗಾತಲಾs ಅನಿಸಿ ಅಳಲಿಕ್ಹತ್ತೆ...

ಸಾವಕಾಶ ಅಪ್ಪನ ಕಡೆ ಹೆಜ್ಜೆ ಹಾಕಿದೆ... ಸಾವರಿಸಿಕೊಂಡಿದ್ದೆ, ಕಣ್ಣೀರು ಒರಿಸಿಕೊಂಡಿದ್ದೆ... "ಅಣ್ಣಾ, ನಡೀ ಹೋಗೋಣು" ಅಂದೆ...

'ಕೆಲಸಾತss...? ಏನಂದರು ವಕೀಲರು?' ಅಂತ ಕೇಳತಾನ ಅನಕೊಂಡಿದ್ದೆ. ಆದರ ನಮ್ಮಪ್ಪ, "ಎಷ್ಟು ರೊಕ್ಕ ಕೇಳಿದ ವಕೀಲ... ಭಾಳ ಕೇಳಿದ್ದರ ಬ್ಯಾರೆ ವಕೀಲರನ್ನ ಹುಡುಕೂಣ" ಅಂದ. ನಮ್ಮಪ್ಪನ ವ್ಯಾವಹಾರಿಕತೆಗೆ ಏನನಬೇಕು ತಿಳೀಲಿಲ್ಲ...

ನನಗ ಯಾಕೋ ಅಳು ತಡಕೊಳ್ಳಲಿಕ್ಕೆ ಆಗಲೇ ಇಲ್ಲ... ಬಿಕ್ಕಿದೆ... "ಯಾಕೋ, ಏನಾತು, ಯಶು" ಅಂದ ಅಪ್ಪ, ನನ್ನ ಎದುರು ಬಂದು ಕಾಳಜಿಯಿಂದ ಕೇಳಿದಾಗ ಬಿಕ್ಕೀದು ಅಳು ಆತು... "ಏನಾತು ಯಶವಂತಾ... ಆ್ಞ..." ಆತಂಕ ಅಪ್ಪನ ಧ್ವನಿಯೊಳಗ... "ಏನಿಲ್ಲ ನನ್ನ ಸಲವಾಗಿ ನೀ ಎಲ್ಲೆಲ್ಲಿ ಕೂಡಬೇಕಾತು, ಏನೇನು ಮಾಡಬೇಕಾತು..." ಅಂತ ಅರ್ಧಮರ್ಧ ಮಾತಾಡಿದೆ...

"ಏನು... ಏನ ಭಾಳ ಮಾಡೇನಿ... ನಿನ್ನ ಕರಿಯರ್ ನೀನs ಮಾಡಿಕೊಂಡಿ. ನಿನ್ನ ನೌಕರಿ ನೀನs ಹಿಡಕೊಂಡಿ. ಏನೋ ಬ್ಯಾಡ್ ಫೇಸ್. ಈಗ ನಿನ್ನ ಜೋಡಿ ನಾ ಇದ್ದರ ನಿನಗ ಅನುಕೂಲಾಗತದ ಅಂತ ಬಂದೇನಷ್ಟs... Don't worry. ಎಲ್ಲ ಬರೋಬ್ಬರಿ ಆಗತದ... ನಡೀ ಊಟ ಮಾಡೂಣು, ಲೇಟ್ ಆತು..."

ಇದs ಪದ್ಧತಿಯೊಳಗ ನನ್ನ ಅಪ್ಪ ಅವ್ವ ನನ್ನ ಕಾಪಾಡಿಕೊಂಡು ಬಂದಾರ... ಸಾಲಿಯೊಳಗ ೫ಂಕ್ಕ ಆರು ಎಂಟು ಮಾರ್ಕ್ಸ್ ತಗೊಂಡು ಆಡಕೊಂಡು ಉಡಾಳತನ ಮಾಡಿಕೊಂಡಿದ್ದ ನನ್ನನ್ನ ನಮ್ಮ ಅವ್ವ ಅಪ್ಪ ದಂಡಿಸಿದ್ದು ನನಗಿನ್ನೂ ನೆನಪದ...

ನಮ್ಮ ಸಾಲಿಯೊಳಗ ಒಂದು ಡೈರಿ ಪದ್ಧತಿ ಇತ್ತು. ಪಾಲಕರಿಗೆ ಶಿಕ್ಷಕರು ಬರದ ಕಳಸೋ ಆ ಡೈರ್ಯಾಗ ನನ್ನ ವಿರುದ್ಧ ಕಂಪ್ಲೇಂಟು... ಕಂಪ್ಲೇಂಟು. ಇಂಥಿಂಥಾ ದಿನಾ ಆಫೀಸ್‌ಗೆ ಬಂದು ಭೆಟ್ಟಿ ಆಗ್ರಿ, ಮಾತಾಡಬೇಕು ಅಂತ ಬರದಿರೋರು... ನಮ್ಮಪ್ಪ ಸಾಲಿಗೆ ಬಂದ ಅಂದ್ರ ಎಲ್ಲಾ ಟೀಚರಗಳು ಸಾಲಾಗಿ ನಿಂತು ಕಂಪ್ಲೇಂಟ್ ಹೇಳೋರು. ಮನಿಗೆ ಬಂದಾಗ ಸಾಮ-ದಂಡಗಳೆಲ್ಲ ಪ್ರಯೋಗ ಮಾಡಿ ನನ್ನ ರಿಪೇರಿ ಆಗೋದು. ನಾ ಅಪ್ಪನ ಕಿಸೇದಾಗಿನ ರೊಕ್ಕ ಕದ್ದಾಗ ಕೈಗೆ ಬರಿ ಹಾಕ್ತೇನಿ ಅಂದರು. ಆದರ ಅವ್ವ ಅಪ್ಪ ಮನಸ್ಸಿಗೆ 'ಬರಿ' ಹಾಕಿದರು. ಅಂದಿನಿಂದ ಇಂದಿನ ತನಕ ನನಗ ಏನನ್ನೂ

ಕಡಿಯೋ ತಾಕತ್ತು ಇಲ್ಲದಾಗೇದ. ಮತ್ತು ಘಳಿಸೋ ಶಾಣ್ಯಾತನ ಬೆಳೆದ ಬಂದದ.

೨

ಕೆಲ ವರ್ಷದ ಹಿಂದಿನ ಘಟನಾ ಇದು.

ಮುಸ್ಕಿ ಹತ್ತರ ಯಾವುದೋ ಒಂದು ಊರಾಗ ನಾಟಕ ಮುಗಿಸಿ, ರಾತ್ರಿ ಗೆಳೆಯರ ಜೋಡಿ ಊಟ ಮಾಡಿ ಮಧ್ಯರಾತ್ರಿ ಹಾವ್ರಣೆ ಒಂದಕ್ಕ ಬಂದು ಮನಿ ಬಾಗಿಲಾ ಬಡದೆ. ನಮ್ಮಕ್ಕ ಬಂದು ಬಾಗಲಾ ತಗದಳು. ನಮ್ಮ ಅಕ್ಕ ಅಂದರ ನಮ್ಮ ಅವ್ವ... ಅವ್ವಗ ಅಕ್ಕ ಅಂತೇವಿ ನಾವು. "ಊಟ ಆಗಿರಬೇಕಲಾ..." ಒಂದು ಕಾಳಜಿ ಧ್ವನಿಯೊಳಗ ಕೇಳಿದ್ಲು. 'ಆಗಿಲ್ಲ' ಅಂದಿದ್ದರ ಸಟ್ಟನ ತಾಟು ಹಾಕವಳು ಆಕಿ. "ಆಗೇದೆಳು, ಹಳೇ ಗೆಳ್ಯಾರು ಸಿಕ್ಕಿದ್ದರು. ಮಸ್ತ ಹರಟ್ಯಾತು. ಊಟಾತು" ಅಂತ ಹೇಳಿದೆ.

ನನಗಾಗಿ ನಡಮನ್ಯಾಗ ಹಾಸಿಗಿ ರೆಡಿಯಿತ್ತು. ಅರವಿ ಬದಲಾಯಿಸಿ ಮಲಗಲಿಕ್ಕೆ ತಯಾರಾದೆ. ಕುಡಿಯೋ ನೀರಿನ ತಂಬಿಗೆ ತಂದಿಟ್ಟು ಅಕ್ಕ ಕೇಳಿದಳು, "ಹ್ಯಾಂಗಾತು ನಾಟಕ?" "ಮಸ್ತಾತು" ಅಂದ ನಾನು, ಐವತ್ತು ರೂಪಾಯಿಯ ನೂರು ನೋಟಗಳಿರೋ ಒಂದ ಕಟ್ಟನ್ನ ಅಕ್ಕನ ಕೈಗಿತ್ತೆ... ಹಿಂಗ ನಾವು ಘಳಿಸಿ ತಂದ ರೊಕ್ಕ ಅವ್ವನ ಕೈಯಾಗಿಡೋ ಮಜಾನs ಬ್ಯಾರೆ ಇರತದ... ಅದೂ ಹೆಂಡತಿಯಿಂದ ಕದ್ದು ಹಿಂಗ ಮಾಡಿದಾಗಂತೂ, ಅದರ ಮಜಾ ದುಪ್ಪಟ್ಟಾಗತದ. ಇರಲಿ. ಖುಶ್ ಆದ್ಲು ನಮ್ಮವ್ವ.. ತನ್ನ ಕೊಳ್ಳಾಗಿನ ಚೈನ್ನ್ಯಾಗಿರೋ ಚಾವಿ ತಗದ, ಹಳೇ ಗೋದ್ರೇಜ್ ಕಪಾಟಿಗೆ ತುರಕಿ, ಕಿರ್ರ ಅನಿಸಿಗೋತ ಅದರ ಬಾಗಲಾ ತಗದ, ನಡುವಿನ ಸೆಲ್ಫ್‌ನ್ಯಾಗ ಭದ್ರವಾಗಿಟ್ಟಳು ಆ ರೊಕ್ಕ... ಮತ್ತ ಆ ಬೀರು ಬಾಗಿಲಾ ಹಾಕಿ ಭದ್ರ ಮಾಡಿ ಮಲಗಿದಳು, ನಾನೂ ಮಲಗಿದೆ...

"ಯಪ್ಪಾ... ನಿನ್ನ ಕಿಸೆದಾಗ ಒಂದು ಎಂಟು ರೂಪಾಯಿ ಚಿಲ್ಲರ ಅವ ಏನು, ಮೊಸರಿನಾವ್ನ ಬಂದಾನ. ಮೊಸರ ತಗೊಂಡೇನಿ. ಒಂದ ಎಂಟ ರೂಪಾಯಿ ಕೊಡಲಾs..." ಎಂಬ ಅಕ್ಕನ ಧ್ವನಿ ನನ್ನ ಎಚ್ಚರಿಸಿತು...

ನಿದ್ದೆಯಿಂದ ಎಬ್ಬಿಸಿದ್ದಕ್ಕ ಸಿಟ್ಟು ಬಂದಿತ್ತು. "ಇಲ್ಲ" ಅಂತಂದು ಮಗ್ಗಲ ಬದಲಿಸಿ ಮಲಗಿದೆ. ನಿದ್ದಿ ಬರಲಿಲ್ಲ... ಏನ್ ಮಾಡತಾಳ ಈಗ ಅಕ್ಕ ಅಂತ ವಿಚಾರ ಮಾಡಲಿಕತ್ತೆ. ಗೋದ್ರೇಜ್ ಕಪಾಟನ್ಯಾಗಿನ ಐದು ಸಾವಿರ ರೂಪಾಯಿದಾಗಿನ ಒಂದು ಐವತ್ತರ ನೋಟ ತಗದ ಮೊಸರಿನವ್ಗ ಕೊಡ್ತಾಳಾಕಿ ಅನಕೊಂಡರ, ಹಂಗಾಗಲಿಲ್ಲ. ಅಲ್ಲಿ ಇಲ್ಲಿ ಚಿಲ್ಲರ ಜೋಡಿಸಿ ಮೊಸರು ಖರೀದಿಸಿದ್ಲು. ಎಷ್ಟ ಕೊಟ್ಟರೂ ಅಷ್ಟs ಇವರಿಗೆ. ಈ ಹಣಮಕ್ಕಳ ಹಂಗss... ಬರೇ ಕೂಡಿಡತಾರ ಅಂತೆಲ್ಲ ಅನ್ಕೊಳ್ಳುದರಾಗ ನನ್ನ ಮೊಬೈಲ್ ಹೊಡಕೊಂಡಿತು. ಅದೊಬ್ಬ ಗೆಳ್ಯಾನ ಫೋನ್. 'ಬಾ ಲಗೂನ' ಅಂತಂದ.

ನಾನು ಒಲ್ಲದ ಮನಸ್ಸಿಲೆ ಎದ್ದು ಬಚ್ಚಲಕ ನಡದೆ. ಹೊರಬಂದಾಗ ಚಹ ಅವಲಕ್ಕಿ-ಮೊಸರು ರೆಡಿ ಇತ್ತು... ತಿಂದು ಹೊರಬೀಳೊಕ್ಕಿಂತ ಮೊದಲ ಹೇಳಿದೆ. "ಅಕ್ಕ, ರಾತ್ರಿ ಎಂಟರ ಬಸ್ಸಿಗೆ ರಿಜರ್ವೇಶನ್ ಆಗೇದ... ನಾ ಏಳಕ್ಕ ಮನಿ ಬಿಡತೇನಿ. ಮಧ್ಯಾಹ್ನ ಊಟಕ್ಕ ಬರಾಂಗಿಲ್ಲ. ಸಂಜಿಕ್ಕ ಚಹ ಕುಡದ ಹೊಂಡತೇನಿ."

"ಹ್ಞು" ಅಂತ ಗೋಣ ಆಡಿಸಿದಳು ಅಕ್ಕ.

ನಾ ಸಂಜಿಗೆ ಬಂದಾಗ ಆರಾಗಿತ್ತು. ನನ್ನ ಬ್ಯಾಗ್ ಕಟಗೊಳ್ಳಲಿಕ್ಕ ಶುರು ಮಾಡಿದೆ. ಚಹ ಚುರಮರಿ ರೆಡಿಯಿದ್ದವು... ಕುಡಿದೆ. ಅಪ್ಪ-ಅವ್ವಗ ಒಂದೊಂದು ನಮಸ್ಕಾರ ಹಾಕಿ ಹೊಂಟ ನಿಂತೆ...

"ಇದ ತಗೊ, ನಿನಗ" ಅಂತ ನಮ್ಮವ್ವ ನನಕಡಿಗೆ ಕೈ ಚಾಚಿದಳು... ತಗದ ನೋಡಿದರ ಒಂದು ಎಳಿ ಧಪ್ಪಂದು ಬಂಗಾರದ ಚೈನು, ಅದಕ್ಕೊಂದು ಸಾಯಿಬಾಬಾನ ಲಾಕೇಟು. ಆಶ್ಚರ್ಯ-ಆಘಾತ ಎರಡೂ ಆದವು. ಅಕ್ಕನ ಮಾರಿ ನೋಡಿದೆ. "ಅದs, ನಿನ್ನೆ ನೀ ಐದ ಸಾವಿರ ಕೊಟ್ಟ್ಯಲಾs ಅಷ್ಟ ಬೇಕು ಅಂತ ಹೇಳಿದ್ದ ಆ ವೆರ್ಣೇಕರs... ನನ್ನದೊಂದ ಹಳೇ ಚೈನಿತ್ತ, ಮುರಸಿ, ಇನ್ನೊಂದಿಷ್ಟು ಬಂಗಾರ ಹಾಕಿಸಿ, ಮಾಡಸೇನಿ. ಹ್ಯಾಂಗದs...?"

"ಮಸ್ತದ" ಅಂತ ಸ್ವಲ್ಪ ಕ್ಷೀಣವಾಗೆ ಹೇಳಿದೆ... ಮಾತು ಹೊರಡಲಿಲ್ಲ ಮತ್ತೊಮ್ಮೆ ನಮಸ್ಕಾರ ಮಾಡಿ ಹೊರಟೆ...

ಬಸ್ಸಿನ್ಯಾಗ ಕೂತಾಗ ಅದರ ಟೇಪ್ ರೆಕಾರ್ಡರ್ ಹಾಡತಿತ್ತು: "ಕಾಣದ ದೇವರು ಊರಿಗೆ ನೂರು..."

✦ **ಯಶವಂತ ಸರದೇಶಪಾಂಡೆ,** ಫ್ಲ್ಯಾಟ್ ಸಂ. ೩೦೫, ಎಸ್.ಎಲ್.ವಿ.ಹೋಮ್ಸ್, ಪ್ಲಾಟ್ ಸಂ. ೯೭೫, ೮ನೇ ಮೇನ್, ಗಿರಿನಗರ, ೨ನೇ ಹಂತ, ಬೆಂಗಳೂರು-೫೬೦ ೦೮೫ ✦

●

'ನನ್ನ ಅವ್ವ ನನ್ನ ಅಪ್ಪ' ಮಾಲಿಕೆ : ಕೃತಜ್ಞತೆ - ೯೧

ನನ್ನ ಅವ್ವ - ಅಪ್ಪ

ಬಾಳಣ್ಣ ಸೀಗೀಹಳ್ಳಿ

ನನ್ನ ಅವ್ವ-ಅಪ್ಪ ಇಬ್ಬರೂ ಈಗಿಲ್ಲ. ಅಪ್ಪ ಪಾರ್ಶ್ವವಾಯುವಿನಿಂದ ೧೯೯೪ರಲ್ಲಿ. ಅವ್ವ ಗರ್ಭ ಕ್ಯಾನ್ಸರಿನಿಂದ ೨೦೦೦ ನಲ್ಲಿ ತೀರಿಕೊಂಡದ್ದರಿಂದ ಈಗ ಅವರಿಬ್ಬರ ಭೌತಿಕ ಆಕೃತಿ ನನ್ನ ಸ್ಮೃತಿಪಟಲದಿಂದ ನಿಧಾನಕ್ಕೆ ಮಸುಕಾಗುತ್ತಿದೆ. ಅವರಿಲ್ಲದ ದಿನಗಳನ್ನೇ ಕಲ್ಪಿಸಿಕೊಳ್ಳಲು ತುಂಬ ವಿಹ್ವಲಗೊಳ್ಳುತ್ತಿದ್ದ ನನ್ನಲ್ಲಿ ಈಗ ಅನಿವಾರ್ಯತೆಯ ಅವಸ್ಥಾಂತರಗಳನ್ನು ಸಮಚಿತ್ತದಿಂದ ಗ್ರಹಿಸುವ ಶಕ್ತಿ ಬೆಳೆದಿರುವುದರಿಂದ ಅವ್ವ-ಅಪ್ಪನ ಅಗಲಿಕೆಯ ನೋವು ಕಾಡುವಾಗಲೆಲ್ಲ 'ಸಾವಿಲ್ಲದ ಮನೆಯ ಸಾಸಿವೆ...' ನೆನೆಸಿಕೊಂಡು ಸಮಾಧಾನಪಟ್ಟು ಕೊಳ್ಳುತ್ತೇನೆ. ಯಾಕೆಂದರೆ, ಸ್ಥಾವರ ಬದುಕಿನ ನಶ್ವರತೆ, ಜಂಗಮ ಬದುಕಿನ ಅರ್ಥವಂತಿಕೆ ನನಗೀಗ ಸ್ಪಷ್ಟವಾಗಿ ತಿಳಿದಿದೆ. ನನ್ನನೀಗ ಕಾಡುವ ಪ್ರಶ್ನೆಗಳೆಂದರೆ, ಅವ್ವ-ಅಪ್ಪನನ್ನು ಯಾವ ಶಕ್ತಿ ಅವರು ಜೀವಂತವಿರುವ ವರೆಗೆ ದುಡಿಸಿತು? ಅವರ ಸುಖದ ಪರಿಕಲ್ಪನೆ ಏನಾಗಿತ್ತು? ಬದುಕಿನ ತುಂಬ ಅವರಲ್ಲಿ ಪುಟಿಯುತ್ತಿದ್ದ ಜೀವನೋತ್ಸಾಹದ ಅಂತರ್ಜಲದ ಮೂಲ ಯಾವುದು? ಕುಟುಂಬ ಮತ್ತು ಸಮಾಜ ಎರಡನ್ನೂ ಸಮಶ್ರದ್ಧೆ-ಪ್ರೀತಿಯಿಂದ ಅಪ್ಪೇಗೆ ಅವರಿಗೆ ಒಟ್ಟೊಟ್ಟಿಗೇ ತಬ್ಬಿಕೊಳ್ಳಲು ಸಾಧ್ಯವಾಯಿತು? ಅವರು ಸಂಪಾದಿಸಿದ್ದ ಲೋಕಜ್ಞಾನ, ಮನುಷ್ಯಸಂಬಂಧಗಳನ್ನು ಕಲಿಸಿದ ಪಾಠಶಾಲೆಯ ನೆಲೆ ಯಾವುದು? ಬದುಕಿನಲ್ಲಿ ಎಡೆಬಾಯ್ದು ನುಗ್ಗುತ್ತಿದ್ದ ಪ್ರತಿಕೂಲಗಳನ್ನು ಎದುರಿಸುವ ಅವರ ಎದೆಗಾರಿಕೆ

ಯಾರ ಬಳುವಳಿ? ಅವರ ಕಡೆಯ ದಿನಗಳಲ್ಲಿ ಕುಟುಂಬ-ಸಮಾಜಗಳಿಂದ ಅವರಿಗೆ ಸಿಕ್ಕ ಪ್ರತಿಫಲ ಎಂಥದು? ಮುಂತಾದವುಗಳು. ಇವುಗಳಿಗೆಲ್ಲ ಉತ್ತರ ಪಡೆಯುವ ಪ್ರಯತ್ನದಲ್ಲೇ ನನ್ನ ಅವ್ವ-ಅಪ್ಪ ಅನಾವರಣಗೊಳ್ಳುತ್ತಾರೆ.

ಅವ್ವ-ಅಪ್ಪ ಹುಟ್ಟಿದ್ದು, ಬೆಳೆದದ್ದು, ನಿಧನರಾದದ್ದು ಚೆನ್ನಮ್ಮನ ಕಿತ್ತೂರಿನಿಂದ ಪಶ್ಚಿಮಕ್ಕೆ ಮೂರು ಮೈಲು ಅಂತರದಲ್ಲಿರುವ ದೇವಗಾವಿಯಲ್ಲಿ. ಇದು ಬೈಲಹೊಂಗಲ ತಾಲೂಕಿನ ಒಂದು ಚಿಕ್ಕ ಹಳ್ಳಿ. ಇದರಲ್ಲಿ ಶಿರಗಾಪುರ-ಹೊಸೂರು ಎಂಬ ಇನ್ನೆರಡು ಅತಿ ಚಿಕ್ಕ ಹಳ್ಳಿಗಳೂ ಸಮಾವೇಶಗೊಂಡಿವೆ. ಈ ತ್ರಿವಳಿ ಹಳ್ಳಿಗಳನ್ನೇ ಸಂಯುಕ್ತವಾಗಿ ಬಳಕೆಯಲ್ಲಿ ದೇವಗಾವಿ ಎಂದು ಹೇಳಲಾಗುತ್ತದೆ. ನನ್ನ ಅವ್ವ, ತನ್ನ ತಂದೆ, ತಾಯಿ(ದೇವೇಂದ್ರ+ ರತ್ನವ್ವ)ಗಳಿಗೆ ಏಕೈಕ ಸಂತಾನ; ಮತ್ತು ಮೂರು ತಿಂಗಳ ಹಸುಗೂಸು ಇರುವಾಗಲೇ ತಂದೆಯನ್ನು ಕಳೆದುಕೊಂಡವಳು. ಹೀಗಾಗಿ ವಿಧವಾ ತಾಯಿಯ ತಳಮಳ, ಅಸಮಾಧಾನಗಳೇ ಆವರಿಸಿದ್ದ ಬರಿದಾದ ಮನೆಯಲ್ಲಿ ತನ್ನ ಬಾಲ್ಯದ ದಿನಗಳನ್ನು ಕಳೆದವಳು. ಇಂಥ ಹತಭಾಗ್ಯ ನನ್ನ ಅವ್ವನ ಹೆಸರು ಸುಂದರವ್ವ. ಇವಳ ಕೈಹಿಡಿದು ಆ ಬರಿದಾಗಿದ್ದ ಮನೆಗೆ ಅಳಿಯನಾಗಿ ಬಂದು 'ಅರ್ಥ' ತುಂಬಿದವನು ನನ್ನ ಅಪ್ಪ-ಬಸಪ್ಪ.

ಇವರಿಗೆ ಆರು ಜನ ಗಂಡು ನಾಲ್ಕು ಜನ ಹೆಣ್ಣು ಒಟ್ಟು ಹತ್ತು ಜನ ಮಕ್ಕಳು. ಈ ನಮ್ಮನ್ನೆಲ್ಲ ಬೆಳೆಸುವುದೇ ನನ್ನ ಅವ್ವ-ಅಪ್ಪನ ಪಾಲಿಗೆ ಒಂದು ಸವಾಲಾಗಿತ್ತು. ರೊಟ್ಟೀ ಬಡಿವರೆ ೬೦, ೭೦ ಬಡಿಯಬೇಕು. ಇದೇ ಪ್ರಮಾಣದಲ್ಲಿ ಅನ್ನ, ಸಾರು, ಪಲ್ಯ ಇತ್ಯಾದಿಗಳನ್ನು ಸಿದ್ಧಪಡಿಸಬೇಕು. ಇದೆಲ್ಲಕ್ಕೂ ಕಟ್ಟಿಗೆ ಒಲೆಯೇ ಗತಿ. ಮಳೆಗಾಲದಲ್ಲಿ ಒಲೆ ಹೊತ್ತಿಸುವುದೆಂದರೆ ಆ ದೇವರಿಗೇ ಪ್ರೀತಿ. ಉಸಿರೇ ನಿಂತು ಹೋಗುವಷ್ಟು ಆ ಒಲೆ ಊದಬೇಕು. ಇದರ ಜೊತೆಗೇ ಹೊಲಕ್ಕೆ ಹೊರಡುವ ಧಾವಂತದ ಅಪ್ಪನಿಗೆ ಬಚ್ಚಲು ಮನೆಯ ನೀರೊಲೆ ಹೊತ್ತಿಸಬೇಕು. ಆತನ ಜಳಕಕ್ಕೆ ಬೇಕಾಗುವ ಉಡುಪುಗಳನ್ನು ಹೊಂದಿಸಿಕೊಡಬೇಕು, ಸ್ನಾನ ಮುಗಿಸುವುದರೊಳಗಾಗಿ ರೊಟ್ಟಿ ಜೊತೆಗೆ ಇತರ ವ್ಯಂಜನಗಳು ಸಿದ್ಧವಿರಬೇಕು. ಇದು ಪ್ರತಿನಿತ್ಯದ ಬೆಳಗಿನ ದಿನಚರಿ. ಇದರಲ್ಲಿ ಒಂದು ಚೂರು ವ್ಯತ್ಯಾಸವಾದರೂ ಅಪ್ಪ ತಾಳ್ಮೆಗೆಡುವುದು ಗ್ಯಾರಂಟಿ.

ಅಪ್ಪನಿಗೆ ವ್ಯವಸಾಯದ ಬಗ್ಗೆ ದೈವೀ ಶ್ರದ್ಧೆ. ಎಂಟು ಎತ್ತಿನ ಒಕ್ಕಲುತನ. ಮುನ್ನೂರು ಚೀಲ ಭತ್ತ ಬೆಳೆಯುವ ಭೂಮಿ. ವರ್ಷದ ಹದ, ಹಸಿ, ಹವಾಮಾನ ಮಣ್ಣಿನ ಗುಣ- ಇವುಗಳಿಗನುಗುಣವಾಗಿ ಬೆಳೆ ಬೆಳೆಯುವುದು. ಪರ್ಯಾಯ ಬೆಳೆಗಳನ್ನು ಬೆಳೆದು ಭೂಮಿಯನ್ನು ಕಾಲಿಗಿ (ಕಾಲಗೈ) ಮಾಡಿ ಅದರ ಫಲವತ್ತತೆಯ ಬಗ್ಗೆ ಪ್ರಯೋಗ ನಡೆಸುವುದು. ಈ ದೃಷ್ಟಿಯಲ್ಲಿ ಅಪ್ಪ ಯಾವ ಕೃಷಿ ವಿಜ್ಞಾನಿಗೂ ಕಡಿಮೆ ಇರಲಿಲ್ಲ. ಅವರೆ, ಕಡಲೆ, ತೊಗರಿ, ಚೆನ್ನಂಗಿ, ಬಟಗಡಲೆ, ಹೆಸರು, ಕುಸುಬಿ, ಬಿಳಿಜೋಳ, ಹುಚ್ಚೆಳ್ಳು, ಬಿಳಿ ಎಳ್ಳು, ಸಾಸಿವೆ- ಇತ್ಯಾದಿ ಕಡಪಾಲು ಬೆಳೆಯುವುದರಲ್ಲೂ ಅಪ್ಪ ಸಿದ್ಧಹಸ್ತ. ಕಲ್ಲಂಗಡಿ, ಬದನೆ, ಈರುಳ್ಳಿ, ಸವತೆ, ತೆಂಗು, ಬಾಳೆ, ಲಿಂಬೆ, ಮಾವು, ಗೋವಿನಜೋಳ, ಹಿರೇಬಳ್ಳಿ, ಕೋತಂಬರಿ, ಹರವಿ, ಪುಂಡಿ ಮುಂತಾದ ತೋಟಪಟ್ಟಿಯ ಬಗ್ಗೆಯೂ ಆತನಿಗೆ ಅಪಾರ ಆಸಕ್ತಿ. ಇದರ ಜೊತೆಗೆ ಮನೆಯಲ್ಲಿ ನಾಲ್ಕಾರು ಹೈನದ ದನಗಳಿರಲೇಬೇಕು.

ವಿಶೇಷವೆಂದರೆ, ಅಪ್ಪನ ಆಸಕ್ತಿಗೆ ಇನ್ನೂ ಕೆಲವು ಆಯಾಮಗಳಿದ್ದವು. ಪಶುವೈದ್ಯಕೀಯ, ರಂಗಭೂಮಿ, ವ್ಯಾಜ್ಯ ತೀರಿಸುವುದು, ಭೂಮಾಪನ (ಸರ್ವೇ) ಮಾಡುವುದು, ಅಂತರ್ಜಲ ಶೋಧನೆ- ಇವೆಲ್ಲದರಲ್ಲಿಯೂ ಅಪ್ಪ, ಗೈರುಹಂಗಾಮಿನ ವೇಳೆಯಲ್ಲಿ ಸಕ್ರಿಯವಾಗಿರುತ್ತಿದ್ದ.

ದನಗಳಿಗೆ ಬರುವ ಸಾಮಾನ್ಯ ರೋಗಗಳಾದ ಚಪ್ಪೆಬೇನೆ, ಗಂಟಲುಬೇನೆ, ಬಾಯಿಬೇನೆ, ಕಾಲುಬೇನೆ, ಮುಳುವು, ಕುಂದು, ಉದರಬೇನೆ– ಇವುಗಳಿಗೆಲ್ಲ ಒಂದು ಪೈಸೆಯನ್ನೂ ತೆಗೆದುಕೊಳ್ಳದೆ ಔಷಧಿ ಕೊಟ್ಟು, ಬರೆ ಹಾಕಿ, ಗುಣಪಡಿಸುತ್ತಿದ್ದ ಅಪ್ಪನ ಇನ್ನೊಂದು ಸ್ಪೆಶಾಲಿಟಿ ಎಂದರೆ, ಆಕಳೋ, ಎಮ್ಮೆಯೋ ಕರು ಹಾಕುವಾಗ ಅದಕ್ಕೆ ಗರ್ಭದೊಳಗೆ ಏನಾದರೂ ತೊಂದರೆಯಾಗಿ ಆ ಕರು ಅಡ್ಡಸಿಕ್ಕಿದ್ದರೆ ಅಂಥ ದನಗಳ ಗರ್ಭಾಶಯದೊಳಗೆ ಕೈ ಹಾಕಿ ಕರುವನ್ನು ಲೀಲಾಜಾಲವಾಗಿ ಹೊರತೆಗೆದು ತಾಯಿ, ಕರು ಎರಡನ್ನೂ ಉಳಿಸಿಕೊಡುವುದು. ಇಂಥ ಕೆಲಸಕ್ಕೆ ಸುತ್ತ ಹತ್ತೂರುಗಳಲ್ಲಿ ಯಾರೇ ಬಂದು ಮಧ್ಯರಾತ್ರಿ ಕರೆದರೂ, ಒಂದಿಷ್ಟೂ ಬೇಸರ ಮಾಡಿಕೊಳ್ಳದೆ ಹೋಗಿ ಚಿಕಿತ್ಸೆ ನೀಡುತ್ತಿದ್ದ ಅಪ್ಪನ ಬಗ್ಗೆ ಪಶುವೈದ್ಯಾಧಿಕಾರಿಗಳು ಸಹ ಅಸೂಯೆಪಟ್ಟದ್ದೂ ಉಂಟು, ಅಚ್ಚರಿ ಪಟ್ಟದ್ದೂ ಉಂಟು. ಒಟ್ಟಾರೆ ಅಪ್ಪನಿಗೆ ಹೊಲಗಳೇ ಪ್ರಯೋಗಾಲಯಗಳಾಗಿದ್ದವು.

ಸುಮಾರು ೫೦ರ ದಶಕದಲ್ಲಿ ಅಪ್ಪ ಮತ್ತು ಊರಿನ ಇತರ ಕೆಲವು ರಂಗಾಸಕ್ತರು ಸೇರಿ 'ಕಲೋಪಾಸಕ ನಾಟ್ಯಸಂಘ' ಎಂಬ ನಾಟ್ಯಮಂಡಳಿಯೊಂದನ್ನು ಆರಂಭಿಸಿ, ಅದರ ಮೂಲಕ ಹಲವು ಊರುಗಳಲ್ಲಿ ಮದಾಲಸಾ, ಜಗಜ್ಯೋತಿ ಬಸವೇಶ್ವರ, ಸೌಭಾಗ್ಯ ಲಕ್ಷ್ಮಿ, ಬಡತನ ಭೂತ, ಹೇಮರಡ್ಡಿ ಮಲ್ಲಮ್ಮ ಮುಂತಾದ ಐತಿಹಾಸಿಕ, ಸಾಮಾಜಿಕ ನಾಟಕಗಳನ್ನೂ, ಐರಾವಣ ಮಹಿರಾವಣ, ಲಂಕಾದಹನ, ಇಂದ್ರಜಿತು ಕಾಳಗ, ನಿಜಗುಣ ಶಿವಯೋಗಿ, ಮಾಯಿ ಆಟ, ಶ್ರೀಕೃಷ್ಣಪಾರಿಜಾತ ಇತ್ಯಾದಿ ದೊಡ್ಡಾಟ, ಸಣ್ಣಾಟ, ಪಾರಿಜಾತಗಳನ್ನು ೮೦ ರ ದಶಕದ ವರೆಗೂ ಪ್ರದರ್ಶಿಸುತ್ತಿದ್ದುದನ್ನು ಜನ ಇನ್ನೂ ಮರೆತಿಲ್ಲ. ಮದಾಲಸಾ ನಾಟಕದಲ್ಲಿ ಮದಾಲಸಾ ಎಂಬ ಮುಖ್ಯ ಸ್ತ್ರೀಪಾತ್ರವನ್ನೂ, ಬಸವೇಶ್ವರ ನಾಟಕದಲ್ಲಿ ಬಿಜ್ಜಳನ ಪಾತ್ರವನ್ನೂ ಧರಿಸಿ ಅಪ್ಪ ರಂಗದ ಮೇಲೆ ಬಂದರೆ ಪ್ರೇಕ್ಷಕರು ಆ ನಟನೆಯನ್ನು ಕಂಡು ನಿಬ್ಬೆರಗಾಗುತ್ತಿದ್ದರು. ಬೇರೆ ಸ್ತ್ರೀಪಾತ್ರಗಳಿಗೆ ಅತಿಥಿ ನಟಿಯರನ್ನು ಕರೆಸಿದರೆ ಅವರನ್ನು ಮನೆಯ ಮಕ್ಕಳಂತೆ ತುಂಬ ಗೌರವದಿಂದ ನೋಡಿಕೊಳ್ಳುವ ಜವಾಬ್ದಾರಿ ಮಾತ್ರ ಅವ್ವನದು.

ಅಪ್ಪ ಒಂದು ಅವಧಿಗೆ ಪಂಚಾಯತಿ ಚೇರಮನ್‌ನಾಗಿ ಆಯ್ಕೆ(ಅವಿರೋಧವಾಗಿ)ಯಾದ ಮೇಲೆ ಅವನನ್ನು ಊರಿನ ಜನ 'ಸರಪಂಚರು' ಎಂದೇ ಕರೆಯತೊಡಗಿದರು. ಆಗ ಊರಿನ, ಕೆಲವೊಮ್ಮೆ ಸುತ್ತಲಿನ ಊರುಗಳ ಎಲ್ಲ ತರಹದ ವ್ಯಾಜ್ಯಗಳನ್ನು ನಮ್ಮೂರಿನ ಗೌಡರ ನೇತೃತ್ವದಲ್ಲಿ ಅಪ್ಪನಂತಹ ಎಂಟ್ಹತ್ತು ಜನ ಸಮಾನ ಮನಸ್ಕರು ಕೂಡಿಕೊಂಡು ಬಗೆಹರಿಸಿಬಿಡುತ್ತಿದ್ದರು. 'ಗ್ರಾಮನ್ಯಾಯದಾನ' ಪದ್ಧತಿಯಲ್ಲಿ ಅಪ್ಪನಿಗೆ ಒಳ್ಳೆಯ ಹೆಸರಿತ್ತು. ಊರಿನ ಜಗಳಗಳನ್ನು, ಸಮಸ್ಯೆಗಳನ್ನು ತೆಗೆದುಕೊಂಡು ಯಾರೂ ಪೋಲೀಸ್ ಸ್ಟೇಶನ್‌ಗೆ ಹೋಗುತ್ತಿರಲಿಲ್ಲ. ವರ್ಷಕ್ಕೊಮ್ಮೆ ಊರೊಳಗಿನ ಬಾವಿಗಳ ಗಂಜಳ ತೆಗೆದು ಸ್ವಚ್ಛ ಮಾಡಿಸುವುದು, ಕುಡಿಯುವ ನೀರಿನ ಬಾವಿಗಳಿಗೆ ಪೊಟ್ಯಾಸಿಯಂ ಪರಮಾಂಗನೇಟ್ ಹಾಕಿಸುವುದು, ಕೆಟ್ಟು ಹೋದ ರಸ್ತೆಗಳನ್ನು ದುರಸ್ತಿ ಮಾಡಿಸುವುದು, ಊರಿನ ಎಲ್ಲ ದನಗಳಿಗೆ ಮುಂಜಾಗ್ರತಾ ಕ್ರಮವಾಗಿ ರೋಗನಿರೋಧಕ ಚುಚ್ಚುಮದ್ದು ಹಾಕಿಸುವುದು ಇತ್ಯಾದಿ ದೈವದ (ಊರೊಟ್ಟಿನ) ಕೆಲಸಗಳೆಲ್ಲವೂ ಅಪ್ಪನ ಮುಖಂಡತ್ವದಲ್ಲೇ ಜರಗುತ್ತಿದ್ದವು. ಅಪ್ಪ ಚೇರಮನ್‌ನಾಗಿದ್ದ ಅವಧಿಯಲ್ಲೇ ನಮ್ಮೂರಿಗೆ ವಿದ್ಯುದ್ದೀಪದ ವ್ಯವಸ್ಥೆ, ಕುಡಿಯುವ ನೀರಿನ ಒಂದು ಬಾವಿ ನಿರ್ಮಾಣಯೋಜನೆ ಕಾರ್ಯಗತಗೊಂಡದ್ದು ಆತನ ಸಾಮಾಜಿಕ

ಕಳಕಳಿಯ ನಿದರ್ಶನಗಳಾಗಿವೆ. ಇಷ್ಟೆಲ್ಲ ಕ್ರಿಯಾಶೀಲತೆಯನ್ನು ಮೈಗೂಡಿಸಿಕೊಂಡಿದ್ದ ಅಪ್ಪ, ಶಿಕ್ಷಣ ಪಡೆದದ್ದು ಕೇವಲ ಮೂರನೇ ಇಯತ್ತೆ ವರೆಗೆ ಮಾತ್ರ: ಇದು ಅಚ್ಚರಿ ಪಡುವ ಸಂಗತಿಯಾಗಿದೆ.

ಅಪ್ಪನ ಈ ಎಲ್ಲ ಕಾರ್ಯಚಟುವಟಿಕೆಗಳ ಕಾರಣವಾಗಿ ಮನೆಗೆ ಬರುತ್ತಿದ್ದ ಜನರನ್ನು ಸತ್ಕರಿಸುವುದು ಅವ್ವನ ಇತರ ದೈನಂದಿನ ಕೆಲಸಗಳ ಭಾಗವೆನಿಸಿತ್ತು. ಇಂಥ ಇನ್ನೂ ಹತ್ತಾರು ಕಾರ್ಯಗಳ ಒತ್ತಡಗಳನ್ನು ತಾಳಿಕೊಳ್ಳುವ ಅಪರೂಪದ ಸಂಯಮಿ ಅವಳಾಗಿದ್ದಳು. ಅವ್ವನ ಕೈಯೊಳಗಿನ ಜಿರಂಜಿ ಅನ್ನ, ಚಕ್ಕುಲಿ, ವಡಿ, ಕಟ್ಟಿನ ಸಾರು, ರೊಟ್ಟಿ, ದಶಮಿ, ಹಿಟ್ಟಿನ ಹೋಳಿಗೆ, ಗುರೆಳ್ಳ ಚಟ್ನಿ, ಬೆಳ್ಳುಳ್ಳಿ ಕೆಂಪಚಟ್ನಿ, ಮಜ್ಜಿಗೆ ಸಾರು ಉಂಡವರು ಆ ರುಚಿಯನ್ನು ಯಾರೂ ಮರೆಯಲು ಸಾಧ್ಯವಿಲ್ಲ. ಮನೆಗೆಲಸದಲ್ಲಿ ಆಕೆ ಎಷ್ಟೊಂದು ನಿಪುಣೆಯೆಂದರೆ, ಅಪ್ಪ ಇತ್ತ ಕಡೆ ನಿಶ್ಚಿಂತನಾಗಿರುತ್ತಿದ್ದ. ದವಸ-ಧಾನ್ಯಗಳನ್ನು ವರ್ಷದುದ್ದಕ್ಕೂ ಕೆಡದಂತೆ ಜತನವಾಗಿಡುವುದರಿಂದ ಹಿಡಿದು, ಕುಟುಂಬದ ಎಲ್ಲ ಸದಸ್ಯರ ಬಟ್ಟೆ-ಬರೆ, ಮದುವೆ-ಮುಂಜವಿ, ಆಸ್ತಿ ಖರೀದಿ, ರೋಗ-ರುಜಿನಗಳ ವರೆಗೂ ಎಲ್ಲ ಖರ್ಚು-ವೆಚ್ಚಗಳನ್ನು ನೋಡಿಕೊಳ್ಳುವ ಜವಾಬ್ದಾರಿ ಅವ್ವನದೇ. ಅಪ್ಪನ ಮನಃಸ್ಥಿತಿ, ನಾಡಿಮಿಡಿತಗಳನ್ನು ತಕ್ಷಣ ಗ್ರಹಿಸುವ ಮತ್ತು ಊರವರ ಸುಖ-ದುಃಖಗಳಿಗೆ ತೀವ್ರವಾಗಿ ಸ್ಪಂದಿಸುವ ಸೂಕ್ಷ್ಮಗ್ರಾಹಿ ಹಾಗೂ ಸಂವೇದಿಯಾಗಿದ್ದಳು ನನ್ನ ಅವ್ವ.

ಊರಲ್ಲಿ ಅಷ್ಟೇ ಅಲ್ಲ, ಅಕ್ಕಪಕ್ಕದ ಹಳ್ಳಿಗಳಲ್ಲೂ ಮನುಷ್ಯರಿಗೆ, ದನಗಳಿಗೆ ರೋಗ-ರುಜಿನಗಳು ಬಂದರೂ ಅವರ ಮನೆಗಳಿಗೆ ಹೋಗಿ ಮಾತಾಡಿಸಿಕೊಂಡು ಬರುತ್ತಿದ್ದ ಅವ್ವ. ತಪ್ಪಿ ಸಾವೇನಾದರೂ ಸಂಭವಿಸಿದರಂತೂ ಮುಗಿದೇ ಹೋಯಿತು. ಅಂಥ ಘಟನೆ ತನ್ನ ಮನೆಯಲ್ಲೇ ಸಂಭವಿಸಿದಂತೆ ಸಂಕಟಪಡುತ್ತಿದ್ದಳು. ಇಂಥ ವಿಷಯಗಳಲ್ಲಿ ಅವ್ವನಿಗೂ, ಅಪ್ಪನಿಗೂ ಅವರ ಅರಿವಿಗೆ ಬಾರದ ಸಮಾನತೆ ಇದ್ದಿತು. ಈ ಎಲ್ಲ ನಿಟ್ಟಿನಿಂದಲೂ ನೋಡುವಾಗ ನನ್ನ ಅವ್ವ-ಅಪ್ಪ ಆದರ್ಶ ದಂಪತಿಗಳಾಗಿದ್ದರು.

ಆದರೆ ಕಾಲ ಗತಿಸಿದಂತೆ, ಅವ್ವ-ಅಪ್ಪ ಕಾಣುತ್ತಿದ್ದ ಕನಸುಗಳು ಭಗ್ನಗೊಳ್ಳತೊಡಗಿದವು. ಮನೆಯ ಸಂಭ್ರಮಕ್ಕೆ ಮಬ್ಬು ಕವಿಯತೊಡಗಿತು. ನಾನು ಬಿ.ಎ. ಅಂತಿಮ ವರ್ಷದಲ್ಲಿ ಓದುತ್ತಿದ್ದಾಗ ನನ್ನ ಅಣ್ಣ ಹಾಗೂ ನನ್ನ ತರುವಾಯದ ಒಬ್ಬ ತಮ್ಮನ ಮದುವೆಯಾಯಿತು. ಒಂದೆರಡು ವರ್ಷ ಕಳೆಯುವಷ್ಟರಲ್ಲಿ ಅವರಲ್ಲಿ ಸ್ವಾರ್ಥ ಪ್ರವೇಶಿಸಿತು. ಆಸ್ತಿ ಭಾಗ ಮಾಡಿಕೊಡಲು ಅವ್ವ-ಅಪ್ಪನನ್ನು ಪೀಡಿಸತೊಡಗಿದರು. ಇದಕ್ಕೆ ಅವರು ಜಗ್ಗದಾಗ ಹೊಲಗೆಲಸಕ್ಕೆ ಹೋಗದೇ ಸತ್ಯಾಗ್ರಹ ಕೈಕೊಂಡವರಂತೆ ಮನೆಯಲ್ಲೇ ಹಗಲು ಹೊತ್ತೂ ಮಲಗಿ ಬಿಡುವ ತಂತ್ರ ಹೂಡಿದರು. ಮನೆಯ ನೆಮ್ಮದಿ ಕದಡತೊಡಗಿತು. ಅಪ್ಪ-ಅವ್ವನ ಮಾತಿಗೆ ಮನ್ನಣೆ ಸಿಗದಾಯಿತು. ಹೊಲಗೆಲಸಗಳು ಹದಗೆಡತೊಡಗಿದವು. ಹೊಲದಲ್ಲಿ ಅಪ್ಪನ ಮೇಲೆ, ಮನೆಯಲ್ಲಿ ಅವ್ವನ ಮೇಲೆ ಒತ್ತಡ ವಿಪರೀತ ಹೆಚ್ಚಿತು. ಅಪ್ಪ, ತನ್ನ ಸಿಟ್ಟನ್ನೆಲ್ಲ ಅವ್ವನ ಮೇಲೆ ತೀರಿಸಿಕೊಳ್ಳತೊಡಗಿದ. ಮನೆ ಎನ್ನುವುದು ಜಗಳ, ಬೈಗುಳಗಳಿಂದ ತುಂಬಿದ ರಣರಂಗವಾಗತೊಡಗಿತು. ಅವಿಭಕ್ತ ಕುಟುಂಬದ ಪರಿಕಲ್ಪನೆಯನ್ನು ಕಟ್ಟಿಕೊಂಡಿದ್ದ ಅಪ್ಪನಲ್ಲಿ ತಾನಿನ್ನು ಅಸಹಾಯಕ ಎಂಬ ಭಾವನೆ ಬೆಳೆಯಿತು. ಅವ್ವ ಈ ಬೆಳವಣಿಗೆಯ ಬಲಿಪಶುವಾಗುವಂತಾಯಿತು. ಇತ್ತ ಅಪ್ಪನ ಮರ್ಜಿ, ಅತ್ತ ಮಕ್ಕಳ ಮರ್ಜಿ ಹಿಡಿದೂ ಹಿಡಿದೂ ಆಕೆ ಕಂಗೆಟ್ಟು ಹೋದಳು.

ಇದನ್ನು ನೋಡಿ ಜನ ನಗತೊಡಗಿದರು. ಮನೆಸತನದ ಬಗೆಗಿನ ಜನರ ಗೌರವ ಕ್ರಮೇಣ ಕಡಿಮೆಯಾಯಿತು. ಅಪ್ಪ ಊರಲ್ಲಿ ಮುಖ ತೋರಿಸಲೂ ಹಿಂಜರಿಯತೊಡಗಿದ. ಬೆಳಗಾಗುವ ಮುಂಚೆ ಹೋಗಿ, ಕತ್ತಲಾದ ಮೇಲೆಯೇ ಮನೆಗೆ ಬರುವುದನ್ನು ರೂಢಿಸಿಕೊಂಡ. ತಾನು ಮೊದಲು ತೊಡಗಿಸಿಕೊಂಡಿರುತ್ತಿದ್ದ ಎಲ್ಲ ಚಟುವಟಿಕೆಗಳಲ್ಲಿಯೂ ನಿರಾಸಕ್ತಿ ಬೆಳೆಸಿಕೊಂಡ. ಬರುತ್ತಿದ್ದ ಉತ್ಪನ್ನದಲ್ಲೂ ಇಳಿಮುಖವಾಯಿತು. ಇನ್ನುಳಿದ ಹೆಣ್ಣುಮಕ್ಕಳ, ಗಂಡುಮಕ್ಕಳ ಮದುವೆ ಮಾಡುವ ಜವಾಬ್ದಾರಿಯನ್ನೂ ಅಪ್ಪ-ಅವ್ವ ಇನ್ನೂ ನಿತ್ತರಿಸಬೇಕಿತ್ತು. ಇದಾವುದರ ಅರಿವು ಇಲ್ಲದ ಅಣ್ಣ, ತಮ್ಮ ತಮ್ಮ ಪಾಲಿಗೆ ಬರಬೇಕಾದುದೆಲ್ಲವನ್ನೂ ಕೊಡುವಂತೆ ಪಟ್ಟು ಹಿಡಿದರು. ಕೊನೆಗೆ ಹತಾಶೆಗೊಂಡ ಅಪ್ಪ-ಅವ್ವ ಅವರಿಬ್ಬರಿಗೂ ತಮ್ಮ ಒಂದೊಂದೇ ಅಂಗಾಂಗಗಳನ್ನು ಕತ್ತರಿಸಿಕೊಡುವಂತೆ ಹೊಲ-ಮನೆ, ದನ-ಕರು, ಗಳೇ-ಗಾಡಿ, ಪಾತ್ರೆ-ಪರಡಿ, ಕಾಳು-ಕಡಿ ಹೀಗೆ ಎಲ್ಲವನ್ನೂ ಹಂಚಿಕೊಟ್ಟು ಬಿಟ್ಟರು. ಆಸ್ತಿ ಕೊಳ್ಳುವಾಗ ಅಪ್ಪ ಮಾಡಿದ್ದ ಸಾಲವನ್ನು ಹಂಚಿಕೊಳ್ಳಲು ಅವರಿಬ್ಬರೂ ಸಿದ್ಧರಾಗಲಿಲ್ಲ. ಇದ್ದ ಸಾಲದ ಜೊತೆಗೆ ಉಳಿದ ಮಕ್ಕಳ ಮದುವೆಯ ಸಾಲವೂ ಸೇರಿಕೊಂಡು ಅಪ್ಪ ಪಾತಾಳಕ್ಕೆ ಕುಸಿದ.

ಉಳಿದ ತಮ್ಮಂದಿರೂ ಮದುವೆ ಮಾಡಿಕೊಂಡ ಕೂಡಲೇ ಅಣ್ಣಂದಿರ ಉಪಾಯವನ್ನೇ ಅನುಸರಿಸಿದರು. ನಾನು ಕಲಿಯಲು ಮುಂದೆ ನೌಕರೀ ಮಾಡಲು ಹೊರಗೇ ಉಳಿಯಬೇಕಾದ್ದರಿಂದ ನನ್ನ ಪಾಲಿನ ಹೊಲ-ಮನೆಯನ್ನೂ ನನ್ನ ಕಡೆಯ ತಮ್ಮ ಕಬಳಿಸಿದ. ಇದಕ್ಕೂ ಪ್ರತಿರೋಧ ಒಡ್ಡುವ ಶಕ್ತಿ ಅಪ್ಪ-ಅಮ್ಮನಿಗೆ ಉಳಿದಿರಲಿಲ್ಲ. ಒಳಗೊಳಗೇ ಅವರು ಮಮ್ಮಲನೇ ಮರುಗುತ್ತಿದ್ದರು.

ಈ ಕಾಲಾವಧಿಯಲ್ಲಿ ಊರಿನ ಚಿತ್ರವೇ ಬದಲಾಯಿತು. ಊರೊಳಗೆ ಪಂಚಾಯತ ರಾಜ್ಯಪರಿಕಲ್ಪನೆ ಪ್ರವೇಶಿಸಿತು. ಗುಂಡಾಗಳು, ರಿಕಾಮಿಗಳು, ಭ್ರಷ್ಟರು ಎಲ್ಲವನ್ನೂ, ಎಲ್ಲರನ್ನೂ ನಿಯಂತ್ರಿಸತೊಡಗಿದರು. ಸಮೀಪದ ಮುಗಟಖಾನ ಹುಬ್ಬಳ್ಳಿಯ ಹತ್ತಿರ ಮಲಪ್ರಭಾ ಸಕ್ಕರೆ ಕಾರಖಾನೆ ಆರಂಭವಾಗಿ ರೈತರೆಲ್ಲ ಭತ್ತ ಬೆಳೆಯುವುದನ್ನು ನಿಲ್ಲಿಸಿ ಹಣದ ಬೆಳೆಯಾದ ಕಬ್ಬು ಬೆಳೆಯತೊಡಗಿದರು. ಕಡಿಮೆ ಕೆಲಸ, ಕೈತುಂಬ ದುಡ್ಡು ಬರತೊಡಗಿದಾಗ ಊರಿನ ಯುವಕರೆಲ್ಲ ಮದ್ಯ ಕುಡಿಯುವ, ಗಾಂಜಾ ಸೇದುವ ಚಟಕ್ಕೆ ಬಲಿಯಾಗಿ ಊರಿನ ಒಳ್ಳೊಳ್ಳೆಯ ಹಿರಿಯರನ್ನೆಲ್ಲ ಮೂಲೆಗುಂಪು ಮಾಡಿದರು. ಇದಕ್ಕೆ ಮೊದಲ ಬಲಿಯಾದದ್ದು ನಮ್ಮ ಮನೆತನ. ಕಬ್ಬು ಹೆಚ್ಚೆಚ್ಚು ಬೆಳೆಯುವ ಹುಚ್ಚಿನಲ್ಲಿ ರಾಸಾಯನಿಕ ಗೊಬ್ಬರ ಹಾಗೂ ಕ್ರಿಮಿನಾಶಕಗಳನ್ನು ಬಳಸಿ, ಬಳಸಿ ನನ್ನ ಸೋದರರು ಭೂಮಿಯನ್ನು ಬಂಜರಾಗಿಸಿದರು. ಆರ್ಥಿಕ ಹೊರೆಯೆಲ್ಲ ಅಪ್ಪ-ಅವ್ವನ ಮೇಲೆ ಬಿದ್ದು, ಅದನ್ನೇ ಮನಸ್ಸಿಗೆ ಹಚ್ಚಿಕೊಂಡು ಗಟ್ಟಿಮುಟ್ಟಾಗಿದ್ದ ಅವ್ವ-ಅಪ್ಪ ಮಕ್ಕಳ ಚಿಂತೆಯಲ್ಲೇ ಚಿತೆಯೇರಿದರು. ಇದು ಮಕ್ಕಳೆನ್ನಿಸಿಕೊಂಡ 'ನಾವು' ಅವ್ವ-ಅಪ್ಪನಿಗೆ ಕೊಟ್ಟ ಕಾಣಿಕೆ, ಪ್ರತಿಫಲ.

ಸ್ವರ್ಗಸ್ಥರಾಗಿರುವ ನನ್ನ ಅವ್ವ-ಅಪ್ಪ ಎಲ್ಲ ಚಿಂತೆಗಳಿಂದ ಈಗಲಾದರೂ ಮುಕ್ತವಾಗಿ, ನಿರ್ಲಿಪ್ತವಾಗಿ ನೆಮ್ಮದಿಯಿಂದ ಇದ್ದಿರಬಹುದೇ? ಇಂಥ ಎಲ್ಲ ಅಪ್ಪ-ಅವ್ವನಿಗೆ ಇದೇ ಅಂತಿಮ ಸುಖವೇ? ಎಂಬ ಪ್ರಶ್ನೆಗಳು ನನ್ನನ್ನು ಜ್ವಲಂತವಾಗಿ ಇರಿಯುತ್ತಿವೆ...

✦ **ಡಾ.ಬಾಳಣ್ಣ ಶೀಗೀಹಳ್ಳಿ,**

'ಉತ್ಕರ್ಷ', ೧/೨೯೯೧, ೧ನೇ ಕ್ರಾಸ್, ಶ್ರೀನಗರ, ಧಾರವಾಡ-೫೮೦ ೦೦೩ ✦

ನನ್ನ ಶಾಲಾ ಗುರು(ದೇವರು)ಗಳು

ರಾಗಿಣಿ ಆರ್.

ಶಾಲೆಯಲ್ಲಿ ಕಲಿಸಿದ ಗುರುಗಳನ್ನು ನೆನಪು ಮಾಡಿಕೊಳ್ಳುವುದೇ ಎಷ್ಟೋ ಜನ್ಮಗಳ ಪುಣ್ಯ. ಅಂಥಾದ್ರಲ್ಲಿ ಅವರುಗಳ ಬಗ್ಗೆ ಬರೆಯುವುದು ಮತ್ತೂ ಪುಣ್ಯ. ಇಂತಹ ಪುಣ್ಯವನ್ನು ಕಲ್ಪಿಸಿಕೊಟ್ಟ ನನ್ನ ಪ್ರೀತಿಯ ಗುರುಗಳಾದ (ಶಾಲೆಯಲ್ಲಿ ಕಲಿಸದ, ಆದರೆ ಸ್ವಲ್ಪವೇ ದಿನಗಳಲ್ಲಿ ಶಾಂತಿ, ಸಹನೆ, ತಾಳ್ಮೆ ಮುಂತಾದವುಗಳನ್ನು ಕಲಿಸಿದ) ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿಯವರಿಗೆ ಮೊದಲಿಗೆ ಮನಸಾರ ವಂದಿಸುತ್ತ ಈ ಲೇಖನವನ್ನು ಬರೆಯುತ್ತಿದ್ದೇನೆ.

ನಾನು ನರ್ಸರಿ, ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ (ಮಾಧ್ಯಮಿಕ) ತರಗತಿಗಳನ್ನು ಓದಿದ್ದು 'ಮಹಾದೇವಿ ಹಿರಿಯ ಪ್ರಾಥಮಿಕ ಶಾಲೆ'ಯಲ್ಲಿ. ಇದು 'ಅಕ್ಕನ ಬಳಗ' ಅಂತಲೇ ಪ್ರಸಿದ್ಧವಾದ ಶಾಲೆ. ಇದು ನಮ್ಮ ಮನೆಗೆ ಬಹಳ ಹತ್ತಿರದಲ್ಲಿದ್ದ ಶಾಲೆ. ಮೈಸೂರಿನ ಸಯ್ಯಾಜಿರಾವ್ ರೋಡ್‌ನಲ್ಲಿ ನಮ್ಮ ಮನೆ. ಅಲ್ಲಿಂದ ರಸ್ತೆ ದಾಟಿ ಒಂದು ಫರ್ಲಾಂಗ್ ದೂರ ಹೋದರೆ ನನ್ನ ಈ ಪುಟ್ಟ ಶಾಲೆ.

ನಮಗೆ ನರ್ಸರಿಯಲ್ಲಿ ಕಲಿಸುತ್ತಿದ್ದ ಇಬ್ಬರು ಶಿಕ್ಷಕಿಯರಲ್ಲಿ ಒಬ್ಬರು ಶಾರದಾ ಟೀಚರ್, ಇನ್ನೊಬ್ಬರು ರತ್ನಮ್ಮ ಟೀಚರ್. ಆಗಿನ ದಿನಗಳಲ್ಲಿ ಹೆಚ್ಚಿನ ಶಾಲೆಗಳಲ್ಲಿ ಅಧ್ಯಾಪಕರನ್ನು ಸರ್ ಅಥವಾ ಸಾರ್, ಅಧ್ಯಾಪಕಿಯರನ್ನು ಟೀಚರ್ ಎಂದು ಕರೆಯುತ್ತಿದ್ದೆವು. ಈಗಿನಂತೆ 'ಮಾಸ್ಟರ್' ಅಥವಾ ಮದುವೆಯಾಗಿದ್ದರೂ ಇಲ್ಲ ಮದುವೆಯಾಗಿಲ್ಲದಿದ್ದರೂ 'ಮಿಸ್' ಎಂದು ಕರೆಯುತ್ತಿರಲಿಲ್ಲ. ಆಗ ಎಲ್.ಕೆ.ಜಿ., ಯು.ಕೆ.ಜಿ. ಅಂತ ಬೇರೆ ಬೇರೆಯಾಗಿ ಇರಲಿಲ್ಲ. ಒಂದು ವರ್ಷದ ನರ್ಸರಿ ಅಷ್ಟೆ. ರತ್ನಮ್ಮ ಟೀಚರ್ ಬೆಳ್ಳಗೆ, ತುಂಬಾ ಚೆನ್ನಾಗಿದ್ದರು. ಯಾವಾಗಲೂ ನಗುಮುಖ, ಮೃದುವಾದ ಮಾತುಗಳು. ಶಾರದಾ ಟೀಚರೂ ಅಷ್ಟೆ, ತುಂಬಾ ಮೃದು ಸ್ವಭಾವದವರು. ಇವರುಗಳು ಏನು ಕಲಿಸಿದರು ಎಂಬುದು ಮರೆತುಹೋಗಿದೆ (ಅ.ಆ.ಇ.ಈ, ಎ.ಬಿ.ಸಿ.ಡಿ, ೧.೨.೩.೪...ನ್ನಂತೂ ಕಲಿಸಿಕೊಟ್ಟಿದ್ದಾರೆ). ಆದರೆ ಬೇರೆ ಬೇರೆ ತರಹದ ಆಟದ ಸಾಮಾನು, ಕುದುರೆಯಲ್ಲಿ ಆಟ ಆಡಿದ್ದು ಚೆನ್ನಾಗಿ ನೆನಪಿದೆ. ಇವರಿಬ್ಬರೂ ಯಾವತ್ತೂ ಬೈದಿದ್ದಾಗಲಿ, ಹೊಡೆದದ್ದಾಗಲಿ ನಮಗೆ ಗೊತ್ತಿಲ್ಲ, ನೆನಪಿಲ್ಲ. ಈಗ ೪೨ ವರ್ಷಗಳ ಹಿಂದೆ ೧೯೬೬ ರಲ್ಲಿ ನಾನು ನರ್ಸರಿಗೆ ಸೇರಿದ್ದು. ಈಗಲೂ ರತ್ನಮ್ಮ ಟೀಚರ್ ನನಗೆ ಸಿಗ್ತಾ ಇರ್ತಾರೆ. ಅದೇ ಮುದ್ದು ನಗುಮುಖ, ಮೃದುವಾದ ಮಾತು. ಯಾವುದಾದರೂ ಮದುವೆ ಸಮಾರಂಭಗಳಿಗೆ ಹೋದಾಗ ಸಿಗ್ತಾರೆ. ಶಾರದಾ ಟೀಚರನ್ನು ನಂತರದಲ್ಲಿ ನೋಡಿದ ನೆನಪಿಲ್ಲ.

೭ನೇ ತರಗತಿಯ ವರೆಗೆ ನಾನು 'ಅಕ್ಕನ ಬಳಗ' ಶಾಲೆಯಲ್ಲಿಯೇ ಕಲಿತೆ. ಅಲ್ಲಿ ನಮಗೆ ಕಲಿಸಿದ ಗುರುಗಳ ಹೆಸರುಗಳು ಪ್ರೇಮ ಟೀಚರ್, ಸುಚಿತ್ರ ಟೀಚರ್, ದಾಕ್ಷಾಯಣಿ ಟೀಚರ್ (ಮುಖ್ಯ ಶಿಕ್ಷಕರು), ಶಾಂತಾ ಟೀಚರ್, ಅಮೃತ ಟೀಚರ್, ಗುರುಸ್ವಾಮಿ ಸಾರ್ ಮತ್ತು ಮುದ್ದುಮಾದಪ್ಪ ಸಾರ್ (ನಾವು 'ಸಾರ್' ಅಂತಿದ್ವಿ). ಪ್ರೇಮ ಎಂಬ ಹೆಸರಿನ ಇಬ್ಬರು ಶಿಕ್ಷಕಿಯರಿದ್ದರು. ಒಬ್ಬರು ಪ್ರೇಮ ಟೀಚರ್ ಸ್ವಲ್ಪ ಸಿಟ್ಟಿನ ಸ್ವಭಾವದವರು. ಸಿಟ್ಟು ಅಂದರೆ ಸ್ಟ್ರಿಕ್ಟು ಅಂತರ್ಥ. ಅಂದರೆ ಅವರು ಹೇಳಿದ ಕೆಲಸವನ್ನು ಸರಿಯಾಗಿ ಮಾಡಬೇಕು. ಇಲ್ಲದಿದ್ದರೆ 'ಕಜ್ಜಾಯ' ಸಿಗ್ತಿತ್ತು. ಆಗ ನಾವು ಏಟನ್ನು ಕಜ್ಜಾಯ ಎಂದು ಹೇಳುತ್ತಿದ್ದೆವು.

ಯಾರಿಗಾದ್ರೂ ಏಟು ಬಿದ್ದರೆ ಎಷ್ಟು ಕಜ್ಜಾಯ ಸಿಕ್ಕಿತು ಅಂತ ಮಾತಾಡಿಕೊಳ್ಳುತ್ತಿದ್ದೆವು. ಪ್ರೇಮ ಟೀಚರ್‌ನಿಂದ ನಾವು ಶಿಸ್ತು ಕಲಿತಿದ್ದೆವು. ಸಮಯಕ್ಕೆ ಸರಿಯಾಗಿ ಹೇಳಿದ ಕೆಲಸ ಮಾಡುವ, ಸರಿಯಾಗಿ ಮಾಡುವ ಅಭ್ಯಾಸ ಬಂದದ್ದೇ ಅವರಿಂದ. ಪ್ರಸ್ತುತ ಇವರು ಶಾಲೆಯ ಮುಖ್ಯೋಪಾಧ್ಯಾಯಿನಿಯಾಗಿದ್ದಾರೆ. ಆಗಾಗ ಇವರನ್ನು ಭೇಟಿ ಮಾಡುತ್ತಿರುತ್ತೇವೆ. ದಾಕ್ಷಾಯಣಿ ಟೀಚರ್ ನಮ್ಮ ಶಾಲೆಯ ಮುಖ್ಯ ಶಿಕ್ಷಕಿ ಆಗಿದ್ದರು. ಅವರ ಮಗ ನನಗೆ ಸಹಪಾಠಿ. ನನಗೆ ಅವನು ಸ್ನೇಹಿತನಾಗಿದ್ದರಿಂದ ಅವರು ಸ್ಟ್ರಿಕ್ಟ್ ಆದರೂ ಅಂಥಾ ಭಯವಿರಲಿಲ್ಲ.

ಗುರುಸ್ವಾಮಿ ಸಾರ್ ನಮಗೆ ಸಮಾಜ ಪಾಠ ಕಲಿಸುತ್ತಿದ್ದರು. ಇವರದ್ದೊಂದು (ಕೆಟ್ಟ) ಸ್ವಭಾವ ಎಂದರೆ ಪ್ರಶ್ನೆಗುತ್ತರ ಬರೆಯಲು ಕೊಡ್ತಿದ್ದರು. ಅದನ್ನು ಬರೆದ ನಂತರ ಅವರ ಟೇಬಲ್ ಹತ್ತಿರ ಹೋಗಿ ತೋರಿಸಿ ರೈಟ್ (ಚಿಕ್ಕವರಿದ್ದಾಗ ಬಳಸುತ್ತಿದ್ದ ಪದ) ಹಾಕಿಸಿಕೊಂಡು ಬರಬೇಕಿತ್ತು. ಅಲ್ಲಿ ಹೋದಾಗ ಕೆಲವರನ್ನು ಹತ್ತಿರಕ್ಕೆ ಎಳೆದುಕೊಂಡು ಮುತ್ತು ಕೊಟ್ಟು ಬಿಡುತ್ತಿದ್ದರು. ಕೆಲವು ಸಾರಿ ಕೆನ್ನೆಗೆ, ಕೆಲವು ಸಾರಿ ಕೈಗೆ ಕೊಡುತ್ತಿದ್ದರು. ಇದು ನಾವು ೩-೪ ನೇ ತರಗತಿಯಲ್ಲಿದ್ದಾಗಿನ ಮಾತು. ಆದರೆ ಅವರು ಯಾಕೆ ಹಾಗೆ ಕೊಡುತ್ತಿದ್ದರು, ಚೆನ್ನಾಗಿ ಬರೆದವರಿಗೆ ಮುತ್ತಿಡುತ್ತಿದ್ದರೊ ಅಥವಾ ಅದು ಅವರ ದುರಭ್ಯಾಸವಾಗಿತ್ತೊ ಎಂಬುದು ನನಗೆ ತಿಳಿಯದು. ನಾನು ಆದಷ್ಟೂ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದುದು ಮಾತ್ರ ನೆನಪಿದೆ. ಕೆಲವರು ಸಿಕ್ಕಿಹಾಕಿಕೊಂಡವರು ಮೆಲ್ಲಗೆ ಥೂ, ಥೂ ಅಂತ ಮುಖ, ಕೈ ಒರೆಸಿಕೊಂಡು ಬರುತ್ತಿದ್ದ ದೃಶ್ಯ ಇವತ್ತಿಗೂ ಕಣ್ಣಿಗೆ ಕಟ್ಟಿದಂತಿದೆ. ಅವರು ಪಾಠ ಚೆನ್ನಾಗಿ ಮಾಡುತ್ತಿದ್ದುದರಿಂದ ಇದೆಲ್ಲಾ ಅಷ್ಟು ದೊಡ್ಡದಾಗಿ ಕಾಣ್ತಿರಲಿಲ್ಲ. ನಂತರದ ದಿನಗಳಲ್ಲಿ ನಾನಿವರನ್ನು ನೋಡಲೇ ಇಲ್ಲ.

ಸುಚಿತ್ರ ಟೀಚರ್, ಅಮೃತ ಟೀಚರ್ ಮತ್ತು ಶಾಂತಾ ಟೀಚರ್ ಎಲ್ಲರೂ ತುಂಬಾ ಒಳ್ಳೆಯವರೇ. ಪಾಠವನ್ನೂ ಕೂಡ ಚೆನ್ನಾಗಿ ಕಲಿಸುತ್ತಿದ್ದರು. ಶಾಂತಾ ಟೀಚರ್ ಅಂದರೆ ನಮಗೆ ತುಂಬಾ ಸಲಿಗೆ. ತರಗತಿಯಲ್ಲಿ ಇದ್ದಷ್ಟು ಹೊತ್ತು ಮಾತ್ರ ಇವರ ಜೊತೆಗೆ ಟೀಚರ್-ವಿದ್ಯಾರ್ಥಿನಿಯ ಸಂಬಂಧ, ಶಾಲೆಯ ಗಂಟೆ ಹೊಡೆದು ಮನೆಗೆ ಹೋಗಲು ಹೊರಗೆ ಬಂದ ನಂತರ ತಾಯಿ-ಮಕ್ಕಳ ಸಂಬಂಧ. ಟೀಚರ್ ಮನೆಗೆ ಹೋಗುವುದು, ಅವರ ಹತ್ತಿರ ಮಾತನಾಡುವುದು ಇದೆಲ್ಲಾ ತುಂಬಾ ಖುಷಿ ಕೊಡುತ್ತಿದ್ದ ವಿಚಾರ. ಅವರು ಹೇಳಿದ ಎಲ್ಲಾ ಕೆಲಸ ಸಂತೋಷದಿಂದ ಮಾಡುತ್ತಿದ್ದೆವು. ಅಲ್ಲೇ ಪಕ್ಕದಲ್ಲಿದ್ದ ಗುರುಪ್ರಸಾದ್ ಹೋಟೆಲಿನಿಂದ ಕೆಲವು ಸಾರಿ ಮಧ್ಯಾಹ್ನದ ಊಟದ ಸಮಯದಲ್ಲಿ ಮಸಾಲೆ ದೋಸೆ ಕೂಡ ತಂದುಕೊಡುತ್ತಿದ್ದೆವು. (ಶಾಂತಾ ಟೀಚರಿಗೆ ಮಾತ್ರವಲ್ಲ ಆದರೆ ಯಾರೂ ಯಾರಿಗೆ ಎಂಬುದು ನೆನಪಿಲ್ಲ.) ಈ ಸಲಿಗೆಯನ್ನು ಎಂದೂ ದುರುಪಯೋಗ ಪಡಿಸಿಕೊಳ್ಳುತ್ತಿರಲಿಲ್ಲ.

ಇನ್ನು ಮುದ್ದುಮಾದಪ್ಪ ಸಾರ್ ಬಗ್ಗೆ ಹೇಳಬೇಕೆಂದರೆ ಮನಸ್ಸು ಪುಳಕಿತಗೊಳ್ಳುತ್ತದೆ. ಹೆಸರಿಗೆ ತಕ್ಕಂತೆ ಮುದ್ದುಮುದ್ದಾಗಿದ್ದರು. ವಯಸ್ಸಿನಲ್ಲಿ ಬಹಳ ಚಿಕ್ಕವರು. ಡಿಗ್ರಿ ಮುಗಿಸುತ್ತಿದ್ದಂತೆಯೇ ಕೆಲಸಕ್ಕೆ ಸೇರಿರಬಹುದು. ಅವರು ಕಲಿಸುತ್ತಿದ್ದ ರೀತಿ, ಅರ್ಥ ಮಾಡಿಸುತ್ತಿದ್ದ ರೀತಿ ಎಂದಿಗೂ ಮರೆಯಲು ಸಾಧ್ಯವಿಲ್ಲ. ಏನೇ ಸಂದೇಹವಿದ್ದರೂ ಹೆದರದೆ ಅವರ ಹತ್ತಿರ ಹೋಗಿ ಹೇಳಿಸಿಕೊಳ್ಳುತ್ತಿದ್ದೆವು. ತಿಳಿಯದಿರುವುದನ್ನು ಹೇಳಿಸಿಕೊಳ್ಳ ಬೇಕೆಂಬ ಪರಿಪಾಠ ಬೆಳೆಸಿಕೊಟ್ಟವರು ಅವರು. ಎಂದೂ ಯಾರಿಗೂ ಹೊಡೆದವರಲ್ಲ, ನಗುನಗುತ್ತಲೇ ಎಲ್ಲಾ ಕೆಲಸಗಳನ್ನು ಮಾಡಿಸುತ್ತಿದ್ದರು. ಬರೀ ಪಾಠವನ್ನೇ ಮಾಡುತ್ತಿರಲಿಲ್ಲ.

ತರಗತಿಯಲ್ಲಿ ನೀತಿಪೂರ್ಣವಾದ, ದೇಶಭಕ್ತಿಯ ಹಾಡುಗಳನ್ನು ಹಾಡುತ್ತಿದ್ದರು. ಅವರು ಹಾಡಿದ 'ಗುಟ್ಟೊಂದು ಹೇಳುವೆ ಪುಟಾಣಿ ಮಕ್ಕಳೆ, ಕೊಟ್ಟಿದ್ದು ತನಗೆ, ಬಚ್ಚಿಟ್ಟಿದ್ದು ಪರರಿಗೆ' ಹಾಡು ಇಂದಿಗೂ ಎಂದೆಂದಿಗೂ ಮರೆಯಲಾರೆ. ಆ ಹಾಡಿನ ಪ್ರತಿಯೊಂದು ಸಾಲಿನಲ್ಲೂ ನೀತಿ, ದೇಶಭಕ್ತಿ ತುಂಬಿತ್ತು. ಆ ಗೀತೆಯ ಮಧ್ಯದ ಒಂದು ಸಾಲು ಹೀಗಿತ್ತು, 'ನೆಹರು ಗಾಂಧಿಯಂತೆ ನಿಮ್ಮಲ್ಲಿ ಯಾರು ಇಹರೊ, ಝಾನ್ಸಿ ರಾಣಿ ಲಕ್ಷ್ಮೀ, ಕಸ್ತೂರಿಬಾಯಿ ಯಾರೊ.' ಆಡಂಬರದ ಇಂದಿನ ಗೀತೆಗಳ ಮಧ್ಯೆ ಇಂತಹ ಗೀತೆಗಳು ಎಲ್ಲಿ ಮಾಯವಾಗಿಬಿಟ್ಟಿವೆಯೊ ಗೊತ್ತಿಲ್ಲ. ಹೀಗೆ ಅತಿ ಆಸಕ್ತಿಪೂರ್ಣ (ಇಂಟರೆಸ್ಟಿಂಗ್) ತರಗತಿ ಎಂದರೆ ಅವರದ್ದೇ ತರಗತಿ. ಎಲ್ಲರೂ ಅವರ ಅವಧಿಗಾಗಿ ಕಾಯುತ್ತಿದ್ದೆವು. ತರಗತಿಯನ್ನು ಆಸಕ್ತಿಪೂರ್ಣ, ಆಕರ್ಷಣೀಯ ಮಾಡುವ ಕಲೆ ಅವರಿಗೆ ಕರಗತವಾಗಿತ್ತು. ಇಂತಹ ಅಧ್ಯಾಪಕರು ಇಂದಿನ ದಿನಗಳಲ್ಲಿ ಬೆರಳೆಣಿಕೆಯಷ್ಟು ಮಾತ್ರ ಎಂದೇ ಹೇಳಬಹುದು. ಅವರನ್ನು ಕಂಡರೆ ಬಹಳ ಶ್ರದ್ಧೆ, ಭಕ್ತಿ, ಗೌರವ, ಶ್ರದ್ಧೆಯಿಂದ ಕೂಡಿದ ಒಂದು ಭಯ.

ಅವರೂ ಅಷ್ಟೆ. ನಮ್ಮ ಮನೆಗೆ ಬಹಳ ಹತ್ತಿರದಲ್ಲಿ ಒಂದು ಕೊಠಡಿ ಬಾಡಿಗೆಗೆ ತೆಗೆದುಕೊಂಡು ವಾಸವಾಗಿದ್ದರು. ಇವರು ಮೂಲತಃ ನಂಜನಗೂಡಿನವರಾಗಿದ್ದರು ಅನ್ನಿಸುತ್ತದೆ, ಹಾಗೆ ಎಲ್ಲೋ ಕೇಳಿದ ನೆನಪು. ನನ್ನ ಆಪ್ತ ಗೆಳತಿ ವಾರುಣಿಯ ಮನೆಯಲ್ಲಿಯೇ ಅವರು ಬಾಡಿಗೆಗಿದ್ದರು. ದಿನಾಲೂ ವಾರುಣಿಯ ಮನೆಗೆ ಹೋಗುವ ನೆಪದಲ್ಲಿ ಅವರನ್ನು ನೋಡಿ ಮಾತನಾಡಿಸಿ ಬರುತ್ತಿದ್ದೆವು (ನಾನು, ಅಕ್ಕ). ನನ್ನ ಅಕ್ಕ, ನಾನು, ನನ್ನ ತಮ್ಮ ಮೂವರೂ ಈ ಶಾಲೆಯ ವಿದ್ಯಾರ್ಥಿಗಳು. ನನ್ನ ಅಕ್ಕ ನನಗಿಂತ ೧೪ ತಿಂಗಳಷ್ಟೆ ದೊಡ್ಡವಳು. ಒಂದು ತರಗತಿ ವ್ಯತ್ಯಾಸ. ಯಾವಾಗಲೂ ಒಟ್ಟಿಗೆ ಇರುತ್ತಿದ್ದೆವು. ಇಬ್ಬರೂ ವಾರುಣಿಯ ಮನೆಗೆ ಸಾಯಂಕಾಲದ ಹೊತ್ತು, ರಜಾ ದಿನಗಳಲ್ಲಿ ಹೋಗುತ್ತಿದ್ದೆವು. ಸುಮಾರು ಹೊತ್ತು ಅಲ್ಲಿ ಆಟ ಆಡಿಕೊಂಡು ಸಾರ್‌ರವರನ್ನು ಮಾತನಾಡಿಸಿಕೊಂಡು, ಅವರ ಹತ್ತಿರ ಹಾಡು ಹೇಳಿಸಿ ಮನೆಗೆ ಬರುತ್ತಿದ್ದೆವು.

ಈಗಿನಂತೆ ಆಗ ಟಿ.ವಿ.ಯ ಹೊಡೆತ ಇರಲಿಲ್ಲ. ಎಲ್ಲರ ಮನೆಯ ಮಕ್ಕಳೂ ಸಾಯಂಕಾಲ ಐದರಿಂದ ಆರು ಆರೂವರೆ ವರೆಗೆ ಕಡ್ಡಾಯವಾಗಿ ಹೊರಾಂಗಣದಲ್ಲಿ ಆಟ ಆಡುತ್ತಿದ್ದೆವು. ನಂತರ ಮನೆಗೆ ಬಂದು ಮುಸ್ಸಂಜೆಗೆ ಕೈ-ಕಾಲು ಮುಖ ತೊಳೆದು ಒಂದೆರಡು ಶ್ಲೋಕಗಳನ್ನು ಪಠಿಸಿ, ದೇವರಿಗೆ ನಮಸ್ಕರಿಸಿ, ಮನೆಯಲ್ಲಿರುವ ಹಿರಿಯರೆಲ್ಲರಿಗೂ ಕಾಲಿಗೆ ನಮಸ್ಕರಿಸಿ ಓದಲು ಕುಳಿತುಕೊಳ್ಳುತ್ತಿದ್ದೆವು. ಮನೆಯೇ ಮೊದಲ ಪಾಠಶಾಲೆ. ಜನನಿ ತಾನೆ ಮೊದಲ ಗುರುವು ಎಂಬಂತೆ ಅಮ್ಮನೇ ಮೊದಲ ಟೀಚರ್. ಎಲ್ಲ ಪಾಠಗಳಿಂದ ಪ್ರಶ್ನೆಗೆ ಉತ್ತರ ಕಲಿತು ಅವರಿಗೆ ಒಪ್ಪಿಸುತ್ತಿದ್ದೆವು. ನಮ್ಮ ತಂದೆಯವರ ಪರಿಚಯ ಎಲ್ಲಾ ಟೀಚರುಗಳಿಗೂ ಇತ್ತು. ಹಾಗಾಗಿ ನಮಗೆ ಶಾಲೆಯಲ್ಲಿ ಎಲ್ಲರನ್ನೂ ಕಂಡರೆ ಶ್ರದ್ಧೆ, ಭಕ್ತಿ, ಭಯ, ಗೌರವ ಮತ್ತಷ್ಟು ಹೆಚ್ಚಾಗಿತ್ತು. (ನಮ್ಮ ಮೇಲೆ ಏನಾದರೂ ದೂರು ಹೇಳಿಬಿಟ್ಟರೆ ಎಂಬ ಭಯ.) ನಾವುಗಳು ಓದಿನಲ್ಲೂ ಹಿಂದೆ ಉಳಿದ ಮಕ್ಕಳಾಗಿರಲಿಲ್ಲ. ಶಾಲೆಯಲ್ಲಿ ನಮಗೆ ಒಳ್ಳೆಯ ಹೆಸರಿತ್ತು. ಇದಿಷ್ಟೂ ನಮಗೆ ಜೀವನದ ಅಡಿಪಾಯ ಹಾಕಿಕೊಟ್ಟ ಶಾಲೆ ಹಾಗೂ ವಜ್ರಸಮಾನರಾದ ಗುರುಗಳ ವಿಷಯವಾಯಿತು.

ಈ ಅಡಿಪಾಯದ ಮೇಲೆ ಸುಂದರವಾದ ಕಟ್ಟಡ ಕಟ್ಟಲು ಪ್ರಾರಂಭಿಸಿದ ಪ್ರೌಢಶಾಲೆ ಹಾಗೂ ಪ್ರೌಢಶಾಲಾ ಶಿಕ್ಷಕರನ್ನು ಸ್ಮರಿಸಿಕೊಂಡು ಅವರುಗಳಿಗೆ ಗೌರವ ಸಲ್ಲಿಸುವ ಸರದಿ.

ನಮ್ಮ ಪ್ರೌಢಶಾಲೆಯ ಹೆಸರು 'ಶ್ರೀಕಾಂತ ಬಾಲಿಕಾ ಪ್ರೌಢಶಾಲೆ'. ೭ನೇ ತರಗತಿಯ ವರೆಗೆ

ಸಹ–(ಹುಡುಗರು, ಹುಡುಗಿಯರು ಒಟ್ಟಾಗಿ)ಶಿಕ್ಷಣ ಪಡೆದ ನಮ್ಮನ್ನು ತಂದೆಯವರು ಬಾಲಿಕಾ ಪ್ರೌಢಶಾಲೆಗೆ ಸೇರಿಸಿದರು. ಆಗಿನ ಕಾಲದಲ್ಲಿ ಈ ಶಾಲೆಯ ಕೊಠಡಿಗಳು ಶೀಟ್ ಹೊದಿಸಿದ ಕೊಠಡಿಗಳು. ಈಗಿನ ಕಾಲದ ಮಕ್ಕಳ ಹಾಗೆ ನಾವು ಇಂಥದ್ದೇ ಐಷಾರಾಮಿ ಶಾಲೆಗೆ ಸೇರಬೇಕೆಂದು ಕೇಳಿದವರಲ್ಲ. (ಕೇಳಲು ತಾಕತ್ತೆಲ್ಲಿತ್ತು? ಹಿರಿಯರೆದುರಿಗೆ ಮಾತನಾಡುವುದೆಂತು?) ಹಾಗೆಂದ ಮಾತ್ರಕ್ಕೆ ನಮ್ಮ ಶಾಲೆ ಏನೂ ಕಳಪೆ ಶಾಲೆಯಲ್ಲ. ಸಾಕಾಗುವಷ್ಟು ಕೊಠಡಿಗಳು, ಅಂದಿನ ಮಕ್ಕಳ ಸಂಖ್ಯೆಗೆ ಬೇಕಾಗುವಷ್ಟು ಆಟದ ಮೈದಾನ, ಆಟದ ಸಲಕರಣೆಗಳು, ಸಾಕಷ್ಟು ಅಧ್ಯಾಪಕರು, ಉತ್ತಮವಾದ ಬೋಧನೆ, ಉತ್ತಮವಾದ ಪ್ರಯೋಗಶಾಲೆ ಎಲ್ಲವೂ ಇದ್ದವು. ಕಲಿಯುವುದಕ್ಕೆ ಮತ್ತೇನು ಬೇಕು? ಉತ್ತಮವಾದ ವಾತಾವರಣಕ್ಕೆ ಕೊರತೆಯಿರಲಿಲ್ಲ. ಇಲ್ಲಿ ಕಲಿಸಿದ ಎಲ್ಲಾ ಶಿಕ್ಷಕರೂ ಒಂದೊಂದು ರತ್ನಗಳೆಂದೇ ಹೇಳಬಹುದು. ಅವರುಗಳು ಕಲಿಸಿರುವ ಒಂದೊಂದು ವಿಷಯಗಳೂ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿವೆ.

ನನ್ನ ಸಂಸ್ಕೃತ ಅಧ್ಯಾಪಕರ ಹೆಸರು ಆರ್. ಕೃಷ್ಣಮೂರ್ತಿ (ಆರ್.ಕೆ.). ಎಲ್ಲಾ ಶಿಕ್ಷಕರನ್ನೂ ಅವರ ಮೊದಲಕ್ಷರದಿಂದಲೇ ಗುರುತಿಸುತ್ತಿದ್ದೆವು. ಇವರು ಬಹಳ ದೊಡ್ಡ ಸಂಸ್ಕೃತ ಪಂಡಿತರು. ಇವರ ತರಗತಿ ಎಂದರೆ ಎಲ್ಲಾ ವಿದ್ಯಾರ್ಥಿನಿಯರಿಗೂ ಸಂತೋಷ. ಏಕೆಂದರೆ ಇವರು ಯಾರನ್ನೂ ಬೈಯುತ್ತಿರಲಿಲ್ಲ. ಪಾಠ ಮಾಡಿಬಿಟ್ಟು ನೋಟ್ಸ್‌ನ್ನು ಕಪ್ಪುಹಲಗೆಯ ಮೇಲೆ ಬರೆಯಲು ನಮ್ಮಲ್ಲಿಯೇ ಯಾರನ್ನಾದರೂ ಕರೆಯುತ್ತಿದ್ದರು. ಹೆಚ್ಚಾಗಿ ನಾನು ಅಥವಾ ನನ್ನ ಗೆಳತಿ ಪದ್ಮಿನಿಯೇ ಬರೆಯುತ್ತಿದ್ದುದು. ಈ ಮಾಸ್ತರರ ಜೊತೆ ಬಹಳ ಸಲಿಗೆ. ಅಷ್ಟೇ ಗೌರವವೂ ಇತ್ತು. ಸಂಸ್ಕೃತ ಪರೀಕ್ಷೆಯಲ್ಲಿ ಯಾವಾಗಲೂ ೨೫ ಕ್ಕೆ ೨೩–೨೪ ಅಂಕಗಳೇ. ಕಡಿಮೆ ಅಂಕಗಳು ಬಂದದ್ದೇ ನೆನಪಿಲ್ಲ. ಎರಡು ವರ್ಷ ಅವರು ಕಲಿಸಿದರು.

ನಾನು ಹತ್ತನೇ ತರಗತಿಗೆ ಬಂದಾಗ ಅವರ ಸ್ಥಳಕ್ಕೆ ಮತ್ತೊಬ್ಬ ಅಧ್ಯಾಪಕರು ಬಂದರು. ಅವರು ವಯಸ್ಸಿನಲ್ಲಿ ಸ್ವಲ್ಪ ಚಿಕ್ಕವರು. ನಾವು ವಯಸ್ಸಿಗೆ ಬಂದಂತಹ ಹುಡುಗಿಯರು. ನಮ್ಮನ್ನು ಅವರು ಕಾಣುತ್ತಿದ್ದ ದೃಷ್ಟಿಯೇ ಬೇರೆ. ಎಲ್ಲಾ ವಿಷಯಗಳನ್ನು ಒಂದು ಕೊಠಡಿಯಲ್ಲಿ ಕಲಿಯುತ್ತಿದ್ದರೆ, ಸಂಸ್ಕೃತದ ಹುಡುಗಿಯರು ಸಂಸ್ಕೃತ ಅವಧಿಗೆ ಬೇರೆ ಕೊಠಡಿಗೆ ಹೋಗಬೇಕಿತ್ತು. ಹಾಗೆ ಹೋಗಲು ದೊಡ್ಡ ಸ್ಪರ್ಧೆಯೇ ನಡೆಯುತ್ತಿತ್ತು. ಯಾಕೆಂದರೆ ಆ ಸಂಸ್ಕೃತದ ಕೊಠಡಿಯಲ್ಲಿ ಎಲ್ಲರಿಗೂ ಬೆಂಚಿನ ಮಧ್ಯದ ಸೀಟೇ (ಆಸನ) ಬೇಕಾಗುತ್ತಿತ್ತು. ಬೆಂಚಿನ ತುದಿಯಲ್ಲಿ ಕೂರಲು ಎಲ್ಲರೂ ಹೆದರುತ್ತಿದ್ದೆವು. ಆ ಮಾಸ್ತರರು ಹುಡುಗಿಯರ ಬಗ್ಗೆ ಇಟ್ಟಿದ್ದ ಅಲ್ಪಬುದ್ಧಿಯೇ ಇದಕ್ಕೆ ಕಾರಣ. ಇವರಿಂದ ವಿಧಿ ಇಲ್ಲದೆ ನಾವು ಪಾಠ ಕಲಿಯಬೇಕಾಗಿತ್ತು. ಇದರ ಬಗ್ಗೆ ಶಾಲೆಯಲ್ಲಿ ಯಾರಿಗೆ ಹೇಳಿಕೊಳ್ಳಲೂ ಭಯ, ಮನೆಯಲ್ಲಿಯೂ ಹೇಳಲು ಭಯ. ಹೇಗೋ ಕಷ್ಟದಲ್ಲಿ ನಿಭಾಯಿಸುತ್ತಿದ್ದೆವು. ಇತ್ತೀಚಿನ ದಿನಗಳಲ್ಲಿ ಪತ್ರಿಕೆಗಳಲ್ಲಿ ಶಿಕ್ಷಕರೇ ವಿದ್ಯಾರ್ಥಿಗಳ ಮೇಲೆ ದುರಾಚಾರ ನಡೆಸಿದ ಸಮಾಚಾರಗಳನ್ನು ಓದಿದಾಗ ನನಗೆ ಆ ದಿನಗಳ ನೆನಪಾಗುತ್ತದೆ. ಆದರೆ ಈ ಕೆಳಮಟ್ಟದ ಕೆಟ್ಟ ಶಿಕ್ಷಕ ಅವರಾಗಿರಲಿಲ್ಲ. ಅವರಿಗೂ ಚಿಕ್ಕ ವಯಸ್ಸಾಗಿದ್ದರಿಂದ ಸ್ವಲ್ಪ ಶೋಕಿ ತೆಗೆದುಕೊಳ್ಳುತ್ತಿದ್ದರು ಎನಿಸುತ್ತದೆ. ಇವರು ಆಗಾಗ ನನಗೆ ಹೊರಗಡೆ ಎಲ್ಲಿಯಾದರೂ ಕಾಣಿಸಿಕೊಳ್ತಾರೆ. ಆದರೆ ಅವರನ್ನು ಮಾತನಾಡಿಸುವ ಸಾಹಸ ಮಾತ್ರ ನಾನು ಮಾಡಿಲ್ಲ, ಮಾಡುವುದೂ ಇಲ್ಲ. ನಮ್ಮ ಆ ಮೊದಲಿನ ಮಾಸ್ತರು ಇನ್ನಿಲ್ಲ (ಮೃತರಾದರು). ಅವರ ಮನೆ ನಮ್ಮ ಮನೆಗೆ ಹತ್ತಿರವೇ ಇತ್ತು. ದಿನಾಲೂ ಅವರ

ಮನೆಗೆ ನಾನು, ಅಕ್ಕ ಹೋಗುತ್ತಿದ್ದೆವು. ಆ ಮಾಸ್ತರರ ತಂಗಿಯೂ ನಮಗೆ ಬಹಳ ಚೆನ್ನಾಗಿ ಗೊತ್ತು, ಪರಿಚಯ.

ನಮ್ಮ ಇಂಗ್ಲಿಷ್ ಟೀಚರ್ ವೈ. ಸರಳಕುಮಾರಿಯವರು (ವೈ.ಎಸ್.) ಬಹಳ ಸಿಟ್ಟು. ಆದರೆ ಮನಸ್ಸು ಅಷ್ಟೇ ಒಳ್ಳೆಯದು. ಇವರೂ ಸಹ ನಮ್ಮ ಪ್ರೇಮ ಟೀಚರ್ ಹಾಗೇನೆ. ಇವರನ್ನು ಕಂಡರೆ ವಿಪರೀತ ಭಯ. ಆದರೆ ಶಾಲೆಯಲ್ಲಿದ್ದಷ್ಟು ಹೊತ್ತು ಮಾತ್ರ. ಹೊರಗೆ ಬಂದ ಮೇಲೆ ಅಷ್ಟೇ ಪ್ರೀತಿ. ಯಾವುದಾದರೂ ಶನಿವಾರ, ಭಾನುವಾರಗಳಲ್ಲಿ ನಾವೆಲ್ಲಾ ಗೆಳತಿಯರು ಸೇರಿ ಅವರ ಮನೆಗೆ ಹೋಗುತ್ತಿದ್ದೆವು. ತುಂಬಾ ಪ್ರೀತಿಯಿಂದ ತಿಂಡಿ, ಬಿಸ್ಕತ್ತು, ಜ್ಯೂಸ್ ಎಲ್ಲ ಕೊಡ್ತಿದ್ರು. ಚೆನ್ನಾಗಿ ಓದಬೇಕು ಅಂತ ಬುದ್ಧಿವಾದ ಹೇಳುತ್ತಿದ್ದರು. ತರಗತಿಯಲ್ಲಿ ಏನಾದ್ರೂ ಅರ್ಥವಾಗದ ವಿಷಯ ಇದ್ದರೆ ಅದನ್ನೂ ಹೇಳಿಕೊಡುತ್ತಿದ್ದರು.

ನಮ್ಮ ಹಿಂದೀ ಟೀಚರ್ ಉಮಾರಾಣಿಯವರು. ಇವರನ್ನು ನಾನು ಮರೆಯುವಂತೆಯೇ ಇಲ್ಲ. ಇವರಿಗೆ ನನ್ನನ್ನು ಕಂಡರೆ ತುಂಬಾ ಪ್ರೀತಿ. ನಾನು ಹಿಂದಿಯಲ್ಲಿ ಬಹಳ ಜಾಣೆ. ಹಾಗಂತ ಟೀಚರ್ ಹೇಳ್ತಿದ್ರು (ನಾನಲ್ಲ). ಹತ್ತನೇ ತರಗತಿ ಉತ್ತೀರ್ಣಳಾಗುವಷ್ಟರಲ್ಲಿ ನಾನು ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆ ನಡೆಸುವ ಪರೀಕ್ಷೆ ರಾಷ್ಟ್ರಭಾಷಾ ಪ್ರವೀಣ್‌ನಲ್ಲಿ ಉತ್ತೀರ್ಣಳಾಗಿಬಿಟ್ಟಿದ್ದೆ. ಇದು ಎಮ್.ಎ. ಪರೀಕ್ಷೆಗೆ ತತ್ಸಮಾನ ಪರೀಕ್ಷೆಯಾಗಿತ್ತು. ಆದ್ದರಿಂದ ಅವರಿಗೆ ನನ್ನನ್ನು ಕಂಡರೆ ತುಂಬಾ ಇಷ್ಟ. ನನಗೂ ಅಷ್ಟೆ. ಅವರು ಯಾವತ್ತೂ ಯಾವ ಶಿಕ್ಷೆಯನ್ನೂ ಕೊಡುತ್ತಿರಲಿಲ್ಲ. ಅವರೇ ಯಾಕೆ ಯಾವ ಟೀಚರ್ ಹತ್ತಿರಾನೂ ನಾನು ಶಿಕ್ಷೆ ಪಡೆದಿಲ್ಲ. ಅಪ್ಪಿತಪ್ಪಿ ತಪ್ಪು ಮಾಡುತ್ತಿದ್ದುದರಿಂದ ನನಗೆ ಶಿಕ್ಷೆ ಸಿಗುತ್ತಿರಲಿಲ್ಲ. ಈ ಸಂದರ್ಭದಲ್ಲಿ ಹಿಂದೀ ಅವಧಿಯಲ್ಲಿ ನಡೆದ ಒಂದು ಘಟನೆ ನೆನಪಿಗೆ ಬರುತ್ತದೆ. ನಮ್ಮ ಹಿಂದೀ ಟೀಚರ್‌ಗೆ ತರಗತಿಗೆ ಪಠ್ಯಪುಸ್ತಕ ತರದಿದ್ದರೆ ಬಹಳ ಕೋಪ ಬರುತ್ತಿತ್ತು. ತಂದೇ ತರಬೇಕು, ತರದಿದ್ದರೆ ಆ ಹುಡುಗಿಯರನ್ನು ಬೆಂಚ್ ಮೇಲೆ ಅವಧಿ ಮುಗಿಯುವ ವರೆಗೂ (೪೫ ನಿಮಿಷ) ನಿಲ್ಲಿಸುತ್ತಿದ್ದರು. ಇವರೊಬ್ಬರೇ ಹೀಗೆ ಮಾಡುತ್ತಿದ್ದವರು. ಅದಕ್ಕೆ ಎಲ್ಲರೂ ಪುಸ್ತಕವನ್ನು ಕಡ್ಡಾಯವಾಗಿ ತರುತ್ತಿದ್ದರು.

ನಾನು ಒಂದು ದಿನ ಪುಸ್ತಕ ತಂದಿರಲಿಲ್ಲ. ಮೊದಲನೇ ಬೆಂಚ್‌ನಲ್ಲಿ ಬೇರೆ ಕುಳಿತುಕೊಳ್ಳುತ್ತಿದ್ದೆ. ನಮ್ಮ ಸ್ಕೂಲಿನಲ್ಲಿ ಪರೀಕ್ಷೆಯಲ್ಲಿ ರ್‍ಯಾಂಕ್ ಪಡೆದ ಕ್ರಮದಲ್ಲಿ ಕೂರಿಸುತ್ತಿದ್ದರು. ನಾನು ಯಾವಾಗಲೂ ಮೊದಲನೆ ಅಥವಾ ಎರಡನೆ ರ್‍ಯಾಂಕ್ ಪಡೆಯುತ್ತಿದ್ದೆ. ಹಾಗಾಗಿ ಮೊದಲನೆ ಬೆಂಚ್‌ನಲ್ಲೇ ಕೂರಬೇಕು. ಆಗ ವಿದ್ಯಾರ್ಥಿನಿಯರ ಸಂಖ್ಯೆಯೂ ಕಡಿಮೆ. ಅದರಲ್ಲೂ ಆಂಗ್ಲ ಮಾಧ್ಯಮದಲ್ಲಿ ನಾವು ೨೦ ವಿದ್ಯಾರ್ಥಿನಿಯರು ಮಾತ್ರ ಇದ್ದೆವು. ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ತುಂಬ ಭಯವಾಗಿ ಬಿಟ್ಟಿತ್ತು. ಬೆಂಚಿನ ಮೇಲೆ ನಿಲ್ಲುವುದು ತುಂಬಾ ಅವಮಾನಕರ ಮತ್ತು ಯಾವತ್ತೂ ಶಿಕ್ಷೆ ತೆಗೆದುಕೊಂಡಿಲ್ಲ. ಕೊನೆಗೆ ಧೈರ್ಯ ಮಾಡಿ ಇಂಗ್ಲಿಷ್ ಪಠ್ಯಪುಸ್ತಕವನ್ನೇ ತೆಗೆದುಕೊಂಡು ತೊಡೆಯ ಮೇಲೆ ಇಟ್ಟುಕೊಂಡು ಪಾಠ ಮಾಡುವಾಗ ನೋಡಿಕೊಳ್ಳುವಂತೆ ನಾಟಕ ಮಾಡುತ್ತಿದ್ದೆ. ಪಕ್ಕದಲ್ಲಿದ್ದ ಪದ್ಮಿನಿಗೂ ಗೊತ್ತಾಗಿಲ್ಲ. ಆದರೆ ನನ್ನ ಹಿಂದಿನ ಬೆಂಚಿನಲ್ಲಿದ್ದವಳಿಗೆ ಗೊತ್ತಾಗಿ ಹೋಯ್ತು. ಅವಳು ಎದ್ದು ನಿಂತು ಹೇಳಿಯೇಬಿಟ್ಟಳು. ಕೈಕಾಲಲ್ಲಿ ನಡುಕ ಶುರುವಾಯಿತು, ಕಣ್ಣಲ್ಲಿ ನೀರು ತುಂಬಿಕೊಂಡು ಅಳಲು ಶುರು ಮಾಡಿಬಿಟ್ಟೆ. ಟೀಚರಿಗೂ ಏನು ಮಾಡಬೇಕು ಅಂತ ಗೊತ್ತಾಗ್ಲಿಲ್ಲ. ಶಿಕ್ಷೆ ಕೊಡಲು ಇಷ್ಟವಿಲ್ಲ. ಆದರೆ ಕೊಡದಿದ್ದರೆ ಈಗಾಗಲೆ ಬೆಂಚಿನ ಮೇಲೆ ನಿಂತಿದ್ದ ೨-೩ ಹುಡುಗಿಯರಿಗೆ ಅನ್ಯಾಯ ಮಾಡಿದಂತಾಗುತ್ತದೆ. ನಾನು ಅವರ

ಮುಖವನ್ನೇ ನೋಡ್ತಾ ಇದ್ದೆ. ಅವರಿಗೂ ತುಂಬಾ ಕರುಣೆ ಬಂದು ಬಿಡ್ತು. 'ರಾಗಿಣಿ, ಯಾಕಮ್ಮ ಹಿಂಗೆ ಮಾಡ್ದೆ, ಹೋಗಲಿ ಬಿಡು. ಈವತ್ತು ಮೊದಲನೆ ಸಾರಿ ಹೀಗೆ ಮಾಡಿದ್ದೀಯ. ಆದ್ದರಿಂದ ಕೆಳಗೇ ನಿಂತುಕೋ. ಇನ್ನೊಂದು ಸಾರಿ ಹೀಗೆ ಮಾಡಿದರೆ ಅವರುಗಳ ಹಾಗೇ ನಿಂತುಕೋಬೇಕಾಗುತ್ತೆ' ಅಂದರು. ಬದುಕಿದೆಯಾ ಬಡಜೀವವೆ ಅಂದ ಹಾಗಾಯ್ತು. ಇನ್ನು ಯಾವತ್ತೂ ನಾನು ಆ ತಪ್ಪನ್ನು ಮಾಡಲಿಲ್ಲ. ಆದರೆ ಬೇರೆ ಹುಡುಗಿಯರು ಮಾತ್ರ ತರಗತಿಯ ನಂತರ ಆ ಟೀಚರನ್ನು ತುಂಬಾ ಪಾರ್ಷಿಯಾಲಿಟಿ ಅಂತ ಬೈದಾಡುತ್ತಿದ್ದರು. ಅವರು ಮಾಡಿದ್ದು ಸರಿಯೋ, ತಪ್ಪೋ ಅಂತ ಆವತ್ತು ನನಗೆ ಗೊತ್ತಿಲ್ಲ. ಆದರೆ ಈಗ ನಾನು ಒಬ್ಬ ಅಧ್ಯಾಪಕಿಯಾಗಿ ಅನೇಕ ಬಾರಿ ಇಂತಹ ಪರಿಸ್ಥಿತಿಯನ್ನು ಎದುರಿಸಿದ್ದೇನೆ. ನನ್ನ ವಿದ್ಯಾರ್ಥಿನಿಯರು ನನ್ನ ಬಗ್ಗೆಯೂ ಹೀಗೇ ಮಾತಾಡ್ಕೋತಾರೆ ಅಂತ ನನಗೆ ಚೆನ್ನಾಗಿ ಗೊತ್ತಿದೆ.

ನಾನು ಆ ಉಮಾ ಟೀಚರ್‌ರಿಂದ ಎಷ್ಟು ಪ್ರಭಾವಿತಳಾಗಿದ್ದೆ ಅಂದ್ರೆ ಮುಂದೆ ನಾನೂ ಹಿಂದೀ ಭಾಷೆಯ ಅಧ್ಯಾಪಕಿಯಾದೆ. ಅಷ್ಟು ಮಾತ್ರವಲ್ಲ, ಕೆಲಸಕ್ಕೆ ಸೇರಿದ ಹೊಸದರಲ್ಲಿ ನನ್ನ ವಿದ್ಯಾರ್ಥಿನಿಯರಿಗೆ ಇದೇ ರೀತಿಯ ಶಿಕ್ಷೆ ಕೊಡ್ತಿದ್ದೆ. ಒಂದು ಸಾರಿ ನಾವೆಲ್ಲ ಸಹೋದ್ಯೋಗಿಗಳು ಪ್ರವಾಸಕ್ಕೆ ಹೋಗಿದ್ದಾಗ ಒಂದು ಮೃಗಾಲಯಕ್ಕೆ ಹೋಗಿದ್ದೆವು. ಅಲ್ಲಿ ಒಂದು ಬೆಂಕಿಕೋಳಿ ಒಂದು ಎತ್ತರದ ಕಲ್ಲಿನ ಮೇಲೆ ನಿಂತಿತ್ತು. ಅದನ್ನು ನೋಡಿ ನನ್ನ ಸಹೋದ್ಯೋಗಿ ಶಂಕರನಾರಾಯಣ ಭಟ್‌ರವರು, 'ಅಲ್ಲಿ ನೋಡಿ, ರಾಗಿಣಿ ಮಿಸ್, ಆ ಬೆಂಕಿಕೋಳಿಗೆ ಶಿಕ್ಷೆ ಕೊಟ್ಟು ಬೆಂಚಿನ ಮೇಲೆ ನಿಲ್ಲಿಸಿದ್ದಾರೆ' ಅಂದರು. ಆ ರೀತಿ ಶಿಕ್ಷೆ ಕೊಡುತ್ತಿದ್ದವಳು ನಾನೊಬ್ಬಳೆ. ಆವತ್ತು ನನಗೆ ತುಂಬಾ ನಾಚಿಕೆಯಾಗಿಬಿಟ್ಟಿತು. ಆವತ್ತೇ ಕೊನೆ; ಆ ರೀತಿ ಶಿಕ್ಷೆಯನ್ನು ಮುಂದೆಂದೂ ನಾನು ಕೊಡಲಿಲ್ಲ.

ನನ್ನ ಗಣಿತದ ಅಧ್ಯಾಪಕಿ ಎನ್. ಜಿ. ಉಮಾದೇವಿಯವರು (ಎನ್.ಜಿ.ಯು) ಅವರೇ ನಮಗೆ ೮ ರಿಂದ ೧೦ ನೇ ತರಗತಿಯ ವರೆಗೆ ತರಗತಿ ಅಧ್ಯಾಪಕರು (Class Teacher). ತುಂಬಾ ಕಟ್ಟುನಿಟ್ಟು. ಸಾಮಾನ್ಯವಾಗಿ ನಾನು ಕಂಡಂತೆ (ಈಗ) ಎಲ್ಲಾ ಶಾಲೆಗಳಲ್ಲೂ ಗಣಿತ ಮತ್ತು ವಿಜ್ಞಾನದ ಅಧ್ಯಾಪಕರು ಕಟ್ಟುನಿಟ್ಟಾಗಿರ್ತಾರೆ. ಬೇರೆ ವಿಷಯದ ಅಧ್ಯಾಪಕರಿಗಿಂತ ಇವರುಗಳನ್ನು ಕಂಡರೆ ಮಕ್ಕಳಿಗೆ ಹೆಚ್ಚು ಭಯ ಇರುತ್ತದೆ. ಇಲ್ಲೂ ಹಾಗೆಯೇ. ಜೊತೆಗೆ ಅವರು ಕ್ಲಾಸ್ ಟೀಚರ್ ಬೇರೆ, ಇನ್ನೂ ಕಟ್ಟುನಿಟ್ಟು. ನಮ್ಮ ಜೀವನದಲ್ಲಿ ನಾವು ಇಷ್ಟೊಂದು ಶಿಸ್ತಿನಿಂದ, ನೀತಿಯಿಂದ, ನಿಯಮದಿಂದ ಬಾಳಲು ನನ್ನ ತಂದೆ ತಾಯಿಯಷ್ಟೇ ಪ್ರಮುಖ ಕಾರಣಕರ್ತರು ಇವರೆಂದು ಹೇಳಬಹುದು. ಪ್ರತಿಯೊಂದು ಹೆಜ್ಜೆಯನ್ನೂ ಸರಿಪಡಿಸುತ್ತಿದ್ದ ಅವರು ಉತ್ತಮ ಮಾರ್ಗದರ್ಶನವನ್ನು ನೀಡಿ ಮನಸ್ಸಿನಲ್ಲಿ ನಿರಂತರವಾಗಿ ಉಳಿದು ಬಿಟ್ಟಿದ್ದಾರೆ. ಅಂತಹ ಒಬ್ಬ ಅಧ್ಯಾಪಕಿ ಮತ್ಯಾರಿಗೂ ಸಿಕ್ಕಿರಲು ಸಾಧ್ಯವಿಲ್ಲವೇನೋ ಎಂದೆನಿಸುತ್ತದೆ. ಗಣಿತ ನನಗೆ ತುಂಬಾ ಇಷ್ಟವಾದ ವಿಷಯ. ಗಣಿತದಲ್ಲಿ ಏನನ್ನಾದರೂ ಸಾಧಿಸಬೇಕೆಂಬ ಆಸೆ ಬಂದಿದ್ದೇ ಅವರಿಂದ. ಆದರೆ ನನ್ನ ಕ್ಷೇತ್ರವೇ ಬೇರೆಯಾಗಿಬಿಟ್ಟಿತು. ಇಂದಿಗೂ ವಯಸ್ಸಾದರೂ ಯಾವುದಾದರೂ ಕಾಲೇಜಿನಲ್ಲಿ PCMB ತೆಗೆದುಕೊಂಡು ಪಿಯುಸಿ ಗೆ ಸೇರಿ ಗಣಿತದಲ್ಲಿ ಎಮ್.ಎಸ್.ಸಿ. ಮಾಡಬೇಕೆಂಬ ಆಸೆ ಮನಸ್ಸಿನ ಒಂದು ಮೂಲೆಯಲ್ಲಿದೆ.

ಸಿ. ಆರ್. ಪ್ರಭಾವತಿ (ಸಿ.ಆರ್.ಪಿ.), ಎಲ್. ಭಾರತಿ (ಎಲ್.ಬಿ.), ಹಂಸವಲ್ಲಿ ಇವರೆಲ್ಲಾ ನಮ್ಮ ವಿಜ್ಞಾನದ ಅಧ್ಯಾಪಕಿಯರು. ನಾನು ಎಂಟನೇ ತರಗತಿ ಸೇರಿದಾಗ ಹಂಸವಲ್ಲಿ ಟೀಚರ್ ವಿಜ್ಞಾನ ಬೋಧಿಸುತ್ತಿದ್ದರು. ನಾನು ಏಳನೇ ತರಗತಿಯ ವರೆಗೆ ಕನ್ನಡ ಮಾಧ್ಯಮ.

ಎಂಟನೇ ತರಗತಿಗೆ ಇಂಗ್ಲಿಷ್ ಮಾಧ್ಯಮಕ್ಕೆ ಸೇರಿಕೊಂಡೆ. ಮೊದಲನೇ ವಿಜ್ಞಾನ ಪರೀಕ್ಷೆಯಲ್ಲಿಯೇ ನನಗೆ ೧೨ ಅಂಕಗಳಿಗೆ ೧೨ ಅಂಕಗಳು ಪೂರ್ತಿ ದೊರೆತಿತ್ತು. ಪಂಸವಲ್ಲಿ ಟೀಚರು ನನ್ನನ್ನು ತುಂಬಾ ಹೊಗಳಿದ್ದರು. ಆ ದಿನ ನನ್ನ ಮೈಯೆಲ್ಲಾ ರೋಮಾಂಚನಗೊಂಡಿತ್ತು. ಈ ಅನಿರೀಕ್ಷಿತ ಘಟನೆಯಿಂದ ತುಂಬಾ ಸಂತೋಷವಾಗಿತ್ತು. ಮನೆಯಲ್ಲಿ ನಮ್ಮಮ್ಮ ಕೂಡ ತುಂಬಾ ಖುಷಿಪಟ್ಟಿದ್ದರು. ಭಾರತಿ ಟೀಚರ್ ಕೂಡ ವಯಸ್ಸಿನಲ್ಲಿ ಚಿಕ್ಕವರು. ಬಹಳ ಚೆನ್ನಾಗಿ ಬೋಧಿಸುತ್ತಿದ್ದರು. ಸಿ. ಆರ್. ಪ್ರಭಾವತಿ ಟೀಚರ್ ನಮಗೆ ದೂರದ ನೆಂಟರು. ಇವರನ್ನು ಕಂಡರೆ ನನಗೆ ಬಹಳ ಇಷ್ಟ.

ನಮ್ಮ ಎಸ್. ಎನ್. ಟೀಚರ್ ಬಗ್ಗೆಯೂ ಬರೆಯಲು ಸಾಕಷ್ಟಿದೆ. ಅವರ ಪೂರ್ತಿ ಹೆಸರು ಎಸ್. ನಾಗರತ್ನ. ಅವರು ನಮ್ಮ ಸಮಾಜಪಾಠದ ಅಧ್ಯಾಪಕಿ. ಅವರಿಗೆ ವಿಷಯದ ಜ್ಞಾನ ಎಷ್ಟಿತ್ತೆಂದರೆ ಪಾಠ ಮಾಡುತ್ತಾ ಮಾಡುತ್ತಾ ನಮ್ಮನ್ನು ಇಡೀ ಪ್ರಪಂಚದಲ್ಲಿ ಸುತ್ತಿಸಿಬಿಡುತ್ತಿದ್ದರು. ಒಂದೆರಡು ವರ್ಷಗಳ ನಂತರ ಅವರು ಎಲ್ಲಿಯೋ ವಿದೇಶಕ್ಕೆ ಹೋದರು ಅಂತ ಸುದ್ದಿ ತಿಳಿಯಿತು. ಅವರ ಗುಂಡಾದ ಸುಂದರವಾದ ಮುಖ, ನೀಳವಾದ ಜಡೆ. ನಿಧಾನ ಗಂಭೀರ ನಡೆ–ನುಡಿ ಎಂದಿಗೂ ಮರೆಯುವಂತಿಲ್ಲ. ಅವರ ಮನೆಯೂ ನಮ್ಮ ಮನೆ ಹತ್ತಿರವೇ. ಗೆಳತಿಯರೆಲ್ಲಾ ಸೇರಿ ಆಗೀಗ ಅವರ ಮನೆಗೂ ಹೋಗ್ತಿದ್ದೆವು. ಈಗ ಅವರು ಆ ಮನೆಯಲ್ಲಿಲ್ಲ. ಆದರೆ ಆ ಮನೆಯ ಮುಂದೆ ಓಡಾಡಿದಾಗ ಅವರ ನೆನಪು ಬಹಳ ಬರುತ್ತದೆ.

ಎಮ್. ಎ. ರಾಜಮ್ಮ ಟೀಚರ್ ನಮ್ಮ ಮುಖ್ಯೋಪಾಧ್ಯಾಯಿನಿಯವರು. ನಾವು ೧೦ನೇ ತರಗತಿಗೆ ಬಂದಾಗ ಇವರು ನಮಗೆ ಇಂಗ್ಲಿಷ್ ಕಲಿಸುತ್ತಿದ್ದರು. ಇವರು ಎತ್ತರವಾಗಿದ್ದರು. ಮುಖದಲ್ಲಿ ಒಂದು ರೀತಿಯ ಮುಗ್ಧತೆ ಇತ್ತು. ಹಸನ್ಮುಖಿ. ನಡಿಗೆಯಲ್ಲಿ ರಾಜಗಾಂಭೀರ್ಯ. ಇವರ ಕೊಠಡಿಗೆ ಹೊಂದಿಕೊಂಡೇ ನಮ್ಮ ಅಧ್ಯಾಪಕರುಗಳ ಕೊಠಡಿ ಇತ್ತು. ಮನೆ ಕೆಲಸದ ಪುಸ್ತಗಳನ್ನೋ ಅಥವಾ ಅಧ್ಯಾಪಕರು ಹೇಳಿದ ವಸ್ತುಗಳನ್ನೋ ತರಲು ಅಧ್ಯಾಪಕರ ಕೊಠಡಿಗೆ ಹೋಗಬೇಕಾದರೆ ಅವರಿಗೆ ಕಾಣಿಸಿಕೊಂಡೇ ಹೋಗಬೇಕು. ನನಗೆ ಏನೋ ಒಂದು ರೀತಿಯ ಅಂಜಿಕೆ. ಅವರೇನೂ ಬೈಯುತ್ತಿರಲಿಲ್ಲ, ಆದರೂ ಅತಿಯಾದ ಗೌರವ, ಭಕ್ತಿ ತಾನಾಗೇ ಉಂಟಾಗುತ್ತಿತ್ತು. ಅವರ ಧ್ವನಿಯೂ ಸಹ ಬಹಳ ಇಂಪಾಗಿತ್ತು.

ನಮ್ಮ ಸಂಗೀತ ಟೀಚರ್ ಆರ್. ಲೀಲಾವತಿ(ಆರ್.ಎಲ್)ರವರು. ಇವರ ಮನೆ ನಮ್ಮ ಮನೆಯಿಂದ ಮೂರನೆ ಮನೆ. ಇವರ ಅಕ್ಕ ಆರ್. ಜಲಜಾಕ್ಷಮ್ಮನವರು. ಇವರೂ ಸಂಗೀತ ಕಲಿಸುತ್ತಿದ್ದರು. ನಾನು, ಅಕ್ಕ ಇಬ್ಬರೂ ಬೆಳಗ್ಗೆ ೬ ಗಂಟೆಗೇ ಸಂಗೀತ ತರಗತಿಗೆ ಇವರ ಹತ್ತಿರ ಹೋಗುತ್ತಿದ್ದೆವು. ಶಾಲೆಯಲ್ಲಿ ನಮ್ಮ ಲೀಲಾವತಿ ಟೀಚರು ಹೇಳಿಕೊಡುವ ಪಾಠ ನಾನು ಮೊದಲೇ ಕಲಿತಿರುತ್ತಿದ್ದೆ. ಹಾಗಾಗಿ ಅವರಿಗೆ ನನ್ನ ಮೇಲೆ ಏನೋ ಒಂದು ಪ್ರೀತಿ. ತಂಬೂರ ಮೀಟುವ ಕೆಲಸವನ್ನು ಕೆಲವು ಸಾರಿ ನನಗೆ ತರಗತಿಯಲ್ಲಿ ಕೊಡುತ್ತಿದ್ದರು. ಆಗ ನನಗೆ ಬಹಳ ಸಂಭ್ರಮ. ನಂತರದ ದಿನಗಳಲ್ಲಿಯೂ ಎಷ್ಟೋ ವರ್ಷಗಳು ಅವರು ಕಾಣಸಿಗುತ್ತಿದ್ದರು. ಈಗ ಅವರು ಆ ಮನೆಯಲ್ಲಿಲ್ಲ. ಆದರೆ ಆ ಮನೆ ನೋಡಿ ನಮ್ಮ ಆ ಇಬ್ಬರೂ ಟೀಚರುಗಳ ನೆನಪಾಗುತ್ತದೆ.

ನಮ್ಮ ಪಿ.ಟಿ. ಮಾಸ್ತರರು ಮುತ್ತಣ್ಣನವರು. ಇವರನ್ನು ಸ್ಮರಿಸುವಾಗ ಒಂದು ಘಟನೆ ನೆನಪಿಗೆ ಬರುತ್ತದೆ. ಶಾಲೆಯಲ್ಲಿ ವಾರಕ್ಕೊಂದು ದಿನ ಸಾಮೂಹಿಕ ಅಭ್ಯಾಸ ಮಾಡಿಸುತ್ತಿದ್ದರು.

ನಮ್ಮ ತಂದೆ ಊಟಿ ಕಾನ್ವೆಂಟ್ ಶಾಲೆಗಳಲ್ಲಿ ಧರಿಸುವಂತಹ ಒಂದು ಕೋಟು ತೆಗೆದು ಕೊಟ್ಟಿದ್ದರು. ಕೆಂಪು ಬಣ್ಣದ್ದು. ನಾನದನ್ನು ೮ನೇ ತರಗತಿಯಿಂದ ೧೧ನೇ ತರಗತಿ ವರೆಗೆ ದಿನಾಲೂ ಧರಿಸಿಕೊಂಡು ಹೋಗುತ್ತಿದ್ದೆ. ನಮ್ಮ ಎನ್.ಜಿ.ಯು ಟೀಚರು ಅದಕ್ಕೆ ಕರ್ಣನ ಕವಚ ಎಂದೇ ಹೆಸರಿಟ್ಟುಬಿಟ್ಟಿದ್ದರು. ಕರ್ಣ ಹುಟ್ಟುವಾಗಲೇ ಕವಚದೊಂದಿಗೆ ಹುಟ್ಟಿದ ಹಾಗೆ ನೀನೂ ಈ ಕೋಟಿನೊಂದಿಗೇ ಹುಟ್ಟಿಬಿಟ್ಟಿಯೇನೋ ಎಂದು ರೇಗಿಸುತ್ತಿದ್ದರು. ಆದರೆ ನಾನು ಮಾತ್ರ ಎಂಥಾ ಸೆಕೆಯಿದ್ದರೂ ಅದಿಲ್ಲದೆ ಶಾಲೆಗೆ ಹೋಗುತ್ತಿರಲಿಲ್ಲ. ಆ ಮುತ್ತಣ್ಣ ಸಾರ್ ಸಾಮೂಹಿಕ ಅಭ್ಯಾಸದ ಅವಧಿಗಳಲ್ಲಿ ಆ ಕೋಟನ್ನು ತೆಗೆಸದೆ ಬಿಡುತ್ತಿರಲಿಲ್ಲ. ಇದೇ ಅವರ ವಿಶೇಷತೆ. ಆಗೆಲ್ಲಾ ನಾನಂತೂ ಅವರನ್ನು ಮನಸ್ಸಿನಲ್ಲೇ ಬೈದುಕೊಳ್ಳುತ್ತಿದ್ದೆ. ಆದರೂ ಅವರನ್ನು ಕಂಡರೆ ಭಯ, ಭಕ್ತಿ ಮಾತ್ರ ಇತ್ತು. ಇವರಿಂದಲೂ ಸಾಕಷ್ಟು ಸಮಯಪಾಲನೆಯ ಶಿಸ್ತನ್ನು ಕಲಿತಿದ್ದೆವು.

ಇದನ್ನೆಲ್ಲಾ ಒಂದೊಂದಾಗಿ ನೆನಪಿಸಿಕೊಳ್ಳುತ್ತಾ ಇರುವಾಗ ಮೈಯೆಲ್ಲಾ ನವಿರೆದ್ದು ಆಹಾ, ಎಂತೆಂತಹ ಮಹಾನ್ ವ್ಯಕ್ತಿಗಳು ನನಗೆ ಗುರುಗಳಾಗಿದ್ದರು. ಇವರೆಲ್ಲರಿಂದ ನಾನೆಷ್ಟೊಂದು ಕಲಿತೆ ಅನ್ನಿಸುತ್ತಿದೆ. ಇವರೆಲ್ಲಾ ಮನಸ್ಸಿನಲ್ಲಿಯೇ ಇದ್ದು ಯಾವುದ್ಯಾವುದೋ ಕೆಲ ಸಂದರ್ಭಗಳಲ್ಲಿ ನೆನಪಿಗೆ ಬರುತ್ತಿರುತ್ತಾರೆ. ಆದರೆ ಈಗ ಬರೆಯಲು ಕುಳಿತಾಗ ಎಲ್ಲರೂ ಒಟ್ಟಾಗಿ ನನ್ನ ಕಣ್ಮುಂದೆಯೇ ನಿಂತಂತಿದೆ. ಶಿಸ್ತು, ಸಂಯಮ, ಸಂಸ್ಕೃತಿ, ಪ್ರೀತಿ, ವಿಶ್ವಾಸ ಇವೆಲ್ಲಾ ಪ್ರತಿಯೊಬ್ಬರಿಂದಲೂ ಗುಟುಕು ಗುಟುಕಾಗಿ ದೊರಕಿ ಸಮಾಜದಲ್ಲಿ ಗೌರವಯುತವಾಗಿ ಬಾಳುವಂತೆ ಮಾಡಿದೆ. ಆದರೆ ಇದೊಂದು ಮಾಯಾಪ್ರಪಂಚ. ಬಿ.ಎಂ.ಶ್ರೀಯವರ ಒಂದು ಆಂಗ್ಲ ಗೀತೆಯ ಅನುವಾದದ ಈ ಸಾಲು ಮನಸ್ಸಿನಲ್ಲಿ ಮೂಡಿಬರುತ್ತಿದೆ. – 'ಎಲ್ಲಾ ಎಲ್ಲಾ ಮಾಯವಾದವು ಹಳೆಯ ಪಳಕೆಯ ಮುಖಗಳು' (All all are gone, the old familiar faces); ಹಾಗೆಯೇ ಹಿಂದೀ ಕವಿ ಮೈಥಿಲೀ ಶರಣ್ ಗುಪ್ತರ 'ಆ ಜಾ ಬಚ್‌ಪನ್ ಏಕ್ ಬಾರ್ ಫಿರ್' ಎಂಬುದೂ ಮೂಡಿಬರುತ್ತಿದೆ.

ಹೀಗೆ ನನ್ನ ಜೀವನದಲ್ಲಿ ಇವರಿಷ್ಟೇ ಗುರುಗಳಲ್ಲದೆ ಮುಂದಿನ ವಿದ್ಯಾಭ್ಯಾಸದ ದಿನಗಳಲ್ಲೂ ಬಂದ, ಮಾರ್ಗದರ್ಶನ ನೀಡಿದ ಗುರುಗಳ ಸಂಖ್ಯೆ ಎಣಿಸಲಾರದಷ್ಟು. ಇವರೊಂದಿಗೆ ನನ್ನ ಸಾಮಾಜಿಕ ಬದುಕಿನಲ್ಲಿ ಹೊಸ ಹೊಸ ವಿಷಯಗಳನ್ನು ಕಲಿಸಿಕೊಟ್ಟ ಗುರುಗಳೆಷ್ಟು ಮಂದಿಯೊ. ಇದಕ್ಕೆ ವಯಸ್ಸಿನ ಬೇಧವಿಲ್ಲ. ನನ್ನ ಪತಿ, ಮಗ, ಮಗಳಿಂದಲೂ ನಾನು ಬೇಕಾದಷ್ಟು ಕಲಿತಿದ್ದೇನೆ. ಹೀಗೆ ಬರೆಯುತ್ತಾ ಹೋಘರೆ ಇದಕ್ಕೆ ಒಂದು ಕೊನೆಯೆಂಬುದೇ ಇಲ್ಲ. ಅದಕ್ಕೆ ಉಳಿದವರನ್ನು ಮನಸ್ಸಿನಲ್ಲೇ ಸ್ಮರಿಸಿ ನಮಿಸಿಬಿಡುತ್ತೇನೆ.

ಈ ಮಾಲಿಕೆ ನನ್ನ ಸ್ಮರಣಶಕ್ತಿಗೆ ಒಂದು ಸವಾಲಿನಂತೆ ಇತ್ತು. ಇಂತಹ ಒಂದು ಮಾಲಿಕೆಯನ್ನು ಪ್ರಾರಂಭಿಸಿ ನಮ್ಮಂತಹವರಿಗೆ ಮಹಾನ್ ಮಹಾನ್ ಗುರು ದೇವರುಗಳನ್ನು ಸ್ಮರಿಸಿಕೊಂಡು ವಂದಿಸುವ, ಗೌರವ ಸಲ್ಲಿಸುವ, ಕೃತಜ್ಞತೆಯನ್ನು ಸಲ್ಲಿಸುವ ಅವಕಾಶ ಕಲ್ಪಿಸಿಕೊಟ್ಟ ನನ್ನ ಪ್ರೀತಿಯ ಗುರುಗಳಾದ ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿಯವರಿಗೆ ನಮೋನ್ನಮಃ.

✦ **ಡಾ. ರಾಗಿಣಿ ಆರ್**, ೭೩೮ / ೪, ಸೊಪ್ಪಿನಕೊಳದ ಬೀದಿ,
ಕಾಶೀಪತಿ ಅಗ್ರಹಾರ, ಕೆ.ಆರ್.ಮೊಹಲ್ಲ, ಮೈಸೂರು-೫೭೦ ೦೨೪ ✦

ಕಾರಂತರ ಜೀವಂತ ಪಾತ್ರಗಳು - ೧೧

ಸಿ. ಸೋಮಶೇಖರಯ್ಯ

'ಔದಾರ್ಯದ ಉರುಳಲ್ಲಿ' ಕಾದಂಬರಿಯ ಛಾಯೆಯಲ್ಲಿಯೇ ತೊಡಗುವ 'ಸಮೀಕ್ಷೆ' 'ಔದಾರ್ಯದ ಉರುಳಲ್ಲಿ'ಗಿಂತ ಭಿನ್ನ ಪಾತಳಿಗಳಲ್ಲಿ ಹರಿಯತೊಡಗುತ್ತದೆ. 'ಔದಾರ್ಯದ ಉರುಳಲ್ಲಿ'ನ ನಾಯಕ ರಾಧಾಕೃಷ್ಣ ನೇರವಾಗಿ ಹೋರಾಟದ ಕಣದಲ್ಲಿದ್ದು, ತನ್ನ ಪ್ರತ್ಯೇಕ ಚಿಂತನೆಗಳನ್ನು ಕಾಯ್ದುಕೊಳ್ಳುತ್ತಾ, ಸ್ವಾತಂತ್ರ್ಯ ಹೋರಾಟಗಾರನಾಗಿ ಬಾಳಿನಲ್ಲಿ ಸೆಣಸುತ್ತಿದ್ದರೆ 'ಸಮೀಕ್ಷೆ'ಯ ಶ್ರೀನಿವಾಸ ಹೋರಾಟದೊಡನೆ ನೇರವಾಗಿ ಮುಖಾಮುಖಿಯಾಗಲು, ಅವನ ಬಾಳಿನ ರೀತಿಯ ಕಾರಣದಿಂದ ಸಾಧ್ಯವಾಗದೆ ಸ್ವಾತಂತ್ರ್ಯ ಸಂಗ್ರಾಮದ ಅಗ್ನಿಜ್ವಾಲೆಯಲ್ಲಿ ಸುಟ್ಟು ಪರಿತಪಿಸುತ್ತಿದ್ದ ತನ್ನ ಪ್ರೀತಿಯ ಸ್ನೇಹಿತ ವಾಸುವಿನ ಕುಟುಂಬದ ಹಿತಕ್ಕಾಗಿ ಸೆಣಸುವ ಜೀವವಾಗಿ ಗಮನ ಸೆಳೆಯುತ್ತಾನೆ.

ಸ್ವಾತಂತ್ರ್ಯ, ಮತ್ತದರ ಹೋರಾಟದ ಬದುಕು ಯಾವುದೋ ಒಂದು ಭೂತಕಾಲದಲ್ಲಿ ನಡೆದ, ಕೇವಲ ಚರ್ಚೆಗೆ ಗ್ರಾಸವಾಗಿರುವ ವಸ್ತುವಿನಂತೆ ಅತ್ಯಂತ ಲಘು ಶೈಲಿಯಲ್ಲಿ ಹೋರಾಟಗಾರರನ್ನು ವಿಡಂಬಿಸುವ ಹಂತವನ್ನು ಮುಟ್ಟಿರುವ ಮತ್ತು ಸ್ವಾತಂತ್ರ್ಯದ ನೇರ ಫಲಾನುಭವಿಗಳಾದವರು ನಡೆಸುತ್ತಿರುವ, ಪಥಭ್ರಷ್ಟ ರಾಜಕಾರಣದಿಂದ ತುಂಬಿರುವ ಈವತ್ತಿನ ಕಾಲಕ್ಕೆ, 'ಸಮೀಕ್ಷೆ'ಯಂತಹ ಕೃತಿ ಅಂದು ಹೋರಾಟಗಾರರು ಅಮಾನುಷ ಪ್ರಭುತ್ವದಿಂದ ಅನುಭವಿಸಿದ ನರಕಯಾತನೆ, ಆಸ್ತಿ, ಮಾನ, ಪ್ರಾಣಗಳನ್ನು ಪಣಕ್ಕೊಡ್ಡಿದ ರೀತಿಯನ್ನು ಕಿಂಚಿತ್ತಾದರೂ ತಿಳಿಯಲು ಸಹಾಯ ಮಾಡುತ್ತದೆ.

'ಸಮೀಕ್ಷೆ'ಯ ಶ್ರೀನಿವಾಸ ತೀರಾ ಸರಳನಾದ ಸೂಕ್ಷ್ಮ ಪ್ರವೃತ್ತಿಯ ಆಲೋಚನಾಪರನಾದ ವ್ಯಕ್ತಿತ್ವದವನು. ಈ ಕಾದಂಬರಿಗೆ ಅವನು ನಾಯಕನೋ? ವಾಸುವೇ ನಾಯಕನೋ? ಕಾದಂಬರಿಯನ್ನು ಓದಿ ಮುಗಿಸಿದರೂ ಬಗೆಹರಿಯದ ಪ್ರಶ್ನೆಯಾಗಿಯೇ ಉಳಿಯುತ್ತದೆ. ಕಾದಂಬರಿಯ ಉದ್ದಕ್ಕೆ ವಾಸು ಎಲ್ಲಿಯೂ ಓದುಗರಿಗೆ ಮುಖಾಮುಖಿಯಾಗುವುದಿಲ್ಲ. ಅವನ ಮುಖದರ್ಶನವಾಗುವುದು ಕಾದಂಬರಿಯ ಕೊನೆಯ ಪುಟಗಳಲ್ಲಿ; ಆದರೂ ಕಾದಂಬರಿಯ ತುಂಬಾ ಅವನ ಪ್ರಭಾವ ಎದ್ದು ಕಾಣುತ್ತದೆ. ಓದುಗನಿಗೆ ಉದ್ದಕ್ಕೂ ಕ್ರಿಯಾಶೀಲನಾಗಿರುವ ಶ್ರೀನಿವಾಸನೇ ಆಪ್ತನಾಗುವವನು. ಈ ಕಾರಣಕ್ಕೆ ಶ್ರೀನಿವಾಸನೇ 'ಸಮೀಕ್ಷೆ'ಯ ನಾಯಕ ಎಂದಿಟ್ಟುಕೊಳ್ಳಬಹುದು.

ವಾಸುವಿನ ಪರಿಚಯ ಓದುಗನಿಗೆ ಆಗುವುದು, ಶ್ರೀನಿವಾಸನ ಸಹಪಾಠಿಯಾಗಿದ್ದ ವಾಸುವಿನ ಸ್ವಭಾವಸಹಜವಾದ ಪರೋಪಕಾರ ಬುದ್ಧಿಯನ್ನು ಶ್ರೀನಿವಾಸ ಸದಾ ನೆನೆಯುತ್ತಿರುವುದರಿಂದ. ಇಂತಹ ಪರೋಪಕಾರೀ ವ್ಯಕ್ತಿತ್ವವಾದರೂ, ತನ್ನ ಸ್ವಂತ ತಾಯಿಯ ಪಾಲಿಗೆ ದೊರಕದ ವಸ್ತುವಾಗುತ್ತಾನೆ ವಾಸು. ಅವನ ತಾಯಿ ನರಸಜ್ಜಿ ಬಡತನವನ್ನೇ ಉಂಡು, ಉಟ್ಟು, ಅದನ್ನೇ ಹೊದೆದು ಬದುಕಿದಾಕೆ. ಅವಳು ಉಳಿದ ಇನ್ನೊಬ್ಬ ಮಗ ವೈಕುಂಠನೊಡನೆ ಕಷ್ಟದ ಜೀವನವನ್ನು ಸಾಗಿಸುತ್ತಿರುತ್ತಾಳೆ.

ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ತೊಡಗುವ ವಾಸು, ಪೋಲೀಸರ ಕಣ್ತಪ್ಪಿಸುವ ಯತ್ನದಲ್ಲಿ ಭೂಗತನಾಗುತ್ತಾನೆ. ಪೋಲೀಸರ ಹದ್ದಿನ ಕಣ್ಣಿಗೆ ಸಿಕ್ಕಿ, ಅವರ ಕ್ರೌರ್ಯದ ಕಟುಕತನಕ್ಕೆ ಬಲಿಯಾದವಳು ಅವನ ನಿರ್ಭಾಗ್ಯ ಹೆಂಡತಿ ಕುಸುಮ. ವಿಚಾರಣೆಯ ನೆವದಲ್ಲಿ ಹೊತ್ತಲ್ಲದ ಹೊತ್ತಿನಲ್ಲಿ ಅವಳ ಮನೆಯನ್ನು ಪ್ರವೇಶಿಸುವ ಪೋಲೀಸರು,

ಅವಳ ಹಸುಕಂದನನ್ನು ಒಂದು ಕೋಣೆಗೆ ಎಳೆದು ಕೂಡಿಹಾಕಿ, ತಾವೂ ಮನುಷ್ಯರೇ ಎಂಬುದನ್ನೂ ಮರೆತು, ಕೊಬ್ಬಿದ ಪಶುಗಳಂತೆ ಅವಳ ಶೀಲಹರಣ ಮಾಡುತ್ತಾರೆ. ನಂತರ ಯಾರೋ ಪುಣ್ಯಾತ್ಮರ ಕೃಪೆಯಿಂದ ತನ್ನ ಅತ್ತೆಯ ಮನೆಯನ್ನು ಸೇರಿದ ಕುಸುಮೆ ಪುನಃ ಮಾತಾಡಿದ್ದೆಂಬುದೇ ಇಲ್ಲ. ಮೌನ ಕಣ್ಣೀರು ಎರಡೇ ಮುಂದೆ ಅವಳ ಬೆಂದ ಮನದ ಭಾಷೆಗಳು. ಅಪ್ಪಿತಪ್ಪಿ ಅವಳ ಬಾಯಿಯಿಂದ ಹೊರಬರುತ್ತಿದ್ದ ಮಾತೆಂದರೆ 'ನನ್ನಂಥವಳು ಬದುಕಬಾರದು' ಎಂಬುದು.

ಅತ್ತೆಯ ಮನೆಗೆ ತನ್ನ ಹಸು ಕಂದ ಸುವಾಸಿನಿಯೊಡನೆ ಬಂದ ಕುಸುಮಳಿಗೆ ಅಲ್ಲಿ ಜಾತಿಯ ಕಾರಣದಿಂದ ಇನ್ನೊಂದು ಬಗೆಯ ತಳಮಳಗಳು ಹುರಿದು ಮುಕ್ಕುತ್ತವೆ. ಕುರುಡು ಸಂಪ್ರದಾಯದ ಬಿಗಿ ಮುಷ್ಟಿ ಎಷ್ಟೊಂದು ಬಲವಾಗಿರುತ್ತದೆಂದರೆ, ಅಲ್ಲಿ ಯಾವುದೇ ಮಾನವೀಯ ಪ್ರೇಮ, ಅನುಕಂಪಗಳಿಗೆ ಆಸ್ಪದವೇ ಇರುವುದಿಲ್ಲ. ನರಸಜ್ಜಿ ತನ್ನ ಹೆತ್ತ ಮಗನಿಂದ ತನಗೆ ಬಂದ ವಿಪತ್ತನ್ನು ತೋಡಿಕೊಳ್ಳುವುದು, ಅವನ ಪ್ರಿಯ ಮಿತ್ರ ಶ್ರೀನಿವಾಸನಲ್ಲಿ. ಶ್ರೀನಿವಾಸ ತನ್ನ ಅಭಿಮಾನದ ಮಿತ್ರ ವಾಸುವಿನ ಕುಟುಂಬಕ್ಕೊದಗಿದ ದುರಂತದಿಂದ ನೊಂದು, ಆ ತಾಯಿ ಮಗಳಿಗೆ ತನ್ನ ಮನೆಯಲ್ಲಿಯೇ ಒಂದು ಭಾಗದಲ್ಲಿ ಆಶ್ರಯ ಕಲ್ಪಿಸುತ್ತಾನೆ. ಅವನಿಗೆ ಆತಂಕವಿದ್ದುದು ತನ್ನ ಮಡದಿ ಶಾರದೆಯ ವಿಷಯದಲ್ಲಿ. ಆದರೆ ಶಾರದೆ ಅವನೂ ಬೆರಗಾಗುವ ರೀತಿಯಲ್ಲಿ ಮಮತಾಮಯಿ ಆಗುತ್ತಾಳೆ. ಅವಳಿಂದ ಅವನಿಗೆ ಅನಿರೀಕ್ಷಿತ ಸಹಕಾರ ದೊರೆಯುತ್ತದೆ.

ಇದೆಲ್ಲದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ತನ್ನ ಮೇಲಾದ ದೈಹಿಕ ಆಘಾತವನ್ನು ತಡೆದುಕೊಳ್ಳುವ ತ್ರಾಣ ಕುಸುಮೆಯ ಮನಸ್ಸಿಗಿರಲಿಲ್ಲ. ತನ್ನ ಪ್ರಾಣದ ಇನ್ನೊಂದು ತುಣುಕಾದ ತನ್ನ ಮಗಳು ಸುವಾಸಿನಿಯನ್ನು ಈ ದಂಪತಿಗಳ ಕೈಗಿಟ್ಟು, ಕುಸುಮೆ ಭಾವಿ ಹಾರಿಕೊಳ್ಳುತ್ತಾಳೆ. ಕುಟುಂಬದ ಯಜಮಾನ ದೇಶಕ್ಕಾಗಿ ಹೋರಾಡುತ್ತಿರುವ ತಪ್ಪಿಗಾಗಿ, ಪತ್ನಿ ಆತ್ಮಹತ್ಯೆ ಮಾಡಿಕೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣವಾದರೆ, ಎಳೆಯ ಕಂದ ಸುವಾಸಿನಿ ಅನಾಥಳಾಗಬೇಕಾಗುತ್ತದೆ. ಆಗ ಅವಳ ಅಮ್ಮನಾಗಿ ಅವಳನ್ನು ಆದರಿಸುವವಳು ಮಕ್ಕಳ ಭಾಗ್ಯವನ್ನೇ ಕಾಣದ ಶಾರದೆ.

ಇದಿಷ್ಟು ಸ್ವಾತಂತ್ರ್ಯ ಹೋರಾಟದ ಕಾಲದ ಘಟನೆಗಳನ್ನೊಳಗೊಂಡ ಕಥನದ ನಡುವೆ ವ್ಯಕ್ತಿಗಳ ಶೀಲ, ಸ್ವಭಾವಗಳ ಪರಿಚಯ ಮಾಡಿಕೊಡುವ ದೃಷ್ಟಿಯಿಂದ ಹಲವಾರು ಮಂದಿ ಬಾಲ್ಯಕಾಲ ಸಖರು, ಮುಂದಣ ಹಾದಿಯಲ್ಲಿ ಅವರವರು ಕಂಡುಕೊಂಡ ಬಾಳಿನ ಸ್ವರೂಪವನ್ನು ಗುರುತಿಸುತ್ತಾ, ಕಾದಂಬರಿ ಮುಂದುವರಿಯುತ್ತದೆ.

ವಾಸು, ಭೋಜ, ನರಸಿಂಹ, ತಿರುಮಲೇಶ್ವರಭಟ್ಟ, ರಾಮಚಂದ್ರ ಇವರೆಲ್ಲಾ ಶ್ರೀನಿವಾಸನ ಸಹಪಾಠಿಗಳು. ಎಲ್ಲರೂ ಶಾಲಾ ದಿನಗಳಲ್ಲಿ ಆದರ್ಶವಾದಿಗಳೇ. ಅವರು ನಡೆಸುತ್ತಿದ್ದ ಚರ್ಚೆಗಳಲ್ಲಿ, ಜೀವನದ ಅನುಭವದ ಯಾವ ಸಹಜತೆಯೂ ಇರದಿದ್ದರೂ, ಆದರ್ಶಕ್ಕಂತೂ ಕೊರತೆ ಇರಲಿಲ್ಲ. ಅವರ ಮಾತಿನ ಮಂಟಪದಲ್ಲಿ ಗಾಂಧೀಜಿ, ಅರವಿಂದರು, ವಿವೇಕಾನಂದರು, ರಾಮಕೃಷ್ಣರು ಮುಂತಾದವರ ಉಕ್ತಿಗಳು ಯಾವ ಅಡೆತಡೆ ಇಲ್ಲದೆ ಉರುಳುತ್ತಲೇ ಇದ್ದವು.

ಈ ಎಲ್ಲ ಮಿತ್ರರು ಸಹ ಮರದ ಮೇಲೆ ಆಶ್ರಯ ಪಡೆದು ಬೆಳಗ್ಗೆ ಹಾರಿ ಹೋಗುವ ಪಕ್ಷಿಗಳಂತೆ, ಸಹಜವಾಗಿಯೇ ಚೆದುರಿಹೋದರು. ಎಲ್ಲಿ ಹೋದರು ಇವರೆಲ್ಲಾ? ಎಂಬ ವಿಸ್ಮಯ ಶ್ರೀನಿವಾಸನಲ್ಲಿ ಉಳಿದೇ ಉಳಿಯಿತು. ಬಾಳು ಅವರ ಇಚ್ಛೆಗೋ ಅನಿಚ್ಛೆಗೋ,

ಅವರನ್ನು ಎಲ್ಲೆಲ್ಲಿಯೋ ಕರೆದೊಯ್ಯಿತು. ಹೀಗೆ ಚೆದುರಿಹೋದ ಮಿತ್ರರು ಅವರ ಶೀಲ ಸ್ವಭಾವಗಳಿಗನುಗುಣವಾಗಿ, ಶ್ರೀನಿವಾಸನಿಗೆ ವಿವಿಧ ಸನ್ನಿವೇಶಗಳಲ್ಲಿ ಮುಖಾಮುಖಿಯಾಗುವ ಸಂದರ್ಭಗಳನ್ನು ಸೃಷ್ಟಿಸುತ್ತಲೇ ಓದುಗರಿಗೆ ಮಾನವ ಸ್ವಭಾವವನ್ನು ಪರಿಚಯಿಸುವಲ್ಲಿ ಕಾರಂತರು ಯಶಸ್ವಿಯಾಗುತ್ತಾರೆ.

ಶಾಲಾದಿನಗಳಲ್ಲಿ ತನ್ನ ಸಹಪಾಠಿಗಳು ಖಾಯಿಲೆ ಬಿದ್ದರೆ, ತನ್ನ ಓದಿನ ಭವಿಷ್ಯವನ್ನೂ ಲೆಕ್ಕಿಸದೆ ಅವರ ಶುಶ್ರೂಷೆಯಲ್ಲಿ ನಿಃಸ್ವಾರ್ಥವಾಗಿ ತೊಡಗಿಕೊಳ್ಳುತ್ತಿದ್ದ ವಾಸು ಕಾದಂಬರಿಯ ಕೇಂದ್ರಬಿಂದುವಿನಂತೆ ಕಂಡರೂ. ಕಾದಂಬರಿಯಲ್ಲಿ ಒಂದು ಪಾತ್ರವಾಗಿ ಎದುರಿಗೆ ಬರುವುದೇ ಇಲ್ಲ. ವಾಸುವನ್ನು ಓದುಗ ಪ್ರತ್ಯಕ್ಷವಾಗಿ ನೋಡುವುದು ಕಾದಂಬರಿಯ ಕೊನೆಯ ಪುಟಗಳಲ್ಲಿ.

ಶ್ರೀನಿವಾಸ ಕಟ್ಟಿ ಕೊಡುವ ಶಾಲಾ ದಿನಗಳ ಚಿತ್ರಗಳೊಡನೆ ಆರಂಭವಾಗುವ ವಾಸುವಿನ ಬಿಂಬ ಯಾರಿಗೂ. ಮನೆಯವರಿಗೂ ಕಾಣದೆ ಮಾಯವಾಗಿ ಎಲ್ಲೋ ಸಾಂಬಾ ಗುರೂಜಿಯ ಆಶ್ರಮದಲ್ಲಿ ಮಾಸ್ತರನಾಗಿ, ಅಲ್ಲಿ ಕಲಿಯಲು ಬರುತ್ತಿದ್ದ ಕಲಾವಂತರ ಮನೆಯ ಹುಡುಗಿ ಕುಸುಮೆಯ ಸಮಸ್ಯೆಗಳನ್ನು ಬಿಡಿಸಲು ಹೋಗಿ, ಅವಳನ್ನೇ ಮದುವೆಯಾಗಬೇಕಾದ ಅನಿವಾರ್ಯಕ್ಕೆ ಸಿಲುಕಿ, ಕಲಾವಂತರ ಮನೆಯ ಹುಡುಗಿಯನ್ನು ಮದುವೆಯಾದ ಕಾರಣದಿಂದಲೇ ಮನೆಯಿಂದಲೂ ಶಾಶ್ವತವಾಗಿ ದೂರವಾಗಿ, ಸಾಂಬಾ ಗುರೂಜಿಯ ಅಗ್ರಹಕ್ಕೂ ಗುರಿಯಾಗಿ, ಕೆಲಸಕ್ಕೆ ರಾಜೀನಾಮೆ ಕೊಟ್ಟವನು.

ಈ ಕಾರಣಗಳಿಂದ ಅವನು, ಅವನ ಕೈಹಿಡಿದ ಕುಸುಮೆ ಬಡತನದ ಬಾಳನ್ನು ಬಾಳುವುದು ಅನಿವಾರ್ಯವಾಯಿತು. ಕುಸುಮೆ ಅದರಿಂದೆಲ್ಲಾ ಬೇಸರಿಸಿ ಗಂಡನಿಗೆ ಕಿರುಕುಳ ಕೊಟ್ಟವಳೇ ಅಲ್ಲ. ಗಂಡನ ಸ್ವಭಾವವನ್ನು ಸರಿಯಾಗಿ ಗ್ರಹಿಸಿದ ಕುಸುಮೆ, ಅವನ ಜೀವನವಿಧಾನಕ್ಕೆ ಒತ್ತಾಸೆಯಾಗಿ ನಿಂತವಳು. ವಾಸು ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಕೊಂಡು ಮಡದಿ ಮಕ್ಕಳಿಂದಲೂ ದೂರವಾಗಿ, ತಾಯ್ನಾಡಿನ ಬಿಡುಗಡೆಗೆ ಶ್ರಮಿಸುತ್ತಿರುವಾಗಲೇ ಮಡದಿಯ ಬಾಳು ಘೋರ ದುರಂತದ ಪಾಲಾದುದು ತಿಳಿದು ಕಂಗಾಲಾಗುತ್ತಾನೆ. ಅವಳ ಮರಣದ ಸುದ್ದಿ ತಿಳಿದೂ, ತಿಳಿಯದಂತಹ ವಿಸ್ಮೃತಿಗೆ ಜಾರಿ ಮರುಳನಾಗುತ್ತಾನೆ.

ಹೀಗೆ ವಾಸುವಿನ ಬಾಳು ದುಃಖದ ಮಡುವಿನಲ್ಲಿ ಸಿಲುಕಿ ಜರ್ಝರಿತವಾದಾಗ ಅವನೆಲ್ಲಿದ್ದಾನೆಂಬ ಗುರುತೂ ಸಹ ಶ್ರೀನಿವಾಸನಿಗೆ ಗೊತ್ತಾಗುವುದಿಲ್ಲ. ಅವನ ಕರುಳ ಕುಡಿ ಸುವಾಸಿನಿಗೆ, ಶ್ರೀನಿವಾಸ ಶಾರದೆಯರ ಪ್ರೇಮದ ಹೃದಯ ತೆರೆದುಕೊಳ್ಳುತ್ತದೆ.

ಶಾರದೆ ಇದ್ದವರ ಮನೆಯ ಹುಡುಗಿ. ಅವಳಿಗೆ ಶ್ರೀನಿವಾಸನ ಬಡತನದ ಬಾಳು, ವೈರಾಗ್ಯ ಜೀವನ ಒಂದೂ ಹಿಡಿಸುವುದಿಲ್ಲ. ಅವಳು ಸಾಮಾನ್ಯ ಹೆಣ್ಣುಮಗಳು; ಆಸೆ, ಆಕಾಂಕ್ಷೆ, ತಪ್ಪು ತಿಳಿವಳಿಕೆ ಇವೆಲ್ಲವುಗಳಿಂದ ಕೂಡಿದವಳು. ಇದು ಶ್ರೀನಿವಾಸನಿಗೂ ಗೊತ್ತು. ಅವಳನ್ನು ಅವನು ಮದುವೆಯಾದದ್ದೂ ಸಹ ಮಿತ್ರ ರಾಮಚಂದ್ರನ ರುಗ್ಣಶಯ್ಯೆಯ ಅವಸ್ಥೆಯಲ್ಲಿ; ಅವನ ಒತ್ತಾಯಕ್ಕೆ ಕಟ್ಟುಬಿದ್ದು. ಇಂತಹ ಶಾರದೆ ಸಮಯ ಸಂದರ್ಭಗಳು ಒದಗಿಬಂದಾಗ ತೋರುವ ಪ್ರಬುದ್ಧತೆ ಅವಳ ಕೈ ಹಿಡಿದ ಶ್ರೀನಿವಾಸನಲ್ಲೂ ಬೆರಗು ಹುಟ್ಟಿಸುತ್ತದೆ.

'ಸಮೀಕ್ಷೆ' ಮನುಷ್ಯನ ಬಾಳಿನಲ್ಲಿ ಅವನು ಅನುಭವಿಸಬೇಕಾದ ಸನ್ನಿವೇಶಗಳನ್ನು ಅವನು ಹೇಗೆ ಅವನ ಸ್ವಭಾವ ಶೀಲಗಳಿಗನುಗುಣವಾಗಿ ನಿಭಾಯಿಸುತ್ತಾನೆ; ಮತ್ತು ಅಂಥಲ್ಲಿ

ಅವನ ಪ್ರತಿಕ್ರಿಯೆ ಎಂತಹುದಿರುತ್ತದೆ ಎನ್ನುವುದರ ಸಮೀಕ್ಷೆಯೇ ಆಗಿದೆ. ಮಿತ್ರರು ಅಗಲಿದ ನಂತರ ಮತ್ತೆ ದೊರಕಿದಾಗ ಅವರು ನಡೆದುಕೊಂಡ ರೀತಿ, ಅವರ ಬಾಳಿನ ಸಮೀಕ್ಷೆಯೂ ಆಗುತ್ತದೆ. ತಾನು ಕಾಯಿಲೆ ಬಿದ್ದಾಗ ಮಿತ್ರರಿಂದ ಶುಶ್ರೂಷೆ ಮಾಡಿಸಿಕೊಂಡು, ಕಡೆಗೆ ಎಲ್ಲರನ್ನೂ ಮರೆತ ಸಾಹುಕಾರ ನರಸಿಂಹ. ಹೆತ್ತ ತಾಯಿಯನ್ನೂ ನಿರ್ಲಕ್ಷಿಸಿ, ಸಂನ್ಯಾಸಿಯ ವೇಷ ಧರಿಸಿ ರಮಾನಂದ ಬುವಾ ಎಂಬ ಹೆಸರಿನಿಂದ ಮೆರೆಯುವ ಭೋಜ. ಸ್ವಪ್ರಯತ್ನದಿಂದ ಮುಂಬೈನ ಸಿರಿವಂತರಲ್ಲೊಬ್ಬನಾಗಿ ತನ್ನ ಅಕ್ಕರೆಯ ಸ್ವಭಾವವನ್ನು ಉಳಿಸಿಕೊಂಡು, ತನ್ನ ಭೋಳೆತನ ಮತ್ತು ಮೂಢನಂಬಿಕೆಗಳಿಂದ ನಗೆಗೆ ಗುರಿಯಾಗುವ ತಿರುಮಲೇಶ್ವರಭಟ್ಟ ಈ ಎಲ್ಲ ವಿಚಿತ್ರ ಚಿತ್ರಣಗಳೊಂದಿಗೆ ಶ್ರೀನಿವಾಸನ ಬಾಲ್ಯ ಮಿತ್ರ ಮತ್ತು ಶಾರದೆಯ ಅಣ್ಣ ರಾಮಚಂದ್ರನ ರೋಗಗ್ರಸ್ತ ಅಸಹಾಯ ಬದುಕು. ಅವನ ಅತ್ತೆ ಗಂಗಜ್ಜಿ, ಗಾಣಿಗ ಬಡೆಯ, ನಾಗ ನಾಗಿ ಈ ಎಲ್ಲ ಬಗೆಯ 'ಸಮೀಕ್ಷೆ'ಯ ಪಾತ್ರಗಳು ಯಾವಾಗಲೂ ಸ್ಮೃತಿಯಲ್ಲಿ ಉಳಿಯುವ ಜೀವಂತ ಪಾತ್ರಗಳು.

ಇದಕ್ಕೆ ಸಮೀಪದ ಕಾರಂತರ ಇನ್ನೊಂದು ಬರಹ 'ಇಳೆಯೆಂಬ'. ಇಲ್ಲಿಯೂ ಶಾಲಾ ದಿನದ ಸಂಭ್ರಮದ ಮಿತ್ರವರ್ಗ ಶಾಲೆಯಲ್ಲಿ ನಾಟಕಗಳನ್ನಾಡುವುದು, ಬಾಳಿನ ನಾಟಕದಲ್ಲಿ, ಈ ಇಳೆಯೆಂಬ ರಂಗಮಂದಿರದಲ್ಲಿ ಆಡುವ ನಿಜ ನಾಟಕಗಳು. ಇವುಗಳ ನಡುವಣ ತುಲನೆಯಲ್ಲಿ ಬಾಳಿನ ಸಾರ್ಥಕತೆ ಅಥವಾ ಸೋಲುಗಳು ಅನಾವರಣಗೊಳ್ಳುತ್ತಾ ಹೋಗುತ್ತವೆ.

ಉಡುಪಿಯ ಆನಂದರಾಯ, ಶಾಮರಾಯ ಬಾಲ್ಯಸ್ನೇಹಿತರು. ಉಡುಪಿಯ ಕಾಲೇಜಿನಲ್ಲಿ, ಬೆಳಗಾವಿಯ ಲಾ ಕಾಲೇಜಿನಲ್ಲಿಯೂ ಅವರ ಕಲಿಕೆ ಜೊತೆಗೇ ನಡೆಯುತ್ತದೆ. ಬೆಳಗಾವಿಯಂತೂ ಪರ ಊರಾದುದರಿಂದ ಒಂದೇ ಕೊಠಡಿಯಲ್ಲಿ ಅವರ ವಾಸ್ತವ್ಯ.

ಶಾಮರಾಯ ಸ್ವಭಾವತಃ ತುಂಬಾ ಚಾಲಾಕಿ. ಉಡುಪಿಯ ಕಾಲೇಜಿನಲ್ಲಿ ಕಲಿಯುತ್ತಿದ್ದಾಗ ಅವರ ಪ್ರಿನ್ಸಿಪಾಲರನ್ನೇ ಅನೇಕ ಸಾರಿ ಬೇಸ್ತು ಬೀಳಿಸಿದ ಕಿಲಾಡಿ. ಉಡುಪಿಗೆ ಒಮ್ಮೆ ರಾಜ್ಯಪಾಲರು ಭೇಟಿ ನೀಡುವ ಕಾರ್ಯಕ್ರಮವಿದ್ದಾಗ, ಪ್ರಿನ್ಸಿಪಾಲರಿಗೂ ಸುಳಿವು ಕೊಡದೆ ಅವರನ್ನು ಕಾಲೇಜಿಗೆ ಆಮಂತ್ರಿಸಿ, ಯುಕ್ತಿಯಿಂದ ಅವರ ಒಪ್ಪಿಗೆಯನ್ನೂ ಪಡೆದುಕೊಂಡು, ಒಂದೇ ದಿನದ ಅವಧಿಯಲ್ಲಿ ನಿರ್ವಹಿಸಿದ ಅವರ ಸ್ವಾಗತದ ಜವಾಬ್ದಾರಿಗೆ, ಪ್ರಿನ್ಸಿಪಾಲರೇ ಕಣ್ಣು ಕಣ್ಣು ಬಿಡುವಂತೆ ಮಾಡಿದವನು. ನಂತರ ಇಡೀ ಕಾರ್ಯಕ್ರಮವನ್ನು ಅದ್ದೂರಿಯಗಿ ನೆರವೇರುವಂತೆಯೂ ನೋಡಿಕೊಂಡವನು.

ಆನಂದರಾಯನದು ಈ ರೀತಿಯ ವರ್ಣಮಯ ಬದುಕಲ್ಲ, ಅವನು ಹೆಚ್ಚಾಗಿ ಮೌನಿ. ಅವನಿಗೆ ಹಿಡಿಸಿದ ವಿಷಯದಲ್ಲಿಯೋ, ಗ್ರಂಥದಲ್ಲಿಯೋ ತಿಳಿದು ಬರುವ ವಿವರಗಳನ್ನು ಆಳವಾಗಿ ಗ್ರಹಿಸಿ, ಅದರ ವಿಚಾರಗಳನ್ನೇ ಅನೇಕ ಪಾರ್ಶ್ವಗಳಿಂದ ಚಿಕಿತ್ಸಕವಾಗಿ ಚಿಂತಿಸುವವನು. ಅವನ ತಂದೆ ಉಡುಪಿಯ ಪ್ರಸಿದ್ಧ ಲಾಯರು ಮಾಧವರಾಯರಿಗೆ "ಏಕೆ ಹೀಗೆ ಸುಳ್ಳುಪಳ್ಳು ಸೃಷ್ಟಿಸಿ ವಾಯಿದಾ ತೆಗೆದುಕೊಳ್ಳುವುದು? ಕೇಸು ಬೇಗ ಇತ್ಯರ್ಥ ವಾದರೆ ಕಕ್ಷೀದಾರನಿಗೆ ಹಿತವಲ್ಲವೇ?" ಎಂಬಂತಹ ಸವಾಲುಗಳನ್ನು ಹಾಕುವವನು. ಇದಕ್ಕೆಲ್ಲಾ ಮಾಧವರಾಯರು ಮೀಸೆಯಲ್ಲಿಯೇ ನಗುತ್ತಾ, ಕೇಸುಗಳು ಬೇಗ ಬೇಗ ಇತ್ಯರ್ಥವಾದರೆ ಲಾಯರುಗಳ ಫೀಜು ಹೇಗೆ ದುಗುಣಗೊಳ್ಳಲು ಸಾಧ್ಯ? ಕಕ್ಷಿದಾರನಿಗೂ ಕೋರ್ಟು ಎಂದರೆ ಸಾಮಾನ್ಯವಲ್ಲ ಎಂಬುದು ಮನವರಿಕೆಯಾಗಬಾರದೇ? ಎಂಬೆಲ್ಲಾ ಯೋಚನೆಗಳಿಂದ 'ಹುಡುಗನದು ಹುಡುಗುಬುದ್ಧಿ, ಮುಂದೆ ಅವನು ದಾರಿಗೆ ಬರುತ್ತಾನೆ'

ಎಂದು ಸಮಾಧಾನ ತಾಳುವರು. ಆದರೆ ಆನಂದರಾಯ ದಾರಿಗೆ ಬರುವುದರ ಬದಲು ತಾನೇ ವಕಾಲತ್ತು ವಹಿಸುವಾಗಲೂ ಕಕ್ಷಿದಾರರ ಹಿತಕ್ಕಾಗಿಯೇ ದುಡಿಯುವ ದಾರಿಯನ್ನೇ ಹಿಡಿದವನು.

ಇಂತಹ ವಿಭಿನ್ನ ಸ್ವಭಾವಗಳ ಆನಂದರಾಯ, ಶಾಮರಾಯ ಇವರು ಇಷ್ಟೊಂದು ಸ್ನೇಹಿತರಾಗಿರಲು ಕಾರಣ ಇಬ್ಬರಿಗೂ ಇದ್ದ ನಾಟಕದ ಹುಚ್ಚು. ಬೆಳಗಾವಿಯಲ್ಲಿ ವಕೀಲಿ ಕಲಿಯುತ್ತಿದ್ದಾಗ ಗುಡದಪ್ಪನ ನಾಟಕದ ಕಂಪನಿ ಅಲ್ಲಿಗೆ ಬರುತ್ತದೆ. ಇಬ್ಬರೂ ಯುವಕರು ಗುಡದಪ್ಪನ ಪರಿಚಯ ಸ್ನೇಹ ಸಂಪಾದಿಸುತ್ತಾರೆ. ಆಗ ಗುಡದಪ್ಪನ ಕಂಪನಿಯ ಯಶಸ್ವಿ ನಾಟಕ 'ಹೆಣ್ಣು ಸಂಸಾರದ ಹುಣ್ಣು' ಆನಂದರಾಯನ ಮನಸ್ಸನ್ನು ಬಹುವಾಗಿ ಕೆಣಕುತ್ತದೆ. ಇಂಥದೊಂದು ಅಸಂಬದ್ಧ ನಾಟಕ ಪ್ರೇಕ್ಷಕರಿಗೆ ಪ್ರಿಯವಾದದ್ದು ಹೇಗೆ? ಒಂದಿಷ್ಟಾದರೂ ಸಹಜತೆಯ ನೆರಳಿಲ್ಲದ, ಅಗ್ಗದ ಹಾಸ್ಯದ ಈ ನಾಟಕ ಜನರನ್ನು ಸೆಳೆಯುವುದಾದರೂ ಹೇಗೆ? ಎನ್ನುವುದು ಆನಂದರಾಯನ ಯೋಚನೆ. "ಹಗಲೂ ಇರುಳೂ ಸಂಸಾರದ ರಥ ಎಳೆಯುವಲ್ಲಿ ತಲೆ ರೋಸಿದ ಜನಕ್ಕೆ ಎರಡು ಮೂರು ಗಂಟೆ ನಕ್ಕು ನಲಿಯಲು ಅಷ್ಟು ಸಾಕು" ಎನ್ನುವುದು ಗುಡದಪ್ಪನ ವಾದ.

ಕೆಲವು ಐತಿಹಾಸಿಕ ಅದರಲ್ಲೂ ವಿಜಯನಗರ ಸಾಮ್ರಾಜ್ಯಕ್ಕೆ ಸಂಬಂಧಪಟ್ಟ ಕೆಲವು ನಾಟಕಗಳನ್ನು ಈ ಮಿತ್ರರು ಸೂಚಿಸಿದಾಗ, ಗುಡದಪ್ಪ ದಾವಣಗೆರೆ ಕ್ಯಾಂಪಿನಲ್ಲಿ ಇಂತಹ ನಾಟಕದಿಂದ ತನಗಾದ ಕಹಿ ಅನುಭವಗಳನ್ನು ತೋಡಿಕೊಳ್ಳುತ್ತಾನೆ. "ಹಾಗಾದರೆ ನಾವು ಇತಿಹಾಸದಲ್ಲಿ ನಡೆದುದನ್ನು ಹೇಳುವ ಹಾಗಿಲ್ಲವೇ?" ಎಂದರೆ (ಇಲ್ಲಿ ಕಾರಂತರವೇ ಕೆಲವು ಸಾಲುಗಳನ್ನು ಯಥಾವತ್ತಾಗಿ ಕೊಟ್ಟಿದ್ದೇನೆ) : "ಶಾಮರಾಯರೇ, ನಿಮ್ಮ ಮೀಸೆ ಸಾಕಷ್ಟು ಬಲಿತ ಮೇಲೆ ನಿಮಗೆ ಅದೆಲ್ಲಾ ಗೊತ್ತಾದೀತು, ಚರಿತ್ರೆಯ ಸತ್ಯ ಅನ್ನುತ್ತೀರಿ ನೀವು, ಅದು ಯಾವ ಕಾಲದ್ದೇ ಇರಲಿ ಎಂತಹ ಚರಿತ್ರೆಯೇ ಆಗಿರಲಿ; ನಿನ್ನೆಯ ಸತ್ಯವೇ ಇರಲಿ: ಇವತ್ತಿನ ಸತ್ಯವೇ ಇರಲಿ; ಸತ್ಯವನ್ನು ಹೇಳಹೊರಟ ವ್ಯಕ್ತಿ, ಈ ಜಗತ್ತಿನಲ್ಲಿ ಸತ್ತು ಮಣ್ಣು ತಿಂದಾನು. ನಿಮ್ಮ ಮುಂದೆ ನಿಮ್ಮ ವಿಷಯದ ಸತ್ಯವನ್ನು ಹೇಳಿದರೆ ನೀವು ಕೇಳುತ್ತೀರಾ? ಅಥವಾ ನನ್ನ ವಿಷಯದ ಸತ್ಯವನ್ನು ಹೇಳಿದರೆ ನಾನು ಕೇಳುತ್ತೇನೆಯೇ? ಯಾರಿಗೆ ಬೇಕು ಸತ್ಯ ಈ ಕಾಲದಲ್ಲಿ? ಇವತ್ತು ಚಲಾಯಿಸುವ ನಾಣ್ಯ ಬತ್ತಲೆ ಸತ್ಯವಲ್ಲ, ಸುನೇರಿ ಕಾಗದ ಅಂಟಿಸಿದ ಸುಳ್ಳು."

ತಮ್ಮ ಕಾಲೇಜಿನಲ್ಲಿಯೇ ಒಂದು ನಾಟಕ ಆಡಿಬಿಡುವ ನಿರ್ಧಾರಕ್ಕೆ ಇಬ್ಬರು ಗೆಳೆಯರೂ ಬರುತ್ತಾರೆ. ಕಾಲೇಜು ನಾಟಕಗಳಲ್ಲಿಯೂ ಇದುವರೆಗೆ ಉದ್ದಟೋಪನುಗಳನ್ನು ಹಾಕಿಕೊಂಡು ಗಂಡು ಹುಡುಗರೇ ಅಭಿನಯಿಸುತ್ತಿದ್ದುದು, ಹುಡುಗಿಯರೇ ಆ ಪಾತ್ರಗಳನ್ನು ಮಾಡಿದರೆ ಇನ್ನೂ ಸಹಜವಾಗಿರುತ್ತದೆ ಎನಿಸುತ್ತದೆ. ಬರಿಯ ಗಂಡಸರ ಕ್ಷೇತ್ರವಾಗಿದ್ದ ಕಾನೂನು ಅಭ್ಯಾಸಕ್ಕೆ ಇತ್ತೀಚೆಗೆ ಹೆಣ್ಣು ಮಕ್ಕಳೂ ಬರುತ್ತಿದ್ದು ಅವರಲ್ಲಿ ಕು. ಬೆಲ್ಲದ, ಕು. ಅರಿಸಿನದ, ಜ್ವಾಲಾ ಕುಲಕರ್ಣಿ, ವನಲತಾ ಅಂಗಡಿ ಇವರಲ್ಲಿ ಯಾರನ್ನಾದರೂ ನಟಿಸಲು ಒಪ್ಪಿಸಲು ಯೋಚಿಸುತ್ತಾರೆ. ಹೀಗಾಗಿ ಆನಂದರಾಯನ 'ಎಣಿಸದ ಅಪರಾಧ' ನಾಟಕ ಕಾಲೇಜಿನ ಹುಡುಗ ಹುಡುಗಿಯರು ಸೇರಿ ಅಭಿನಯಿಸಿ ಯಶಸ್ವಿಯಾಗುತ್ತದೆ.

ಮುಂದೆ ಆನಂದರಾಯರ ತಂದೆ ಮಾಧವರಾಯರ ಅಕಾಲ ಮರಣದಿಂದ ಅವರ ಕೇಸುಗಳನ್ನು ನಡೆಸುವ ಜವಾಬ್ದಾರಿ ಆನಂದರಾಯನ ಮೇಲೆ ಬೀಳುತ್ತದೆ. ಆನಂದರಾಯ, ಶಾಮರಾಯ ಇಬ್ಬರೂ ಉಡುಪಿ ಲಾಯರುಗಳಾಗುತ್ತಾರೆ. ಇಬ್ಬರ ವಿಭಿನ್ನ ಸ್ವಭಾವಗಳು

ವಿಭಿನ್ನ ಪರಿಸ್ಥಿತಿಗಳಿಗೆ ಕಾರಣವಾಗುತ್ತವೆ. ಶಾಮರಾಯನ ಲಘು ಮನೋವೃತ್ತಿ ತನ್ನ ದೇಹ ಮನಸ್ಸುಗಳಿಗೆ ಬೇಕಾದುದನ್ನು ಪಡೆಯುವಲ್ಲಿ ಪರರ ಮೇಲಾಗಬಹುದಾದ ಪರಿಣಾಮಗಳ ಬಗ್ಗೆ ಪರಿಗಣಿಸದ ಸ್ವಭಾವದಿಂದಾಗಿ ಅವನನ್ನು ನಂಬಿದವರಿಗೆ ಮೆಚ್ಚಿದವರಿಗೆ ಒದಗುವ ಸಂಕಟಕ್ಕೆ ಜ್ವಾಲಾ ಕುಲಕರ್ಣಿ ಉದಾಹರಣೆಯಾಗುತ್ತಾಳೆ.

ಬೆಳಗಾವಿಯಲ್ಲಿ ಕಲಿಯುತ್ತಿದ್ದ ಸಮಯದಲ್ಲಿ ಅವನನ್ನು, ಅವನ ವಚನವನ್ನು ನಂಬಿ ಬಾಲಬುದ್ಧಿಯಿಂದ ಅವನ ಆಕಾಂಕ್ಷೆಗಳಿಗೆ ತನ್ನನ್ನು ಒಡ್ಡಿಕೊಂಡದ್ದು, ಅವನನ್ನು ನಂಬಿ ತನ್ನ ಅಕ್ಕ ಭಾವರೊಡನೆ ಉಡುಪಿಗೂ ಬಂದದ್ದು, ಅಲ್ಲಿ ಶಾಮರಾಯನ ದರ್ಶನವಾಗದೆ, ಅವನಿಗೆ ಮದುವೆಯೂ ಆಗಿ ಮಗುವೂ ಆಗಿರುವ ವಿಚಾರ ತಿಳಿಯುವುದು, ಇವೆಲ್ಲ ನಡೆದುಹೋಗುತ್ತವೆ. ಯಾರನ್ನೂ ಮದುವೆಯಾಗಲು ಇಷ್ಟಪಡದ ಆನಂದರಾಯ ಜ್ವಾಲೆಯನ್ನು ಮದುವೆಯಾಗಲು ಕೋರಿಕೆ ಸಲ್ಲಿಸಿದಾಗಲೂ, ಶಾಮರಾಯನ ಮೇಲಣ ಪ್ರೀತಿಯಿಂದ ನಯವಾಗಿ ಆನಂದರಾಯನ ಕೋರಿಕೆಯನ್ನು ಒಪ್ಪದೆ ಹೋದ ಜ್ವಾಲಾ ಕುಲಕರ್ಣಿಗೆ, ತಾನು ಎಂತಹ ಅಪಾತ್ರನಿಗೆ ಮನಸ್ಸು ಕೊಟ್ಟೆ ಎಂಬುದು ತಿಳಿಯುವ ವೇಳೆಗೆ ಅನಾಹುತವಾಗಿರುತ್ತದೆ. ಈ ವಿಷಯದಲ್ಲಿ ಜ್ವಾಲೆ ಎಷ್ಟು ಗಂಭೀರಳೋ; ಶಾಮರಾಯ ಅಷ್ಟೇ ಜವಾಬ್ದಾರಿ ಇಲ್ಲದವನು. ಆನಂದರಾಯನಿಗೂ ಜ್ವಾಲೆಯ ಬಾಳಿನಲ್ಲಿ ಪ್ರವೇಶ ಮಾಡಿರುವವನು ಶಾಮರಾಯ ಎಂಬುದು ಅರಿವಾಗಲು ತುಂಬಾ ತಡವಾಗುತ್ತದೆ.

ಶಾಮರಾಯನ ನಡವಳಿಕೆಯಿಂದ ಹತಾಶಳಾದ ಜ್ವಾಲಾ ಕುಲಕರ್ಣಿ ಉಡುಪಿಯಲ್ಲಿಯೇ ಬ್ಯಾಂಕ್ ಉದ್ಯೋಗಿಯಾಗಿ ತನ್ನ ಬಾಳನ್ನು ಕಂಡುಕೊಳ್ಳುವುದು, ತಾನು ಪ್ರಿಯಕರನೆಂದು ನಂಬಿದ್ದ ಶಾಮರಾಯನಿಗೂ ಅವನ ಮಿತ್ರ ಆನಂದರಾಯನಿಗೂ ಇರುವ ಅಜಗಜಾಂತರ ಸ್ವಭಾವ ವೈವಿಧ್ಯ ಜ್ವಾಲೆಗೆ ಅರಿವಾಗುವುದು ಇತ್ಯಾದಿ ಯಾವತ್ತೂ ಕಥಾನಕ ಎಂದಿನದೇ ಆದರೂ, ಮುಂದೂ ನಡೆಯುವಂತಹುದೇ. ಆದರೂ, ಮನುಷ್ಯ ಸಹಜವಾದ ಸ್ವಭಾವಗಳನ್ನು ಅನಾವರಣಗೊಳಿಸುವಲ್ಲಿ 'ಸಮೀಕ್ಷೆ'ಯಂತೆಯೇ 'ಇಳೆಯೆಂಬ' ಕಾದಂಬರಿಯ ಸಮೀಕ್ಷೆಯೂ ಯಶಸ್ವಿಯಾಗಿದೆ.

●

ಕಾರಂತರ ಜೀವಂತ ಪಾತ್ರಗಳು – ೧೨

ಇಪ್ಪತ್ತನೆಯ ಶತಮಾನದ ಸಾಹಿತಿಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮದಿಂದ ಸ್ಫೂರ್ತಿ ಪಡೆದವರು. ಇದಕ್ಕೆ ಯಾರೆಂದರೆ ಯಾರೂ ಹೊರತಲ್ಲ; ಕುವೆಂಪು, ಮಾಸ್ತಿ, ಬೇಂದ್ರೆ, ಕಾರಂತರು ಮಾತ್ರವಲ್ಲ, ಅಂದಿನ ಕಾಲದ ಬರಹಗಾರರ ಸಮೂಹ– ಹಿರಿ ಕಿರಿಯರೆಲ್ಲರೂ ನಾಡು ಕೈಗೊಂಡ ಈ ಮಹಾಯಜ್ಞದಿಂದ ಪ್ರೇರಣೆ ಪಡೆದವರೇ ಆಗಿದ್ದರು. ಅಂದಿನವರು ರಚಿಸಿದ ಸ್ವಾತಂತ್ರ್ಯಕ್ಕೆ ಸಂಬಂಧಪಟ್ಟ ಸಾಹಿತ್ಯಶ್ರೇಣಿಯೇ ಇದಕ್ಕೆ ಸಾಕ್ಷಿ.

ಭಾರತದ ಬಿಡುಗಡೆಯಿಂದ ದೇಶದ ಕಟ್ಟಕಡೆಯ ಮನುಷ್ಯನ ಕಣ್ಣೀರನ್ನು ಸಹ ಒರೆಸಲು ಸಾಧ್ಯ ಎಂಬ ಆಶಾವಾದ ಎಲ್ಲ ಚಿಂತಕರಲ್ಲಿ ಅಂದು ಕುಡಿಯೊಡೆದಿತ್ತು. ಅದಕ್ಕೆ ಆ ಹೊತ್ತಿನ ಹೋರಾಟಗಾರರ ತ್ಯಾಗಶೀಲ ಬದುಕು; ಅಂದಿನ ನಾಯಕರ ಉನ್ನತ ಜೀವನಾದರ್ಶಗಳು ಜನಸಾಮಾನ್ಯರ ಕಣ್ಣಿಗೆ ಎದ್ದು ಕಾಣುತ್ತಿದ್ದುದು ಕಾರಣವಿರಬಹುದು.

ಕಾರಂತರಂತಹ ಚಿಂತಕರು ಸ್ವಲ್ಪ ಭಾವುಕತೆಯ ಪರಿಧಿಯಿಂದ ಹೊರಬಂದು ಸ್ವಾತಂತ್ರ್ಯ

ನಿಜವಾಗಿಯೂ ಜನಜೀವನದ ಸಂಪೂರ್ಣ ಬಿಡುಗಡೆಗೆ ಕಾರಣವಾಗುವುದೋ? ಅಥವಾ ಭ್ರಮನಿರಸನದಲ್ಲಿ ಪರ್ಯವಸಾನವಾಗುವುದೋ? ಎಂದು ಚಿಂತಿತರಾಗಿದ್ದರು. ಏಕೆಂದರೆ ಅವರ ಕಣ್ಣೆದುರಿಗೇ ಹೋರಾಟ, ಕುತಂತ್ರಗಳ ಕೈವಶವಾಗುತ್ತಿರುವ ನೋಟ ಅವರಲ್ಲಿ ಆತಂಕವನ್ನು ಹುಟ್ಟಿಸಿತ್ತು. ಇದರ ಎಳೆಗಳು ನಮಗೆ 'ಔದಾರ್ಯದ ಉರುಳಲ್ಲಿ'ಯೇ ಗೋಚರಿಸುತ್ತವೆ.

ಇಡಿಯ ಇಪ್ಪತ್ತನೆಯ ಶತಮಾನದ ಉದ್ದಕ್ಕೂ ಬಾಳಿ, ಆಗಿನ ಯುಗಮಾನದಲ್ಲಿ ಜರುಗಿದ ಅಸಂಖ್ಯಾತ ಬದಲಾವಣೆಗಳಿಗೆ ಸಾಕ್ಷಿಯಾಗಿ; ನಡೆಯುತ್ತಿದ್ದ ವಿದ್ಯಮಾನಗಳನ್ನು ತೆರೆದ ಕಣ್ಣು, ಮನಸ್ಸುಗಳಿಂದ ಸೂಕ್ಷ್ಮವಾಗಿ ಅವಲೋಕಿಸುತ್ತಾ, ಎಲ್ಲ ಪ್ರಮುಖ ಘಟನಾವಳಿಗಳಿಗೂ ಪ್ರತಿಸ್ಪಂದಿಸುತ್ತಿದ್ದ ಕಾರಂತರ ಮನಸ್ಸು, ಸ್ವಾತಂತ್ರ್ಯಪೂರ್ವದ ಸಮಯವನ್ನು, ನಂತರದ ಸಮಯವನ್ನು ತಮ್ಮ ಬರಹಗಳಲ್ಲಿ ವಿವರವಾಗಿ ಹಿಡಿದಿಡಲು ಸಮರ್ಥವಾಗಿದೆ. 'ಔದಾರ್ಯದ ಉರುಳಲ್ಲಿ', 'ಸಮೀಕ್ಷೆ' ಇವು ಸ್ವಾತಂತ್ರ್ಯದ ಹೋರಾಟದ ಚಿತ್ರಣಗಳನ್ನು ದಾಖಲಿಸಿರುವ ಕಾದಂಬರಿಗಳು; **'ಗೊಂಡಾರಣ್ಯ', 'ನಾವು ಕಟ್ಟಿದ ಸ್ವರ್ಗ'** ಇವು ಸ್ವಾತಂತ್ರ್ಯಾನಂತರದ ರಾಜಕಾರಣವನ್ನು ಚಿತ್ರಿಸುವ ಕಾದಂಬರಿಗಳು.

ಮಾನವ ಸ್ವಭಾವದ ದೌರ್ಬಲ್ಯಗಳನ್ನು ಸರಿಯಾಗಿ ಗುರುತಿಸಿದ್ದು ಕಾರಂತರು, ಕೆಲವರು ಕಂಡಂತಹ ಅತಿ ಅವಾಸ್ತವ ಆದರ್ಶಗಳ ಚಿತ್ರವನ್ನು ಕಂಡವರಲ್ಲವಾದರೂ; ಕೆಲ ಮಟ್ಟಿನ ನ್ಯೂನತೆಗಳ ನಡುವೆಯೂ ಒಂದು ರೀತಿಯ ಸಭ್ಯವಾದ ಸಾಮಾಜಿಕ ಚೌಕಟ್ಟನ್ನು ಪರಿಭಾವಿಸಿದವರು. ಆದರೆ ಅವರಿಗೆ ಯಾವ ರೀತಿಯ ಭ್ರಮನಿರಸನವಾಯಿತೆಂದರೆ 'ಗೊಂಡಾರಣ್ಯ', 'ನಾವು ಕಟ್ಟಿದ ಸ್ವರ್ಗ'ದಂತಹ ಬರಹಗಳಲ್ಲಿ ಅವರ ಘಾಸಿಗೊಂಡ ಮನಸ್ಸನ್ನು ಕಾಣಬಹುದು. ಮನುಷ್ಯ ಸ್ವಭಾವವೆಂಬುದು, ಅವರು ಎಣಿಸಿದ ಯಾವ ಎಣಿಕೆಗೂ ಸಿಗದಷ್ಟು ರಸಾತಳವನ್ನು ಕಂಡುದನ್ನು ಪ್ರತ್ಯಕ್ಷವಾಗಿ ಕಂಡ ಎಲ್ಲ ಚಿಂತಕರೂ ಹೌಹಾರಿ ಹೋದಂತೆ ಕಾರಂತರೂ ಸ್ತಂಭೀಭೂತರಾಗಿ ಹೋಗುತ್ತಾರೆ. ಇಪ್ಪತ್ತನೆಯ ಶತಮಾನದ ಪ್ರಥಮಾರ್ಧದಲ್ಲಿ, ಮತ್ತು ನಂತರದಲ್ಲಿ ಬದುಕಿ ಬಾಳಿದ ಎಲ್ಲ ಚಿಂತಕರೂ ತಮ್ಮ ಕೊನೆಯ ದಿನಗಳನ್ನು ತೀರಾ ಹತಾಶ ಬದುಕಾಗಿ ಕಳೆಯಬೇಕಾಗಿ ಬಂದುದೇ ಈ ನಾಡಿನ ಅತಿ ದೊಡ್ಡ ಐತಿಹಾಸಿಕ ದುರಂತ.

ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಮುಂಚೂಣಿಯಲ್ಲಿದ್ದು ಮೌಲ್ಯಯುತ ಜೀವನವನ್ನು ನಡೆಸಿದ್ದ ನಾಯಕರು ಸ್ವಾತಂತ್ರ್ಯ ಸನಿಹವಾಗುತ್ತಿದ್ದಂತೆಯೇ ಅಪ್ರಸ್ತುತರೂ, ಅನಪೇಕ್ಷಿತರೂ ಆಗತೊಡಗಿದ್ದುದು; ಅವರ ಸ್ಥಾನದಲ್ಲಿ ಕಪಟಿಗಳೂ, ಕುತಂತ್ರಿಗಳೂ ನೆಲೆಯೂರತೊಡಗಿದ್ದು, ಬಾಯಿ ಜೋರಿಗೆ ಬೆಲೆ ಸಿಗತೊಡಗಿ, ಚಿಂತಕರು ಹಿಂದೆ ಸರಿಯಬೇಕಾದ ಸನ್ನಿವೇಶವನ್ನು ಕಾರಂತರು ತಮ್ಮ ಬರಹಗಳಲ್ಲಿ ಮುಕ್ತವಾಗಿ ಚರ್ಚಿಸುತ್ತಾರೆ.

ಮನುಷ್ಯ ಸ್ವಭಾವವೆಂಬುದು ತುಂಬಾ ವಿಚಿತ್ರವಾದುದು ಮತ್ತು ಅವಕಾಶ ದೊರಕಿದರೆ ತುಂಬಾ ಅಸಹ್ಯವಾಗಿ ವರ್ತಿಸುವ ಒಂದು ಪದಾರ್ಥವೆಂಬುದನ್ನು, ಕಾರಂತರು ತುಂಬಾ ಮನದಟ್ಟಾಗುವಂತೆ ಚಿತ್ರಿಸುತ್ತಾರೆ. ಅಧಿಕಾರವಿಲ್ಲದಾಗ ಇರುವ ಗುಣ ಸ್ವಭಾವಗಳು ಅಧಿಕಾರದ ಗದ್ದುಗೆ ಏರಿ ಕುಳಿತರೆ ಸಾಮಾನ್ಯ ಮನುಷ್ಯನಲ್ಲಿ ನೋಡನೋಡುತ್ತಲೇ ಮಾಯವಾಗಿ ಹೋಗುತ್ತವೆ. ಆಮೆಯು ತನ್ನೆಲ್ಲಾ ಅವಯವಗಳನ್ನು ಚಿಪ್ಪಿನೊಳಗೆ ಸೆಳೆದುಕೊಳ್ಳುವಂತೆ ಅಧಿಕಾರ ಪಡೆದ ಮನುಷ್ಯನ ಮಾರ್ದವತೆಯ ಜಾಗದಲ್ಲಿ ಕಠಿಣತೆ ಸ್ಥಾನ ಪಡೆಯುತ್ತದೆ. ಇಂತಹವನ್ನು ಮೀರಿ ನಿಲ್ಲುವ ವ್ಯಕ್ತಿತ್ವಗಳು ಇರಬಹುದಾದರೂ ಅವು ಬೆರಳಣಿಕೆಯಷ್ಟೂ

ಅಲ್ಲ. ಉಳಿದಂತೆ ಮಾನವ ಜಾತ್ರೆಯೇ ಅವಕಾಶವಾದದೆಡೆಗೆ ಸರಿಯುವ ಒಂದು ಮಂದೆ. ರಾಜಕಾರಣದ ಸ್ವಭಾವವೇ ಹಾಗೆ; ಅಲ್ಲಿ ಯಾವ ಆದರ್ಶಗಳೂ ನಿಲ್ಲುವುದಿಲ್ಲ. ಅದು ರಾಜಪ್ರಭುತ್ವವೇ ಆಗಲಿ, ಜನತಂತ್ರದ ಜನನಾಯಕತ್ವವೇ ಆಗಲಿ, ಗದ್ದುಗೆಯ ಮೇಲಿರುವವನ ಕಿವಿಗಳು ಕೇಳುವುದಂತೂ ಅಪರೂಪವೇ. ಅವನು ಕಾಣುವುದೂ ಸಹ ಅವಾಸ್ತವವೇ. ಸಿಂಹಾಸನವೇರಿದವನು ರಾಜಕಾರಣದ ಶುಷ್ಕ ಯಂತ್ರದ ಭಾಗವಾಗಿ ಹೋಗುತ್ತಾನೆ. ಆ ಯಂತ್ರಕ್ಕೆ ಯಾವ ಭಾವನೆಗಳೂ ಇರುವುದಿಲ್ಲ; ಅದು ಕೈಗೆ ಸಿಕ್ಕವರನ್ನು ನಿರ್ದಯವಾಗಿ ಹಿಚುಕಿಹಾಕುವ ಭಾವರಹಿತ ಚಕ್ರಗಳ ಸರಣಿ. ರಾಜಕಾರಣವೇ ಕ್ರೂರ ತಳಹದಿಯ ಮೇಲೆ ನಿಂತ, ನೋಡಲು ಸುಂದರವಾಗಿ ಕಾಣುವ ಪಿಶಾಚ ಸೌಧ. ಮುಳ್ಳನ್ನು ಹೂವಿನಂತೆ; ವಿಷವನ್ನು ಅಮೃತದಂತೆ; ಸುಳ್ಳನ್ನು ಸತ್ಯದಂತೆ ಬಿಂಬಿಸುವ ಮರೀಚಿಕೆ ಅದು, ಅದರ ಬಲೆಗೆ ಸಿಲುಕಿದವನು ಎಂದೂ ಶಾಂತಿಯನ್ನು ಕಾಣಲಾರ.

ಜನತೆಗೆ ಕನಸುಗಳ ಜಾತ್ರೆಯನ್ನೇ ತೋರಿಸಿ ಕ್ರಾಂತಿಯ ಹರಿಕಾರರ ರೀತಿಯಲ್ಲಿ ಬಿಂಬಿಸಿಕೊಂಡ ನಾಯಕರೂ ಸಹ ಅಧಿಕಾರ ಸಿಕ್ಕ ಕ್ಷಣದಿಂದ ನಡೆದುಕೊಂಡ ರೀತಿ ಮಾತ್ರ ಅವರು ಯಾವುದನ್ನು ವಿರೋಧಿಸಿ ಅಧಿಕಾರಕ್ಕೆ ಬಂದರೋ ಅದರ ಮುಂದುವರಿದ ರೂಪವಾಗಿ ಅದರದೇ ಪಳೆಯುಳಿಕೆಯಾಗಿ ಬಣ್ಣ ಬದಲಾಯಿಸಿದುದು. ಕಳೆದ ಶತಮಾನದ ರಾಜಕೀಯ ಚರಿತ್ರೆಯನ್ನು ನಿಷ್ಪಕ್ಷಪಾತ ದೃಷ್ಟಿಯಿಂದ ಗಮನಿಸಿದವರಿಗೆ ಇದು ಸ್ಪಷ್ಟವಾಗಿ ಗೋಚರಿಸುತ್ತದೆ.

ಕಾರಂತರು ಸ್ವಾತಂತ್ರ್ಯಾನಂತರದ ಚಿತ್ರಣವನ್ನು ತಾವು ಕಣ್ಣಾರೆ ಕಂಡು ಅನುಭವಿಸಿದ ರೀತಿಯಲ್ಲಿಯೇ ಹಿಡಿದಿಡುವುದರಿಂದ ಮೈಸೂರು ಸಂಸ್ಥಾನದ ಅರಸರ ಆಡಳಿತದಿಂದ ಪ್ರಜಾರಾಜ್ಯದೆಡೆಗೆ ಬದಲಾಗಿ ಹೋದ ಸನ್ನಿವೇಶಗಳನ್ನೇ ತಮ್ಮ **'ಗೊಂಡಾರಣ್ಯ'** ಕಾದಂಬರಿಯಲ್ಲಿ ಚಿತ್ರಿಸತೊಡಗುತ್ತಾರೆ. ಗೊಂಡಾರಣ್ಯವೆಂಬುದು ಕರ್ನಾಟಕದಂತಹ (!) ಒಂದು ರಾಜ್ಯ. ಅದರ ರಾಜ ವಿಕ್ರಮಪ್ರತಾಪಚಂದ್ರ, ರಾಜಧಾನಿ ವಿಕ್ರಮನಗರ; ರಾಜ್ಯದ ದೊಡ್ಡ ಪಟ್ಟಣಗಳು ಭೀಮನೂರು, ಮಾನನಗರ, ಶ್ಯಾಮನಗರ... ರಾಜ್ಯ ನೈಸರ್ಗಿಕ ಸಂಪತ್ತಿನಿಂದ ಸಮೃದ್ಧವಾದುದು. ನಿತ್ಯ ಹರಿದ್ವರ್ಣದ ಕಾಡುಗಳಿಂದ; ಮುಗಿಲನ್ನು ಚುಂಬಿಸುವಂತೆ ತಲೆಯೆತ್ತಿ ಮಲೆತು ನಿಂತ ಮಲೆಗಳಿಂದ; ಮಲೆಗಳಲ್ಲಿ ತುಂಬಿದ ಖನಿಜ ಸಂಪತ್ತಿನಿಂದ ಶ್ರೀಮಂತವಾದುದು. ಮಲೆಗಳಲ್ಲಿ ವಾಸಿಸುವ ಬುಡಕಟ್ಟುಗಳ ಜನಾಂಗ ಮುಗ್ಧವೂ, ನೈಸರ್ಗಿಕವೂ ಆದುದು. ಗೊಂಡಾರಣ್ಯದಲ್ಲಿ ಹರಿಯುವ ನದಿಗಳು ಮಳೆಗಾಲದಲ್ಲಿ ಉಕ್ಕಿ ಸೊಕ್ಕಿ ಹರಿಯುವ ಜಲಧಾರೆಗಳು...

ಸ್ವರಾಜ್ಯದ ಗಾಳಿ ಭಾರತದ ಎಲ್ಲ ಭಾಗಗಳಂತೆ ಗೊಂಡಾರಣ್ಯದಲ್ಲಿಯೂ ಬೀಸ ತೊಡಗುತ್ತದೆ. ಜಗತ್ತಿನೆಲ್ಲೆಡೆ ಸಿಂಹಾಸನಗಳು ಮುರಿದು ಬೀಳುತ್ತಿದ್ದ ಕಾಲ ಅದು. ಇದಕ್ಕೆ ಗೊಂಡಾರಣ್ಯ ಹೇಗೆ ಹೊರತಾದೀತು? ಹೀಗಾಗಿ ರಾಜಪ್ರಭುತ್ವ ಕೊನೆಗೊಂಡು ಪ್ರಜಾರಾಜ್ಯದ ಹೊಸ ದಿನಮಾನಗಳು ಆರಂಭವಾಗುತ್ತವೆ. ಆದರೆ ಇಲ್ಲಿ ಜನಪ್ರತಿನಿಧಿಯಾಗಿ ಮೂಡಿಬಂದ ಹಿಂಜಿ ವಾಮನರಾಯ ಮಾತ್ರ ಆಶ್ಚರ್ಯಕ್ಕೆ ಕಾರಣನಾಗುತ್ತಾನೆ. ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿ ಕಷ್ಟನಷ್ಟಗಳಿಗೆ ಗುರಿಯಾದ ಯಾವ ಜೀವವೂ ಇಲ್ಲಿ ಮನ್ನಣೆ ಪಡೆಯುವುದೇ ಇಲ್ಲ. ಬದಲಾಗಿ ಬಾಯಿಜೋರಿನ ತಂತ್ರ ಕುತಂತ್ರಗಳ ನಾಯಕತ್ವದೆದುರು ಸಾತ್ವಿಕ ನಾಯಕತ್ವ ಮೌನ ವಹಿಸಬೇಕಾಗುತ್ತದೆ. ಯಾವಾಗ ವಾಮನರಾಯ ರಾಜ್ಯದ ನೇತಾ ಆಗುತ್ತಾನೋ ಆಗಲೇ ಮೃಗದ ಸುತ್ತಣ ನರಿಗಳಂತೆ ವಂದಿಮಾಗಧರ ಸಂತೆಯೇ ನೆರೆಯುತ್ತದೆ. ಅವನನ್ನು

ಸುತ್ತುವರಿದ ಈ ಪಡೆಗೆ ಯಾವುದೇ ಸ್ವಂತದ ಆಲೋಚನೆಗಳಾಗಲೀ, ಒಳನೋಟಗಳಾಗಲೀ, ಜನತೆಯ ಬಗೆಗಿನ ಅಂತಃಕರಣವಾಗಲೀ, ನಾಡಿನ ಬಗೆಗಿನ ಹೆಮ್ಮೆಯಾಗಲೀ ಯಾವುದೂ ಇರುವುದಿಲ್ಲ. ಆದರೆ ನಡೆಯುತ್ತಿರುವ ವಿದ್ಯಮಾನಗಳನ್ನು ಸ್ವಂತದ ಲಾಭಕ್ಕೆ ಬಳಸಿಕೊಳ್ಳುವ ಚತುರತೆ ಮಾತ್ರ ಅವರಲ್ಲಿ ಕರಗತವಾಗಿರುತ್ತದೆ.

ನಾಡಿನ ಸಂಪದ್ಭರಿತ ಪ್ರಕೃತಿ ಅವರಿಗೆ ಅಕ್ಷಯ ಖಜಾನೆಯಂತೆ ಗೋಚರಿಸುತ್ತದೆ. ಸಾವಿರಾರು ವರ್ಷಗಳ ಅರಣ್ಯ ಸಂಪತ್ತು ವಿಪತ್ತಿಗೆ ಸಿಲುಕುತ್ತದೆ. ಹಸಿರು ತುಂಬಿ ಹೆದ್ದೆರೆಗಳಂತೆ ಮಲೆತು ನಿಂತಿದ್ದ ದೈತ್ಯ ಮರಗಳು ನಿರ್ದಾಕ್ಷಿಣ್ಯವಾಗಿ ಧರೆಗುರುಳಿ ಲೂಟಿಕೋರರ ಖಜಾನೆಯ ಕರೆನ್ಸಿ ಆಗುತ್ತವೆ. ಎಲ್ಲೆಂದರಲ್ಲಿ ಬೆಟ್ಟಗಳನ್ನು ಬಗೆದು ಖನಿಜಗಳನ್ನು ಹೊರ ತೆಗೆದ ಪರಿಣಾಮ ಪರಿಸರದ ಮೇಲೆ ತೀವ್ರವಾಗಿ ನಿಸರ್ಗದ ಸಮತೋಲನವೇ ತಪ್ಪಿ ಹೋಗುತ್ತದೆ. ಅರಣ್ಯದ ಎಲ್ಲ ಭಾಗಗಳಿಗೆ ಆಧುನಿಕತೆಯ ಹೆಸರಿನಲ್ಲಿ ರಸ್ತೆಗಳ ನಿರ್ಮಾಣವಾಗಿ ಅರಣ್ಯೋತ್ಪನ್ನಗಳು, ಖನಿಜಗಳು ನಿರಾತಂಕವಾಗಿ ಸೂರೆಯಾಗುತ್ತವೆ. ಇದರ ಪರಿಣಾಮ ಶತಮಾನಗಳಿಂದ ಕ್ಲುಪ್ತ ಹವಾಮಾನವನ್ನು ಹೊಂದಿದ್ದ ಗೊಂಡಾರಣ್ಯದ ನೈಸರ್ಗಿಕ ಸಂರಚನೆಯೇ ನಾಶವಾಗಿ ಕ್ಷಾಮ ಡಾಮರಗಳು ತಲೆದೋರುತ್ತವೆ.

ಈ ರೀತಿ ನಾಡಿನ ಪ್ರಕೃತಿ, ಅವಿವೇಕಿಗಳ ಅತಿಕ್ರಮಣದಿಂದ ಮುನಿದು ಕುಳಿತಿದ್ದರೆ; ಅದುವರೆಗೆ ಜನಜೀವನದಲ್ಲಿ ಹಾಸುಹೊಕ್ಕಾಗಿದ್ದ ನೀತಿ ನಡಾವಳಿಗಳು ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳತೊಡಗುತ್ತವೆ. ಬಡವರ ಉದ್ಧಾರಕ್ಕಾಗಿ ಕಂಕಣ ಕಟ್ಟಿದವರಂತೆ ಹಾರಾಡುವ ಪಕ್ಷಗಳವರೂ ಸಹ ವಾಮಮಾರ್ಗದಲ್ಲಿ ಹಣ ಗಳಿಸುವಲ್ಲಿ ಹಿಂದೆ ಬೀಳುವುದಿಲ್ಲ. ಎಲ್ಲವೂ ತೋರಿಕೆ ಬೂಟಾಟಿಕೆಯಾಗಿ ಆಡುವ ಮಾತಿಗೂ ನಡೆಯುವ ಕೃತಿಗೂ ಯಾವ ಸಂಬಂಧವೂ ಉಳಿಯುವುದಿಲ್ಲ.

ಇದನ್ನೆಲ್ಲಾ ವಿಸ್ಮಯದಿಂದ ಗಮನಿಸುವವನು ಸಾಮಾನ್ಯ ಮನುಷ್ಯನಾದ ಬುಡಕಟ್ಟು ಪಂಗಡದ ಮುಕ್ಕಣ್ಣ. ಅವನು ಅದುವರೆಗೆ ಬಾಳಿದ ರೀತಿಗೂ, ಸ್ವರಾಜ್ಯದಲ್ಲಿನ ವಿದ್ಯಮಾನಗಳಿಗೂ ಯಾವ ತಾಳೆಯೂ ಆಗುವುದಿಲ್ಲ. ಜೊತೆಗೆ ಕಾಡಿನಲ್ಲಿ ನಡೆಯುವ ಕೊಲೆ ದರೋಡೆಗಳಿಗೂ; ಕೆಲವು ರಾಜಕೀಯ ಸಿದ್ಧಾಂತಗಳಿಗೂ ಸಂಬಂಧವಿರುವುದು ಅವನನ್ನು ದಿಗ್ಭ್ರಾಂತನನ್ನಾಗಿಸುತ್ತದೆ.

ಅವನ ಹೊಟ್ಟೆಯ ಮಗ ಮಾನಪ್ಪನೇ ಬಂಡಾಯಗಾರನಾಗಿ ಬೆಳೆಯತೊಡಗಿದ್ದು ಅವನ ಆತಂಕ ಬೆಳೆಯಲು ಮತ್ತಷ್ಟು ಕಾರಣವಾಗುತ್ತದೆ. ಯಾರೋ ಕಷ್ಟಪಟ್ಟು ಸಂಪಾದಿಸಿದ ಹಣವನ್ನು ಯಾವುದೇ ಕಾರಣಕ್ಕೆ, ಯಾವುದೇ ಸಿದ್ಧಾಂತದ ಹೆಸರಿನಲ್ಲಿ, ಲೂಟಿ ಮಾಡುವ ಉದ್ಯಮವನ್ನು ಸಮರ್ಥಿಸಿಕೊಳ್ಳುವ ಯಾವ ನ್ಯಾಯವೂ ಅವನಿಗೆ ಸರಿ ಎನಿಸುವುದಿಲ್ಲ. ಹೀಗಾಗಿ ಮುಕ್ಕಣ್ಣ ಅವನದೇ ಮಗನ ದೃಷ್ಟಿಯಲ್ಲಿ ಹಳೆಗಾಲದ ಪಳೆಯುಳಿಕೆಯಂತೆ ಭಾಸವಾಗುತ್ತಾನೆ. ಪಾರಂಪರಿಕವಾಗಿ ಮುಕ್ಕಣ್ಣನಲ್ಲಿ ಅಜ್ಜೊತ್ತಿದ್ದ ತನ್ನದು ಪರರದು ಎಂಬ ಸಾಮಾನ್ಯ ಜ್ಞಾನ, ಪರರ ಸ್ವತ್ತಿನ ಬಗ್ಗೆ ಅವನಿಗಿದ್ದ ನೈತಿಕ ಕಲ್ಪನೆಗಳು ಇವೆಲ್ಲಾ ಮಾನಪ್ಪನ ಚಿಂತನೆಯಲ್ಲಿ ಅಪಹಾಸ್ಯದ ವಸ್ತುಗಳಾಗುತ್ತವೆ. ಹೀಗಾಗಿ ತಂದೆ ಮಕ್ಕಳ ನಡುವಣ ಸಂಬಂಧ ಎಣ್ಣೆ ಶೀಗೆಯಾಗತೊಡಗುತ್ತದೆ.

ಮುಕ್ಕಣ್ಣನ ದೃಷ್ಟಿಯಲ್ಲಿ ತಾನು ಮತ್ತು ತನ್ನ ಹಿರಿಯರು ಅದುವರೆಗೆ ಬಾಳಿ ಬದುಕಿದ ಪ್ರಪಂಚಕ್ಕೂ ಈಗ ತಾನು ಕಾಣುತ್ತಿರುವ ಪ್ರಪಂಚಕ್ಕೂ ಯಾವ ತಾಳೆಯೂ ಆಗುವುದಿಲ್ಲ.

ತಾನು ಬದುಕಿ ಪಾದಾರ್ಪಣೆ ಮಾಡಿರುವ ಆಧುನಿಕ ಜಗತ್ತು ತನ್ನ ಪಾಲಿಗೆ ತೀರಾ ಅನ್ಯ ಎಂಬುದು ಅರಿವಾಗಿ ಮುಕ್ಕಣ್ಣ ಖಿನ್ನನಾಗುತ್ತಾನೆ. ತನ್ನ ಕಣ್ಣೆದುರಿನ ಜಗತ್ತು ಭಾವಶೂನ್ಯ ಮಾತ್ರವಲ್ಲ, ಮನುಷ್ಯರು ಬದುಕಲು ಅರ್ಹವಲ್ಲದ ರೀತಿಯಲ್ಲಿ ಮಾರ್ಪಾಟಾಗುತ್ತಲಿರುವುದನ್ನು ಕಂಡು ಅವನು ಭಯಭೀತನಾಗುತ್ತಾನೆ.

ಗೊಂಡಾರಣ್ಯದ ಹಿರಿಯ ಮುಖಂಡ ಅರುಣಾಚಲಯ್ಯ ನಾಡಿನ ಈ ಅಪದೆಸೆಯನ್ನು ಕಂಡೂ ಏನು ಮಾಡಲೂ ತೋರದ ಅಸಹಾಯಕತೆಯಲ್ಲಿ ಚಿಂತೆಗೀಡಾಗುತ್ತಾನೆ; ವ್ಯವಸ್ಥೆಯ ವಿರುದ್ಧ ಒಂಟಿ ದನಿಯಾಗಿ ಸೆಣಸುತ್ತಿರುತ್ತಾನೆ. ಪ್ರಜಾಪ್ರಭುತ್ವಕ್ಕೆ ಅನುಗುಣವಾಗಿ ರಾಜ್ಯದಲ್ಲಿ ಚುನಾವಣೆಗಳೂ ಬರುತ್ತವೆ. ಅವುಗಳಲ್ಲಿ ಮೋಸ ವಂಚನೆಗಳೂ ನಡೆಯುತ್ತವೆ. ಪ್ರಗತಿಗಿಂತ ವಿಪ್ಲವ, ಚಳವಳಿ, ಸಂಪು, ಬಂದ್ ಇವುಗಳದೇ ಸಾಮ್ರಾಜ್ಯವಾಗುತ್ತದೆ.

ರಾಜ್ಯದಲ್ಲಿ ದೇಶವಾದಿಗಳೂ, ಸಾಮ್ಯವಾದಿಗಳೂ, ಜನವಾದಿಗಳೂ ಮುಂತಾದ ವಿವಿಧ ತಾತ್ವಿಕ ಗುಂಪುಗಳು ತಮ್ಮ ತಮ್ಮ ಸಿದ್ಧಾಂತದಂತೆ ಪಕ್ಷಗಳನ್ನು ಕಟ್ಟಿಕೊಂಡು ರಾಜಕೀಯವಾಗಿ ಸೆಣಸುತ್ತಾರೆ; ಆದರೆ ಇದಾವುದರಿಂದಲೂ ಕುಸಿಯುತ್ತಿರುವ ಸಾಮಾಜಿಕ ವ್ಯವಸ್ಥೆಯನ್ನು ನೇರಗೊಳಿಸಲು ಮಾತ್ರ ಸಾಧ್ಯವಾಗುವುದಿಲ್ಲ.

ದೇಶವಾದಿಗಳಲ್ಲಿ ಮುಖ್ಯನಾದವನು ಹಿಂಜಿ ವಾಮನರಾಯನಾದರೆ, ಸಾಮ್ಯವಾದಿಗಳ ಮುಖಂಡ ಗುಲಾಲಿ ಟೋಪಿಯ ಸೇತೂರಾಯ. ಇವರ ನಡುವೆ ಒಬ್ಬ ಪತ್ರಕರ್ತ ತಿರುಮೂರ್ತಿ. ಈ ಎಲ್ಲ ರಾಜಕೀಯ ನಾಯಕರ ನಡುವೆ ಅತ್ಯಂತ ವಿಶಿಷ್ಟವಾದ ನಾಯಕಿ ಎಂದರೆ ಕಾಂಚನಮಾಲೆ. ಅವಳ ಆಲೋಚನಾ ಸರಣಿ ನಂಬಿರುವ ಜೀವನ ಮೌಲ್ಯಗಳು ಯಾರಿಗಂದರೆ ಯಾರಿಗೂ ಅರ್ಥವಾಗದಂತಹ ಕಗ್ಗಂಟುಗಳು. ಅವಳು ಮಂತ್ರಿಯಾಗಿರುವ ದೇಶವಾದಿ ಪಕ್ಷದಲ್ಲಿಯೇ ಮಾನಸಿಕವಾಗಿ ಅವಳಿಲ್ಲ. ಪ್ರಧಾನಮಂತ್ರಿ (ಮುಖ್ಯಮಂತ್ರಿಗೆ ಅಂದಿನ ಕಾಲಕ್ಕೆ ಕಾರಂತರು ಕೊಟ್ಟು ಹೆಸರು) ಹಿಂಜಿ ವಾಮನರಾಯನಿಗೆ ಅವಳು ತುಂಬಾ ಹತ್ತಿರದವಳೆಂಬ ಪ್ರತೀತಿ ಇದ್ದರೂ, ಅವಳಿಗೂ ಅವನಿಗೂ ಆಕಾಶ ಪಾತಾಳದಷ್ಟು ವೈಚಾರಿಕ ಅಂತರ. ಸಾಮ್ಯವಾದಿ ನಾಯಕ ಸೇತೂರಾಯನ ಧ್ಯೇಯ, ಆದರ್ಶಗಳಿಂದ ಅವಳು ಆಕರ್ಷಿತಳಾದರೂ ಅಲ್ಲಿ ವ್ಯಾಪಿಸುತ್ತಿದ್ದ ಹಿಂಸಾತ್ಮಕ ಧೋರಣೆಗಳಿಂದ ಬೇಸತ್ತವಳು. ಇಂತಹ ಕಾಂಚನಮಾಲೆ, ಅರುಣಾಚಲಯ್ಯನವರಂತಹ ವ್ಯಕ್ತಿ ರಾಜ್ಯದ ಚುಕ್ಕಾಣಿ ಹಿಡಿದರೆ ರಾಜ್ಯಕ್ಕೆ ಹಿತ ಎಂದು ಚಿಂತಿಸಿದವಳು.

ಬರಿಯ ಚಿಂತಿಸದೆ ಆ ದಿಕ್ಕಿನಲ್ಲಿ ಕಾರ್ಯೋನ್ಮುಖಳೂ ಆಗಿ ಅದರಲ್ಲಿ ಯಶಸ್ಸು ಕಾಣುತ್ತಾಳೆ. ಆದರೆ ಅವಳ ಎಲ್ಲ ಪ್ರಯತ್ನಗಳೂ ವಿಫಲವೆನ್ನುವಂತೆ ಅರುಣಾಚಲಯ್ಯನವರೇ ಕೊಲೆಯಾಗಿ ಹೋಗುತ್ತಾರೆ. ಹೀಗೆ ಸ್ವಾತಂತ್ರ್ಯಾನಂತರದ ಮೊದಲ ಹತ್ತು ವರ್ಷಗಳ ಕಥನವನ್ನು 'ಗೊಂಡಾರಣ್ಯ'ದಲ್ಲಿ ಸವಿವರವಾಗಿ ಬಿಚ್ಚಿಡುತ್ತಾ ಹೋಗುವ ಕಾರಂತರು ಕಾದಂಬರಿಯ ಅಂತ್ಯವನ್ನು ತುಂಬಾ ಬೀಭತ್ಸಕರವಾಗಿ ಚಿತ್ರಿಸುತ್ತಾರೆ. ಕಾಂಚನಮಾಲೆ ತನ್ನೆಲ್ಲಾ ಪ್ರಯತ್ನಗಳೂ ಭಗ್ನಗೊಂಡುದರಿಂದ ತಪ್ತಗೊಂಡು ರಾಜಕೀಯದ ಕಬಂಧ ಬಾಹುವಿನಲ್ಲಿ ನಲುಗುತ್ತಿರುವ ಸಾಮಾನ್ಯ ಜೀವನವನ್ನು ನೇರವಾಗಿ ತಿದ್ದುವ ದಾರಿಯೇ ಕಾಣದೆ; ಒಂದು ಬೃಹತ್ ರಾಜಕೀಯ ಸಮಾವೇಶವನ್ನು ಮಾನನಗರದಲ್ಲಿ ಏರ್ಪಡಿಸಿ ನಯ ವಂಚಕ ರಾಜಕಾರಣಿಗಳನ್ನೆಲ್ಲಾ ಒಂದು ಕೃತಕ ಪ್ರವಾಹದಲ್ಲಿ ಕೊಚ್ಚಿ ಹೋಗುವಂತೆ ಮಾಡಿ ತಾನೂ ಆತ್ಮಾರ್ಪಣೆ ಮಾಡಿಕೊಳ್ಳುತ್ತಾಳೆ.

'ಗೊಂಡಾರಣ್ಯ'ದ ಕಾರಂತರ ಅಭಿಪ್ರಾಯಗಳು ಸೈದ್ಧಾಂತಿಕ ನಿಲುವುಗಳನ್ನೇ

ಪಾರಮ್ಯವೆಂದು ಭಾವಿಸಿ (ಯಾರೋ ಪ್ರತಿಪಾದಿಸಿದ) ಅಂಥ ಹಠಕ್ಕೆ ಜೋತು ಬೀಳುವ ಬಳ್ಳಿಗುರುಡು ದೃಷ್ಟಿಗೆ ಅಷ್ಟಾಗಿ ರುಚಿಸದಿರಬಹುದು. ಅಲ್ಲಿನ ತಾತ್ವಿಕ ನೆಲೆಗಟ್ಟೇ ಪೊಳ್ಳೆನಿಸಬಹುದು. ಆದರೆ ಇಡೀ ಕಾದಂಬರಿಯು ನೆಲೆಗಟ್ಟು ಕುಸಿಯುತ್ತಿರುವ ಸಮಾಜ ವ್ಯೂಹದ ಚಿತ್ರಣವನ್ನು ಮತ್ತು ಜಾರುವ ದಾರಿಯಲ್ಲಿ ರಭಸದಿಂದ ಜಾರುತ್ತಾ ಪ್ರಪಾತಕ್ಕೆ ಉರುಳುತ್ತಿರುವ ಮಾನವ ಜೀವನ ಶೈಲಿಯನ್ನು ಅನಾವರಣಗೊಳಿಸುವಲ್ಲಿ ಯಶಸ್ವಿಯಾಗಿದೆ.

●

ಕಾರಂತರ ಜೀವಂತ ಪಾತ್ರಗಳು – ೧೩

ಬುದ್ಧಿ ಇರುವ ಮನುಷ್ಯನನ್ನು, ಮನಸ್ಸನ್ನು ಕೆಣಕುತ್ತಲೇ ಇರುವ ವಿಷಯಗಳಲ್ಲಿ ಆಕಾಶವು ಪ್ರಮುಖವಾದುದು. ಕಾಲದಿಂದ ಕಾಲಕ್ಕೆ ಆಕಾಶದ ಬಗ್ಗೆ ಅವನ ಅರಿವಿನ ವಿಸ್ತಾರ ಹೆಚ್ಚುತ್ತಲೇ ಇದೆ. ಈ ವಿಷಯದ ತಿಳಿವಿನಲ್ಲಿ ಪ್ರಾಚೀನ ಕಾಲದ ಭಾರತೀಯರು ಜಗತ್ತಿನ ಬೇರೆ ಭಾಗಗಳ ಜನರಿಗಿಂತ ತುಂಬಾ ಮುಂಚೂಣಿಯಲ್ಲೇ ಇದ್ದರು. ಹದಿನಾರನೇ ಶತಮಾನದ ಕೋಪರ್ನಿಕಸ್, ಟೈಕೋ ಬ್ರಾಹೆ, ಕೆಪ್ಲರ್ ಇವರು ಖಗೋಳದ ಬಗ್ಗೆ ಹೊಸ ಹೊಸ ಮಾಹಿತಿಗಳನ್ನು ಸಂಶೋಧಿಸುವುದಕ್ಕಿಂತ ಒಂದು ಸಾವಿರ ವರ್ಷಗಳ ಮೊದಲೇ- ಐದನೇ ಶತಮಾನದಲ್ಲೇ ಭಾರತದ ಆರ್ಯಭಟ ಭೂಮಿಯು ಗೋಳಾಕಾರವನ್ನು, ಅದರ ಅಕ್ಷಗತಿಯನ್ನು ಕಂಡು ಹಿಡಿದಿದ್ದ. ಆಧುನಿಕ ಕಾಲ ತೊಡಗುವ ವೇಳೆಗೆ ಭಾರತದ ಈ ಖಗೋಳ ಜ್ಞಾನ, ಫಲಜ್ಯೋತಿಷ್ಯದ ಕಪಿಮುಷ್ಟಿಗೆ ಸಿಕ್ಕಿ ಹಳ್ಳ ಹಿಡಿದು ಹೋಯಿತು. ಯಾವ ಒಂದು ವಿಷಯ ಹೊಸ ಜ್ಞಾನ ಕ್ಷಿತಿಜಗಳನ್ನು ತೆರೆಯಲು ಕಾರಣವಾಗಬೇಕಿತ್ತೋ ಅದೇ ವಿಷಯ ಇನ್ನೊಂದೇ ಅಂಧಶ್ರದ್ಧೆಗೆ ಆಸ್ಪದ ಕೊಡುವ ರೀತಿಯಲ್ಲಿ ಅದನ್ನು ಉಪಯೋಗಿಸಿಕೊಂಡುದು ಇದರಿಂದಾಗಿ ಜ್ಯೋತಿಷ್ಯಕ ವಿಷಯದ ಪ್ರತಿಭೆಗಳು ಅನಗತ್ಯ ವಿಷಯಗಳಲ್ಲಿ ಸಿಲುಕಿ ಪೋಲಾದುದು ಮಾತ್ರವಲ್ಲ ಜಾಗತಿಕ ಜ್ಞಾನಕ್ಷೇತ್ರದಲ್ಲಿ ತುಂಬಾ ಹಿಂದೆ ಬಿದ್ದುದು ಈಗ ಇತಿಹಾಸ.

ಯಾಕೆ ಮನುಷ್ಯ ಈ ಭವಿಷ್ಯ ಎಂಬ ಅನಿಶ್ಚಿತ ಅಮೂರ್ತ ವಿಷಯದ ಹಿಂದೆ ಬೀಳುತ್ತಾನೆ ಎಂಬುದು ಮನೋವಿಜ್ಞಾನಿಗಳು ಬಿಡಿಸಬೇಕಾದ ವಿಷಯ.ಆದರೂ ಸ್ಥೂಲವಾಗಿ ವಿವೇಚಿಸಿದರೆ ಹುಟ್ಟಿದ ಪ್ರತಿಯೊಬ್ಬನಿಗೂ ಬದುಕುವ ಆಸೆ ಇದ್ದೇ ಇರುತ್ತದೆ. ಅದು ಪ್ರಕೃತಿಯೇ ಅವನಲ್ಲಿ ನಾಟಿ ಮಾಡಿರುವ ಸ್ವಭಾವ. ಅವನಲ್ಲಿ ಮಾತ್ರ ಅಲ್ಲ, ಒಂದು ಏಕಾಣು ಜೀವಿಯಿಂದ ಹಿಡಿದು ಬೃಹದಾಕಾರದ ಜೀವಿಯ ವರೆಗೆ ಈ ಬದುಕಿನ ಅಂಟು ನಿಸರ್ಗನಿಯಮ. ಇಲ್ಲವಾದರೆ ಈ ಜಗತ್ತು ಎಂದೋ ಇಲ್ಲವಾಗುತ್ತಿತ್ತು.

ಈ ಪ್ರಕೃತಿಯಲ್ಲಿ ಹುಟ್ಟಿದ ಯಾವ ಪ್ರಾಣಿಯೂ ಸುಖಾಸುಮ್ಮನೆ ಕಷ್ಟ ನಷ್ಟಗಳನ್ನು ಬಯಸುವುದಿಲ್ಲ; ಅದರಲ್ಲೂ ಇಷ್ಟೊಂದು ಸ್ಮೃತಿ, ಕಲ್ಪಕತೆಗಳ ಶಕ್ತಿಯನ್ನು ಹೊಂದಿರುವ ಮನುಷ್ಯ ಕನಸಿನಲ್ಲೂ ತನಗೆ ಅಸುಖವನ್ನು ಊಹಿಸಲಾರ. ಅವನು ಬದುಕಬೇಕು: ಚೆನ್ನಾಗಿಯೇ ಬದುಕಬೇಕು; ಅವನಿಗೆ ರೋಗ ರುಜಿನಗಳಿಲ್ಲದ ಜೀವನ ಬೇಕು. ಸಾಂಪತ್ತಿಕವಾಗಿ ಸಕಲ ಅನುಕೂಲಗಳೂ ಬೇಕು. ಇದು ಇಷ್ಟಕ್ಕೆ ನಿಲ್ಲುವುದಿಲ್ಲ ಎಲ್ಲರಿಗಿಂತ ಹೆಚ್ಚು ಬೇಕು ಎನ್ನುವ ದುರಾಸೆ ಲೋಭಗಳೂ ಬೆಳೆದು ನಿಲ್ಲುತ್ತವೆ. ಆದರೆ ಬದುಕು ಎಷ್ಟು ಅನಿಶ್ಚಿತ ಮತ್ತು ಆಕಸ್ಮಿಕ ಎಂದರೆ ಅವನು ಯಾವುದನ್ನು ಬೇಡವೆನ್ನುತ್ತಾನೋ, ಯಾವುದು ಅವನ ಕಲ್ಪನೆಯಲ್ಲಿಯೇ ಇರುವುದಿಲ್ಲವೋ, ಅದೇ ಅವನೆದುರು ಧುತ್ತೆಂದು

ನಿಂತಿರುತ್ತದೆ. ಹೀಗಾಗಿ ನಾಳಿನ ದಿನವನ್ನು ಕಾಣದ ಮನುಷ್ಯ ಅದರ ಕಲ್ಪನೆಯಲ್ಲಿಯೇ ಒದ್ದಾಡುತ್ತಿರಬೇಕಾಗುತ್ತದೆ.

ಮನುಷ್ಯನ ಜೀವಮಾನದ ಅನಿರೀಕ್ಷಿತ ವಿದ್ಯಮಾನಗಳಿಗೂ ಖಗೋಳದ ಗ್ರಹ ನಕ್ಷತ್ರಗಳ ಚಲನೆಗೂ ಸಂಬಂಧವಿದೆ ಎಂದು ಯಾವ ಮಹಾನುಭಾವ ಕಂಡು ಹಿಡಿದನೋ ಗೊತ್ತಿಲ್ಲ. ಆದರೆ ಅಂತಹ ನಂಬಿಕೆಗಳು ಎಷ್ಟೊಂದು ಗಟ್ಟಿಯಾಗಿ ಬೇರೂರಿದವೆಂದರೆ ಎಲ್ಲ ಭದ್ರವಾದ ಅಂಧ ಶ್ರದ್ಧೆಗಳಿಗಿಂತ ಈ ಫಲಜ್ಯೋತಿಷ್ಯದ ಅಂಧಶ್ರದ್ಧೆ ತುಂಬಾ ಆಳವಾಗಿಯೇ ಬೇರು ಬಿಟ್ಟಿತು. ಅದು ಎಷ್ಟು ಗಟ್ಟಿಯಾದುದೆಂದರೆ, ಹೆಚ್ಚು ವಿದ್ಯಾವಂತರಾದವರಲ್ಲೂ, ಅನೇಕ ಕ್ಷೇತ್ರಗಳಲ್ಲಿ ಜ್ಞಾನಸಂಪಾದನೆ ಮಾಡಿದವರಲ್ಲೂ ಈ ಗೀಳು ತುಂಬಿಕೊಂಡಿರುವುದನ್ನು ಕಾಣಬಹುದು.

ಇನ್ನೂ ಕೆಲವು ವಿದ್ಯಮಾನಗಳಿಗೆ ಯಾವ ವಿವರಣೆಗಳನ್ನೂ ಕೊಡಲು ಬರುವುದಿಲ್ಲ. ಜಗತ್ತು ಮತ್ತು ಜೀವನ ಹೇಗೆ ಅನೂಹ್ಯ ಮತ್ತು ವಿಪರ್ಯಾಸಮಯವೋ ಅಲ್ಲಿ ಜರುಗುವ ವಿದ್ಯಮಾನಗಳೂ ಸಹ ಅಷ್ಟೇ ವಿವರಣೆಗೇ ಸಿಲುಕದ ವಿಚಿತ್ರಗಳು. ತಾರ್ಕಿಕ ಬುದ್ಧಿಶಕ್ತಿಗೂ ಕೆಲವಾದರೂ ಘಟನೆಗಳಿಗೂ ಅರ್ಥಾರ್ಥ ಸಂಬಂಧವಿರುವುದಿಲ್ಲ. ಇಂಥದೊಂದು ಘಟನೆ ಡಚ್ ದೇಶದಲ್ಲಿ ನಡೆಯಿತು. ಪೀಟರ್ ಹುರ್ಕಾಕ್ ಎಂಬ ಪೇಂಟರ್‌ನೊಬ್ಬ ಬಣ್ಣ ಬಳಿಯುತ್ತಿದ್ದಾಗ ಮೇಲಿನಿಂದ ಬಿದ್ದುಬಿಟ್ಟ. ಅದೃಷ್ಟವಶಾತ್ ಪ್ರಾಣಾಪಾಯವಾಗದಿದ್ದರೂ ಮೆದುಳಿಗೆ ಏಟು ಬಿದ್ದಿತು. ಕೆಲವು ದಿನಗಳ ಚಿಕಿತ್ಸೆಯ ನಂತರ ನೋಡುತ್ತಾನೆ ಅವನ ಮೆದುಳಿಗೆ ಭವಿಷ್ಯದಲ್ಲಿ ನಡೆಯಬಹುದಾದ ವಿದ್ಯಮಾನಗಳ ಸ್ಪಷ್ಟ ಚಿತ್ರಣ ಸಿಗುತ್ತಿರುತ್ತದೆ. ಇದು ಹೇಗೆ? ಎಂದು ಮಾತ್ರ ತಿಳಿಯುವುದಿಲ್ಲ. ಭವಿಷ್ಯದ ವಿಷಯದಲ್ಲಿನ ಸಂಗತಿಗಳು ಒಬ್ಬ ವ್ಯಕ್ತಿಗೆ ಮೊದಲೇ ಗೊತ್ತಾಗುತ್ತವೆ ಎನ್ನುವುದಾದರೆ ಭವಿಷ್ಯವೆನ್ನುವುದರ ಬೀಜಗಳು ಭೂತದಲ್ಲಿಯೇ ಹುದುಗಿರುತ್ತವೆಯೇ? ಗೊತ್ತಿಲ್ಲ. ಈ ವಿಷಯವನ್ನೇ ತೆಗೆದುಕೊಂಡ ಕಾರಂತರು ತಮ್ಮ **'ಕಣ್ಣಿದ್ದೂ ಕಾಣರು'** ಕಾದಂಬರಿಯಲ್ಲಿ ಒಂದು ಪಾತ್ರವನ್ನೇ ಸೃಷ್ಟಿಸುತ್ತಾರೆ. ನಿಜ ಜೀವನದಲ್ಲಿ ಪೇಂಟರ್ ಒಬ್ಬ ಅಪಘಾತಕ್ಕೊಳಗಾದರೆ ಇಲ್ಲಿ ಹುಲ್ಲಿನ ಬಣವೆಯಿಂದ ಬಿದ್ದ ಹಳ್ಳಿಯ ಮನುಷ್ಯನೊಬ್ಬ ಅಂತಹ ಶಕ್ತಿಯನ್ನು ಸಂಪಾದಿಸಿ ತತ್ವಜ್ಞಾನಿಯ ತರಹ ಆಗುತ್ತಾನೆ. ಅವನಿಗೆ ಕಾರಂತರು ಕೊಟ್ಟಿರುವ ಹೆಸರು 'ಜಾಣ' ಎಂದು.

ಹಾಗೆ ನೋಡಿದರೆ 'ಕಣ್ಣಿದ್ದೂ ಕಾಣರು' ಕಾದಂಬರಿಯನ್ನು ಬರೆದ ಉದ್ದೇಶವೇ ಫಲಜ್ಯೋತಿಷ್ಯದ ವಿಷಯದಲ್ಲಿ ಜಂಬ ಕೊಚ್ಚಿಕೊಂಡ ತ್ರಿಕಾಲಜ್ಞಾನಿಗಳಂತೆ ಆಡುವವರ ಗರ್ವವನ್ನು ಚುಚ್ಚಲು, ಮತ್ತು ಯಾವ ಅಹಂಕಾರವೂ, ತೋರಿಕೆಯೂ ಇಲ್ಲದೆ ತನಗೆ ಸ್ವಯಂಪ್ರಾಪ್ತವಾಗಿ ಲಭಿಸಿದ ಶಕ್ತಿಯೊಂದನ್ನು ಯಾವ ರೀತಿಯಲ್ಲೂ ದುರುಪಯೋಗಪಡಿಸಿಕೊಳ್ಳದೆ, ಸರಳವಾಗಿ ಬದುಕುವ ಜಾಣನಂತಹವರ ಬದುಕನ್ನು ಚಿತ್ರಿಸಲು, ಮತ್ತು ವೈಚಾರಿಕ ಮನಸ್ಸುಗಳು ಆಲೋಚಿಸುವ ರೀತಿಯನ್ನು ಅನಾವರಣಗೊಳಿಸಲು.

ಕಾದಂಬರಿ ತೊಡಗುವುದೇ 'ಹಂದಿಗೋಣ' ಎಂಬ ಹಂದಿಯೂ ಅಲ್ಲದ ಕೋಣವೂ ಅಲ್ಲದ ವಿಚಿತ್ರವಾದೊಂದು ಹೆಸರಿನ ಊರಿನಿಂದ. ಗೋಕರ್ಣದ ಸಮೀಪದ ಆ ಊರಿಗೆ ಮೂರೂರಿನ ರಾಮಕೃಷ್ಣಯ್ಯನವರ ತಂಗಿಯನ್ನು ಕೊಟ್ಟಿರುತ್ತದೆ. ತಂಗಿಯ ಮಕ್ಕಳ ಉಪನಯನಕ್ಕೆ ರಾಮಕೃಷ್ಣಯ್ಯ ಆ ಊರಿಗೆ ಬಂದಿರುತ್ತಾರೆ. ಉಪನಯನದ ಊಟ ಮುಗಿದು ಎಲ್ಲರೂ ಚಾವಡಿಯಲ್ಲಿ ವಿರಾಮವಾಗಿ ಕುಳಿತಿದ್ದಾಗ, ಗೋಕರ್ಣದ 'ದೇವರು ಹೆಗಡೆ' ಎಂಬ ಹೆಸರಿನ ಮೇಧಾವಿಗೆ ತನ್ನ ಹಸ್ತಸಾಮುದ್ರಿಕ ವಿದ್ಯೆಯಲ್ಲಿನ ಪ್ರಾವೀಣ್ಯವನ್ನು ಪ್ರದರ್ಶಿಸುವ ಚಪಲವಾಗುತ್ತದೆ. ಅಲ್ಲಿ ಆಡುತ್ತಿದ್ದ ಹುಡುಗರಲ್ಲಿ ಒಬ್ಬನನ್ನು ಕರೆದು

ಅವನ ಕೈ ನೋಡಿ ಇಂತಹ ಕೈಯಿ ಈ ಜಗತ್ತಿನಲ್ಲೇ ಇಲ್ಲ ಎಂದು ಘೋಷಿಸಿಬಿಡುತ್ತಾನೆ. ಮೂರೂರು ರಾಮಕೃಷ್ಣಯ್ಯನವರಿಗೆ ಬೇಸರವಾಗುವುದು ದೇವರು ಹೆಗಡೆಯ ಸಾಮುದ್ರಿಕ ಶಾಸ್ತ್ರಕ್ಕಿಂತ ಆ ವ್ಯಕ್ತಿಯ ಗತ್ತು ಮತ್ತು ಅಹಂಕಾರದ ಬಗ್ಗೆ. "ಎಂದೋ ಈ ಹುಡುಗ ಮಹಾರಾಜನಾ ಗುವುದನ್ನು ಕಾದು ಕುಳಿತು ಕಂಡು ಹಿಡಿಯುವರಾದರೂ ಯಾರು? ಈಗ ಯಾವ ಬೊಗಳೆ ಬಿಟ್ಟರೆ ಯಾರು ಕೇಳುತ್ತಾರೆ?" ಎಂದುಕೊಂಡ ರಾಮಕೃಷ್ಣಯ್ಯ ಅಲ್ಲಿಯೇ ಆಡುತ್ತಿದ್ದ ತಮ್ಮ ತಂಗಿಯ ಮಗ ಗಣೇಶನನ್ನು ಕರೆದು ಅವನ ಕೈ ನೋಡಲು ಹೇಳುತ್ತಾರೆ. ಆ ಹುಡುಗ ಕೈ ತೋರಿಸಿದ ರೀತಿ ರಾಮಕೃಷ್ಣಯ್ಯನವರ ಮಾತಿನ ಧಾಟಿ ಎರಡೂ ದೇವರು ಹೆಗಡೆಗೆ ಒಂದು ರೀತಿಯ ಸವಾಲಿನಂತೆ ಭಾಸವಾಗಿ, ತಾತ್ಸಾರವಾಗಿ ಅವನ ಕೈ ನೋಡಿದಂತೆ ನಟಿಸುತ್ತಾ "ಇಂತಹ ಕಳಪೆಯ ಕೈ ತಮ್ಮ ಜೀವಮಾನದಲ್ಲಿಯೇ ನೋಡಿಲ್ಲ, ಇಂತಹ ಭವಿಷ್ಯವಿಲ್ಲದ ಕೈಯನ್ನು ನೋಡಲೂ ಬಾರದು" ಎನ್ನುವ ಧಾಟಿಯಲ್ಲಿ ಮಾತಾಡಿಬಿಡುತ್ತಾನೆ. ಇಲ್ಲಿಗೆ ಇಂದ್ರನ ಸಭೆಯ ವಸಿಷ್ಠ ವಿಶ್ವಾಮಿತ್ರರ ವಾಗ್ವಾದದ ತರಹ ಆದ ದೇವರು ಹೆಗಡೆ, ರಾಮಕೃಷ್ಣಯ್ಯ ಇವರ ವಾದದಿಂದ ರಾಮಕೃಷ್ಣಯ್ಯನವರಲ್ಲಿ ಹಠದ ಬೀಜವೊಂದನ್ನು ಬೆಳೆದು, ತಂಗಿಯ ಮಗನ ಜೀವನವನ್ನು ಅಭಿವೃದ್ಧಿಗೊಳಿಸಲೇ ಬೇಕು ಎಂಬ ಹಠಕ್ಕೆ ಬಿದ್ದು, ಅವನನ್ನು ತಮ್ಮ ಊರಿಗೇ ಕರೆದುಕೊಂಡು ಹೋಗಿ ಶಾಲೆಗೆ ಸೇರಿಸುತ್ತಾರೆ. ತಂಗಿಗೆ ಬಹಳ ಮಕ್ಕಳಿದ್ದುದರಿಂದ ಅವಳು ಅಣ್ಣನ ಇಷ್ಟದಂತೆ ಅವನ ಊರಿಗೆ ಮಗನನ್ನು ಕಳುಹಿಸುತ್ತಾಳೆ. ಮುಂದೆ ರಾಮಕೃಷ್ಣಯ್ಯನವರು ತಮ್ಮ ಹೆತ್ತ ಮಕ್ಕಳಿಗಿಂತಲೂ ಈ ತಂಗಿಯ ಮಗನ ಶ್ರೇಯಸ್ಸಿಗೆ ಶ್ರಮಿಸುತ್ತಾರೆ.

ಗಣೇಶ ಅಲ್ಪ ತೃಪ್ತನಾದ ಹುಡುಗ ಅಲ್ಲ, ಸೋದರಮಾವನ ಆಸರೆಯಿಂದ ಮಾವನ ಊರಿನ ಶಿಕ್ಷಣ ಮುಗಿದ ಮೇಲೆ ತನ್ನ ಭವಿಷ್ಯವನ್ನು ಅರಸಿ ಹೊರಟು ಹೋಗಿಬಿಡುತ್ತಾನೆ.

*** ***

ಮುಂಬಯಿ ನಗರದಲ್ಲಿ ಕಾಸರಕ ಅವರ ಹೆಸರು ತುಂಬಾ ಪರಿಚಿತವಾದುದು. ಸಾಂಸ್ಕೃತಿಕ ಮತ್ತು ಶೈಕ್ಷಣಿಕ ರಂಗದಲ್ಲಿ ಮುಂಚೂಣಿಯಲ್ಲಿರುವ ಹೆಸರೆಂದರೆ ಕಾಸರಕರೇ. ಅವರ ಪತ್ನಿ ಸುನಾಲಿನಿ ಆಮ್ಲಾಡಿ ಪ್ರಸಿದ್ಧ ಅಧ್ಯಾಪಕಿ; ಅವಳಿರುವ ಮಾಣಿಕ್‌ಚಂದ್ ಮಹಿಳಾ ಪ್ರೌಢಶಾಲೆಯಲ್ಲಿ ಅವಳೇ ಮುಖ್ಯ ಅಧ್ಯಾಪಕಿ. ನಂತರ ಆಕೆ ಪ್ರೊಫೆಸರಳೂ ಆಗುತ್ತಾಳೆ. ಸುನಾಲಿನಿಯವರು ಕೆಲಸ ಮಾಡುವ ಶಿಕ್ಷಣ ಸಂಸ್ಥೆಯಲ್ಲಿ ಅವರ ಪಾತ್ರ ಪ್ರಧಾನವಾದುದು. ಅಲ್ಲಿ ನಡೆಯುವ ಯಾವುದೇ ಕಾರ್ಯಕ್ರಮದಲ್ಲಿ ಸುನಾಲಿನಿಯವರ ಭಾಗವಹಿಸುವಿಕೆ ಇದ್ದೇ ಇರುತ್ತದೆ.

ಸುನಾಲಿನಿಗೆ ಆಮ್ಲಾಡಿ ಎಂಬ ಹೆಸರು ಬಂದುದು ಅವರ ಮೊದಲ ಪತಿ ಗಂಗಾಧರ ಆಮ್ಲಾಡಿಯವರಿಂದ. ಗಂಗಾಧರರು ಹೆಸರಾಂತ ನ್ಯಾಯಾಧೀಶರು. ಆದರೂ ಅಭಿರುಚಿಗಳಲ್ಲಿ ಪತಿ ಪತ್ನಿಯರ ನಡುವೆ ಯಾವುದೋ ಒಂದು ಕಂದಕ ಇಣುಕುತ್ತಲೇ ಇತ್ತು. ಸುನಾಲಿನಿಯ ಸಮೀಪದ ಬಂಧು ಮಂಕಿ ಭವಾನಿ ಶಂಕರನಿಂದಾಗಿ ಪರಿಚಿತನಾಗಿ ಈ ದಂಪತಿಗಳಿಗೆ ಹತ್ತಿರದ ಮಿತ್ರನಾದವನು ಕಾಸರಕ. ಸುನಾಲಿನಿಗೆ ಕಾಸರಕರ ನಡವಳಿಕೆ ನಂಬಿಕಸ್ಥವಾಗಿರುತ್ತದೆ. ಅದರಿಂದಾಗಿಯೇ ಗಂಗಾಧರ ಆಮ್ಲಾಡಿ ಅನಿರೀಕ್ಷಿತವಾಗಿ ಹೃದಯಾಘಾತದಿಂದ ತೀರಿಕೊಂಡಾಗ ಸುನಾಲಿನಿ ತಮ್ಮ ಬಂಧುಗಳಿಗಿಂತ ತಕ್ಷಣ ನೆಚ್ಚಿ ಕರೆಸಿಕೊಂಡದ್ದು ಕಾಸರಕರನ್ನು.

ನಂತರ ಆಸ್ತಿ ಹಣಕಾಸುಗಳ ವಿಷಯದಲ್ಲಿ ಸುನಾಲಿನಿಯವರ ಅಣ್ಣ ದುರಾಲೋಚನೆ

ಗಳನ್ನು ಹೊಂದಿರುವುದು ಸುನಾಲಿನಿಯವರ ಗಮನಕ್ಕೆ ಬರುತ್ತದೆ; ಆಗ ಸುನಾಲಿನಿ ತಮ್ಮ ಆಸರೆಗೆ ನಂಬಿದ್ದ ಕಾಸರಕರನ್ನು, ಅವರನ್ನೇ ತಮ್ಮನ್ನು ಮದುವೆಯಾಗುವಂತೆ ಸೂಚ್ಯವಾಗಿ ಕೇಳಿಕೊಳ್ಳುತ್ತಾರೆ. ವಯಸ್ಸು ನಲವತ್ತರ ಸಮೀಪಕ್ಕೆ ಬಂದಿದ್ದರೂ ಕಾಸರಕರಿಗೆ ಮದುವೆಯ ಬಗ್ಗೆ ಯೋಚಿಸುವಷ್ಟು ವ್ಯವಧಾನವಿರಲಿಲ್ಲ. ಸುನಾಲಿನಿಗೂ ಹೆಚ್ಚು ಕಡಿಮೆ ಅದೇ ಪ್ರಾಯ. ಈಗ ಸುನಾಲಿನಿಯ ಕೋರಿಕೆ ಅವರಿಗೆ ಸೂಕ್ತವೆನಿಸುತ್ತದೆ. ಅಭಿರುಚಿಯ ದೃಷ್ಟಿಯಿಂದ, ತಮಗೆ ಹಿಡಿಸಿದ ಸಂಸ್ಕೃತಿಯ ದೃಷ್ಟಿಯಿಂದ ಕಾಸರಕರು ಸುನಾಲಿನಿಯ ಕೋರಿಕೆಯನ್ನು ಮನ್ನಿಸುತ್ತಾರೆ. ಇದು ಕೆಲವರ ಅಸಮಾಧಾನಕ್ಕೂ ಕಾರಣವಾಗುತ್ತದೆ. ವಯಸ್ಸು, ವಿಧವೆ ಎನ್ನುವುದರ ಜೊತೆಗೆ ಕಾಸರಕರು ಹವ್ಯಕರಾದರೆ ಸುನಾಲಿನಿ ಚಿತ್ರಾಪುರದ ಸಾರಸ್ವತರು. ಈ ಕುಲದ ಅಂತರ ಮುಂಬಯಿ ಹವ್ಯಕರಿಗೆ, ಸಾರಸ್ವತರಿಗೆ ಇಬ್ಬರಿಗೂ ಬೇಸರದ ವಿಷಯವಾಗುತ್ತದೆ. 'ಈ ಮನುಷ್ಯನಿಗೆ ನಮ್ಮಲ್ಲೇ ಕನ್ಯೆ ದೊರಕುವುದು ಕಷ್ಟವಾಗುತ್ತಿರಲಿಲ್ಲ' ಎಂಬ ಮಾತುಗಳೂ ಕೇಳಿಬರುತ್ತವೆ. ಆದರೆ ಬೌದ್ಧಿಕವಾಗಿ ಸುನಾಲಿನಿ, ಕಾಸರಕರ ದಾಂಪತ್ಯಜೀವನ ಪ್ರೌಢವಾಗಿರುತ್ತದೆ.

ಸುನಾಲಿನಿ ಪ್ರಾಧ್ಯಾಪಕಿಯಾಗಿರುವ ಶಿಕ್ಷಣ ಸಂಸ್ಥೆ ಹೆಸರುವಾಸಿಯಾದುದಾಗಿರುತ್ತದೆ. ದೇಶದ ಪ್ರಮುಖರು ಅಲ್ಲಿಗೆ ಅತಿಥಿಗಳಾಗಿ ಬಂದು ಅಲ್ಲಿ ವಿಮರ್ಶೆ ಚರ್ಚಾಕೂಟ ಮುಂತಾದವು ಜರುಗುತ್ತಲೇ ಇರುತ್ತವೆ. ಒಂದು ಸಾರಿ ಸುನಾಲಿನಿ ಕಾಸರಕರು ಮುಂಬೈನ ಕೆಲವು ಗಣ್ಯರೊಡನೆ ಒಂದು ಬೌದ್ಧಿಕ ಪ್ರವಾಸ ಕೈಗೊಳ್ಳಬೇಕಾಗುತ್ತದೆ. ಅವರಲ್ಲಿ ನಿವೃತ್ತರಾದ ರಾಜ್ಯಪಾಲ ನೀಲಕಂಠನ್, ನ್ಯಾಯಮೂರ್ತಿ ಕಾಗಲ ಮುಂತಾದ ಗಣ್ಯರಿರುತ್ತಾರೆ. ಆ ಪ್ರವಾಸದಲ್ಲಿ ದಕ್ಷಿಣ ಭಾರತದ ಪ್ರಮುಖ ದೇವಾಲಯಗಳು, ಸಾಂಸ್ಕೃತಿಕ ಕೇಂದ್ರಗಳು, ಕೆಲವರು ಪ್ರಸಿದ್ಧರಾದ ಸ್ವಾಮಿಗಳು ಇವರೆಲ್ಲರ ಸಂದರ್ಶನ ಕಾರ್ಯಕ್ರಮವಿರುತ್ತದೆ. ಪ್ರವಾಸಿಗಳ ತಂಡದ ಗಣ್ಯತೆಯನ್ನಾಧರಿಸಿ ಇವರುಗಳನ್ನು ಸ್ವಾಗತಿಸುವ ಏರ್ಪಾಟು ಎಲ್ಲ ಕಡೆ ನಡೆದಿರುತ್ತದೆ. ಅದರಲ್ಲಿ ಹೊಸಪೇಟೆಯ ಬಳಿಯ ಪಂಪಾಶ್ರಮದ ಅಲಕ್ಷಾನಂದ ಸ್ವಾಮಿಯವರ ಸಂದರ್ಶನ ಪ್ರಮುಖವಾದುದು. ಸರ್ವಸಂಗ ಪರಿತ್ಯಾಗಿಗಳಾದ ಅಲಕ್ಷಾನಂದ ಸ್ವಾಮಿಗಳವರ ಆಶ್ರಮದಲ್ಲಿ ಮುಂಬೈನ ಈ ಗಣ್ಯರಿಗೆ ಉಚಿತವಾದ ಸ್ವಾಗತದ ಏರ್ಪಾಡುಗಳು ನಡೆಯುತ್ತವೆ. ಅಲಕ್ಷಾನಂದ ಸ್ವಾಮೀಜಿಯವರ ಲೋಕನಿರಪೇಕ್ಷಕ ಸರ್ವಜೀವ ಸಮಭಾವ ಬೋಧನಾ ಕಾರ್ಯಕ್ರಮಗಳು ಅಮೋಘವಾಗಿ ಜರುಗುತ್ತವೆ. ಅವರ ಪ್ರಭಾವಯುತ ಉಪನ್ಯಾಸಗಳಿಗೆ ಮಾರು ಹೋಗದವರಿಲ್ಲ.

ಕಾಸರಕರಿಗೆ ಅಲಕ್ಷಾನಂದರ ವ್ಯಕ್ತಿತ್ವ ಜನ ಭಾವಿಸಿರುವಷ್ಟು ಅಥವಾ ತಿಳಿದಿರುವಷ್ಟು ತೀರಾ ವಿಭಿನ್ನ ಎನಿಸುವುದಿಲ್ಲ; ಅವರೂ ಸಹ ಎಲ್ಲ ಮಾನವರ ರೀತಿಯ ದೌರ್ಬಲ್ಯದ ಮೊತ್ತವಾಗಿ ಕಾಣಿಸುತ್ತಾರೆ. ಆದರೆ ವಿಚಿತ್ರವೆಂದರೆ ನಿವೃತ್ತ ರಾಜ್ಯಪಾಲರಾಗಲೀ, ನ್ಯಾಯಮೂರ್ತಿ ಕಾಗಲರಾಗಲೀ ಸಂತರ ವಿಚಾರದಲ್ಲಿ ಸಾಮಾನ್ಯರಿಗಿಂತ ಪ್ರಬುದ್ಧರಾಗಿ ಯೇನೂ ವರ್ತಿಸುವುದಿಲ್ಲ; ವ್ಯಕ್ತಿ ಸಾಮಾನ್ಯನೇ ಆಗಿರಲಿ, ಉನ್ನತ ಹುದ್ದೆ ಪಡೆದವನೇ ಆಗಿರಲಿ ಅವನ ವಿಚಾರವಂತಿಕೆಗೂ ಅವನ ಹುದ್ದೆಗೂ ಯಾವುದೇ ಸಂಬಂಧ ಇರುವುದಿಲ್ಲ ಎಂಬ ಸತ್ಯ ಮಾತ್ರ ಕಾಗಲರ ಅರಿವಿಗೆ ಬರುತ್ತದೆ.

*** ***

ಮೂರೂರು ರಾಮಕೃಷ್ಣಯ್ಯನವರಿಗೆ ಬಹಳ ಕಾಲ ತಮ್ಮ ಸೋದರಳಿಯ ಗಣೇಶ ಏನಾದ ಎಂಬ ಬಗ್ಗೆ ಮಾಹಿತಿಯೇ ಇರುವುದಿಲ್ಲ. ಗಣೇಶ ತನ್ನ ಮದುವೆಯ ಲಗ್ನಪತ್ರಿಕೆ

ಯನ್ನು ಕಳಿಸಿದ್ದನಾದರೂ ಅದು ಆಂಗ್ಲ ಭಾಷೆಯಲ್ಲಿದ್ದುದರಿಂದ ಯಾರಿಂದಾದರೂ ಓದಿಸಬೇಕೆಂದು ತೆಗೆದಿರಿಸಿದುದು ಮರತೇ ಹೋಗಿರುತ್ತದೆ. ಹೀಗಾಗಿ ಅವನ ಮದುವೆಯ ವಿಷಯವೂ ಅವರಿಗೆ ತಿಳಿಯದು. ಬಹಳ ದಿವಸಗಳ ನಂತರ ಅವನ ವಿಷಯದಲ್ಲಿ ಅವರಿಗೆ ತಲುಪಿದ ವಾರ್ತೆಗಳು ಅವರ ಪಾಲಿಗೆ ಅಂತಹ ಸಂತಸದಾಯಕವೇನೂ ಆಗಿರುವುದಿಲ್ಲ. ನೆಚ್ಚಿದ ಅಳಿಯನ ವಿಷಯದಲ್ಲಿ ಅವರಿಗಾದ ಅಸಮಾಧಾನದಿಂದ ಮನಸ್ಸಿನಲ್ಲಿ ಉಂಟಾದ ಕರಕರೆಯನ್ನು ಮರೆಯಲು, ಎಲ್ಲೆಲ್ಲೋ ತಿರುಗಾಡಿಕೊಂಡು ಬರಲು ಅವರು ಹೋಗುತ್ತಾರೆ.

ಭಟ್ಕಳ ಕರೂರುಗಳ ಮಧ್ಯೆ ಎಂಥದೋ ಹಳ್ಳದ ಬದಿಯಲ್ಲಿ, ಹಾಡುವಳ್ಳಿ ಎಂಬ ಗ್ರಾಮದ ಬಳಿಯ ಕಾಡಿನಲ್ಲಿ ಒಬ್ಬ ಸಾಧು ಇದ್ದಾನೆ, ಅವನು ತೀರಾ ಅತೀಂದ್ರಿಯ ಶಕ್ತಿ ಉಳ್ಳವನು, ಎಂಬ ಸುದ್ದಿ ಜನರ ಬಾಯಲ್ಲಿ ಹರಿದಾಡುತ್ತಿರುತ್ತದೆ. ಅವನೂ ಸಹ ಅಲ್ಲಿನ ಸಾಮಾನ್ಯರಲ್ಲಿಯೇ ಒಬ್ಬನಾಗಿದ್ದವನು, ಹುಲ್ಲು ಹೊದೆಸಲು ಮನೆಯ ಮಾಡನ್ನೇರಿ ಅಲ್ಲಿಂದ ಜಾರಿ ಬಿದ್ದು, ವಾರಗಟ್ಟಲೆ ಸ್ಮೃತಿ ತಪ್ಪಿ ಎಚ್ಚರವಾದ ನಂತರ ಲೋಕದ ವ್ಯಾಪಾರಗಳಿಗೆ ಗಮನ ಕೊಡದ ಸಂತನಂತೆ ಬದುಕತೊಡಗಿದವನು. ಅವನ ಬಾಯಲ್ಲಿ ಬರುವ ಯಾವ ಮಾತೂ ಸುಳ್ಳಾಗುವುದಿಲ್ಲ ಎಂಬ ಪ್ರತೀತಿ ಹಬ್ಬಿರುತ್ತದೆ. ರಾಮಕೃಷ್ಣಯ್ಯ ನವರು ನಾಭಿರಾಜಯ್ಯ ಎಂಬ ಗೃಹಸ್ಥರೊಡನೆ ಕಲೆತು ಅವನನ್ನು ಭೇಟಿ ಮಾಡುತ್ತಾರೆ. ಭೇಟಿ ಸುಲಭವೇನೂ ಆಗಿರುವುದಿಲ್ಲ. ಕಾರಣ ಆ ಸಂತನಿಗೆ ಯಾರನ್ನೂ ಭೇಟಿಯಾಗಲೇ ಬೇಕೆಂಬ ಉತ್ಸುಕತೆಯೇನೂ ಇರುವುದಿಲ್ಲ. ಅದೃಷ್ಟವಶಾತ್ ಅವನ ಭೇಟಿ ದೊರಕುತ್ತದೆ. ಹೆಚ್ಚು ಮಾತಾಡದ ಆತ ಎಷ್ಟು ಬೇಕೋ ಅಷ್ಟೇ ಮಾತಾಡುತ್ತಿರುತ್ತಾನೆ.

ರಾಮಕೃಷ್ಣಯ್ಯ ತಮ್ಮ ಮನಸ್ಸಿನ ಸಮಾಧಾನಕ್ಕೆ ತಮ್ಮ ಅಳಿಯನ ಸ್ಥಿತಿ ಗತಿಗಳ ಬಗ್ಗೆ ಮಾತಾಡುತ್ತಾರೆ: ಮನೆಯ ಮುಂದಣ ದೊಡ್ಡ ಕಾಸರಕನ ಮರದಿಂದಾಗಿ ಮುಂಬಯಿಯಲ್ಲಿ ಕಾಸರಕನೆಂದು ಪ್ರಸಿದ್ಧನಾದ ತಮ್ಮ ಅಳಿಯ ಗಣೇಶನ ಮೇಲಣ ಅಸಮಾಧಾನವನ್ನು ಹಾಡುವಳ್ಳಿಯ ಜಾಣನೆಂಬ ಸಂತನೆದುರು ನಾಭಿರಾಜಯ್ಯನವರ ಸಮಕ್ಷಮದಲ್ಲಿ ರಾಮಕೃಷ್ಣಯ್ಯನವರು, ಅವನು ಚಿತ್ರಾಪುರದ ಸಾರಸ್ವತರ ಹೆಣ್ಣೊಂದನ್ನು, ಅದೂ ವಿಧವೆಯನ್ನು ಮದುವೆಯಾದ ಬಗ್ಗೆ ಬೇಸರ ತೋಡಿಕೊಂಡಾಗ, ಜಾಣನ ನಿರುದ್ದೇಶ ಪೂರ್ವಕವಾಗಿ ಬಂದ ಮಾತುಗಳು ಹೊಸ ಬೆಳಕನ್ನೇ ತೆರೆಯುತ್ತವೆ. ಗಂಡು ಮರುಮದುವೆ ಆಗಬಹುದಾದರೆ; ಹೆಣ್ಣು ಏಕೆ ಅನರ್ಹಳು? ಎಂಬ ಪ್ರಶ್ನೆಯಾಗಲೀ, ಲೋಕದಲ್ಲಿ ಹವ್ಯಕರು ಸಾರಸ್ವತರು ಇವರೆಲ್ಲ ಎಷ್ಟು ಜನ ಇದ್ದಾರು? ಕನ್ನಡ ಜಿಲ್ಲೆಗಳಿಗೆ ಸೀಮಿತರಾದ ಈ ಜನಾಂಗಗಳು ವೇದಕಾಲದಲ್ಲಿಯೂ ಇದ್ದವೇ? ಇತ್ಯಾದಿ ವ್ಯಾಪಕ ಪ್ರಶ್ನೆಗಳಿಂದ ತಬ್ಬಿಬ್ಬುಗೊಂಡ ರಾಮಕೃಷ್ಣಯ್ಯನವರಿಗೆ ಜಾಣ "ಯಾರ ವಿಷಯವಾಗಿ ತಲೆ ಕೆಡಿಸಿಕೊಂಡು ನೀವಿಲ್ಲಿಗೆ ಬಂದಿದ್ದೀರೋ ಅದೇ ದಂಪತಿಗಳು ಈಗ ನಿಮ್ಮ ಊರಲ್ಲಿ ನಿಮ್ಮ ಮನೆಯ ಮುಂದುಗಡೆಯೇ ನಿಂತು ಮಾತನಾಡುತ್ತಿರುವುದು ನನ್ನ ದೃಷ್ಟಿಗೆ ಕಾಣುತ್ತಿದೆ! ಇಬ್ಬರಿಗೂ ಸಮ ಪ್ರಾಯ, ಆ ಗಂಡಸಿನ ಆಕಾರ ಬಣ್ಣ ಇವರ ಹಾಗಿನದೇ; ಆ ಹೆಂಗಸು ಮಾತ್ರ ಬೆಳ್ಳಂಬೆಳ್ಳಗೆ ಇದ್ದಾಳೆ. ಅವಳು ನಮ್ಮ ಹಳ್ಳಿಯ ನಮೂನೆಯವಳಲ್ಲ" ಎನ್ನುತ್ತಾನೆ.

ಈ ಮಾತನ್ನು ಕೇಳಿ ಬೆಚ್ಚಿ ಬಿದ್ದ ರಾಮಕೃಷ್ಣಯ್ಯ, ಇಪ್ಪತ್ತೈದು ವರ್ಷಗಳ ಹಿಂದೆ ಮುಂಬೈ ಸೇರಿದ ತಮ್ಮ ಅಳಿಯ ತಾನು ಕೈಹಿಡಿದವಳೊಂದಿಗೆ ತಮ್ಮ ಮನೆಯ ಮುಂದೆ ಬಂದು ನಿಂತಿರುವುದು ಕಲ್ಪಿಸಿಕೊಳ್ಳಲೂ ಆಗದಂತಹ ಸನ್ನಿವೇಶವೆನಿಸಿ ದಿಗ್ಭ್ರಾಂತರಾಗುತ್ತಾರೆ.

✦ ಸಿ. ಸೋಮಶೇಖರಯ್ಯ, 'ಅರಿವು', ಸೊಸಾಯಿಟಿ ಹಿಂಭಾಗ, ಚೋಳಗುಡ್ಡ, ಚಿತ್ರದುರ್ಗ- ೧ ✦

ಷ. ಶೆಟ್ಟರ್ ಅವರ
'ಶಂಗಂ ತಮಿಳಗಂ ಮತ್ತು ಕನ್ನಡ ನಾಡು-ನುಡಿ'

ಸಿ. ನಾಗಭೂಷಣ

ಬೆಂಗಳೂರಿನ ಅಭಿನವ ಪ್ರಕಾಶನದ ನೂರನೆಯ ಹೆಮ್ಮೆಯ ಪ್ರಕಟಣೆಯಾಗಿ ಪ್ರೊ. ಷ. ಶೆಟ್ಟರ್ ಅವರ 'ಶಂಗಂ ತಮಿಳಗಂ ಮತ್ತು ಕನ್ನಡ ನಾಡು-ನುಡಿ' ಪುಸ್ತಕ ನಾಡಿನ ಸಾರಸ್ವತ ಲೋಕಕ್ಕೆ ಲೋಕಾರ್ಪಣೆಗೊಂಡಿದೆ. ಅಂತರ್‍ರಾಷ್ಟ್ರೀಯ ಖ್ಯಾತಿಯ ಇತಿಹಾಸತಜ್ಞರಾದ ಷ. ಶೆಟ್ಟರ್‌ರವರೂ ಈ ಮಹತ್ವದ ಕೃತಿ ರಚನೆಯ ಮೂಲಕ ಪ್ರಮುಖ ದೇಸಿ ಸಂಸ್ಕೃತಿಯ ಚಿಂತಕರಾಗಿ ನಮ್ಮ ಗಮನಕ್ಕೆ ಬಂದಿದ್ದಾರೆ. ಪ್ರೊ. ಶೆಟ್ಟರ್ ಅವರಿಗೆ ಕನ್ನಡ ನಾಡು-ನುಡಿಗಳ ಕುರಿತ ಚಿಂತನೆಯು ಈಗಾಗಲೇ ತೀರ್ಮಾನವಾಗಿರುವ ವಿಷಯಗಳಲ್ಲ, ಬದಲಾಗಿ ಅವು ಅನ್ವೇಷಣೆ, ಆಲೋಚನೆ ಮತ್ತು ಅನುಸಂಧಾನಗಳ ಮುಂದಿರುವ ಸವಾಲುಗಳಾಗಿದ್ದು ಅವುಗಳ ಒಳನೋಟಗಳನ್ನು ಈ ಕೃತಿಯು ನೀಡಿದ್ದು ಜಿಜ್ಞಾಸೆಗೆ ಆಸಕ್ತ ಓದುಗರನ್ನು ಅಯಸ್ಕಾಂತದಂತೆ ಸೆಳೆದಿದೆ.

ಷ. ಶೆಟ್ಟರ್ ಅವರ ಈ ಪುಸ್ತಕ ಕನ್ನಡ ನಾಡಿನ ಮೌರ್ಯ ದೊರೆ ಅಶೋಕನಿಂದ ಹಿಡಿದು ಬನವಾಸಿಕದಂಬಪೂರ್ವದನಡುವಿನ ಕಂದರದ, ಇದುವರೆಗೂ ಗುರುತಿಸಲಾಗದಿದ್ದ ಕನ್ನಡ ನಾಡು ನುಡಿಯ ಇತಿಹಾಸ ಸಂಸ್ಕೃತಿಯನ್ನು ಸೋದರ ಭಾಷೆ ತಮಿಳು ಭಾಷೆಯ ದೇಶೀ ಸಾಹಿತ್ಯದ ಆಕರಗಳ ಹಿನ್ನೆಲೆಯಲ್ಲಿ ಶೋಧಿಸಿದೆ. ಈ ಪುಸ್ತಕದ ಮೊದಲ ಐದು ಅಧ್ಯಾಯಗಳಾದ ೧. ತೊಲ್ಕಾಪ್ಪಿಯನಾರ್ ಮತ್ತು ಮಾರ್ಗಕಾರನ ಸಂವೇದನೆಯ ಸ್ವರೂಪ ೨. ಆರಂಭ ಕಾಲದ ದ್ರಾವಿಡ ಭಾಷಾ ನಕಾಶೆ ೩. ಕಡಲು ಕುಡಿದ ಭೂಮಿಯ ನಕಾಶೆ ೪. ದಕ್ಷಿಣ ಭಾರತ ಜೆಸೆದ ಬ್ರಾಹ್ಮೀ ಲಿಪಿ ೫. ಕಾವೇರಿ : ಮಾರ್ಗಕಾರನು ಕನ್ನಡದೊಳ್ ಭಾವಿಸಿದ ಜನಪದದ ದಕ್ಷಿಣದಂಚಿನ ಚಾರಿತ್ರಿಕ ಹಿನ್ನೆಲೆ- ಈ ಅಧ್ಯಾಯಗಳಲ್ಲಿ ವಿವರಗಳು ತಮಿಳು ಸಾಹಿತ್ಯ, ಭಾಷೆ ಹಾಗೂ ಇತಿಹಾಸಕ್ಕೆ ಹೆಚ್ಚಾಗಿ ಸಂಬಂಧಿಸಿದವುಗಳಾಗಿವೆ. ಇವುಗಳ ವಿಸ್ತೃತ ಅಧ್ಯಯನ, ಶೋಧನೆಯ ಮೂಲಕವೇ ನಂತರದ ಅಧ್ಯಾಯಗಳಲ್ಲಿ ಕನ್ನಡ ನಾಡಿನ ಆರಂಭಕಾಲದ ನಾಡುನುಡಿಯ ಇತಿಹಾಸದ ಕಂದಕಗಳನ್ನು ತುಂಬಿಕೊಟ್ಟಿದ್ದಾರೆ. ಪಕ್ಕದ ತಮಿಳು ಸಾಹಿತ್ಯ ಸಂಸ್ಕೃತಿ ಇತಿಹಾಸ ಪರಂಪರೆಯನ್ನು ಕನ್ನಡದಲ್ಲಿ ಈ ಕೃತಿಯು ಗುರುತಿಸುವುದರ ಜೊತೆಗೆ ಕನ್ನಡ ನಾಡಿನ ಪರಂಪರೆಯನ್ನು ಅರಿತುಕೊಳ್ಳುವ ಪ್ರಯತ್ನ ಮಾಡಿದೆ.

ಇವರು ಕೃತಿಯನ್ನು ತಮಿಳಿನ (ತೊಲ್ಕಾಪ್ಪಿಯಮ್) ಮತ್ತು ಕನ್ನಡದ (ಕವಿರಾಜ ಮಾರ್ಗ) ಭಾಷೆಗಳಲ್ಲಿ ಪ್ರಥಮಗಳೆನಿಸಿದ ಕಾವ್ಯಗಳನ್ನು ಪರಿಚಯಿಸಿ, ತಮಿಳರನ್ನೂ ಕನ್ನಡಿಗರನ್ನೂ ಭಾಷಾ ಆವೇಶಕ್ಕೆ ತಳ್ಳಿದ ಗಡಿರೇಖೆಯ ಚರ್ಚೆಯಿಂದ ಪ್ರಾರಂಭಿಸಿದ್ದಾರೆ. ದ್ರಾವಿಡ ಸಂಬಂಧವನ್ನು ಈ ಎರಡೂ ಪ್ರಥಮಗಳ (?) ಸಾಹಿತ್ಯಕ ಸ್ವರೂಪವನ್ನು ಇವುಗಳ ಭಾಷೆ ಮತ್ತು ಸಾಹಿತ್ಯ ಸಂಸ್ಕೃತೀಕರಣಕ್ಕೊಳಗಾದ ಪ್ರಕ್ರಿಯೆಯನ್ನೂ, ಭಾಷಾಪ್ರಜ್ಞೆ ಮತ್ತು ನಕಾಶೆ ನಿರ್ದೇಶನದಂತಹ ಪ್ರಶ್ನೆಗಳನ್ನೂ ಕೈಗೆತ್ತಿಕೊಂಡು ಅವುಗಳ ವಿವಿಧ ಮಗ್ಗಲುಗಳನ್ನು ಈ ಪುಸ್ತಕದುದ್ದಕ್ಕೂ ಚರ್ಚಿಸಿದ್ದಾರೆ.

ಕವಿರಾಜಮಾರ್ಗವನ್ನು ಕುರಿತ ಇಲ್ಲಿಯ ವರೆಗಿನ ಒಂದು ಶತಮಾನದ ಇತಿಹಾಸವು

ಬಹುಮಟ್ಟಿಗೆ ಕವಿರಾಜಮಾರ್ಗದ ಕರ್ತೃ ಯಾರು? ಅವನ ಕುಲ ಜಾತಿ ಮತಗಳಾವುವು. ಅವರು ಸಂಸ್ಕೃತ ಲಕ್ಷಣಕಾರರಿಂದ ಎಷ್ಟೆಷ್ಟು ಎರವಲು ಪಡೆದು ಹೇಗೆ ಅವನ್ನು ಅಳವಡಿಸಿಕೊಂಡರು ಎಂಬುದೇ ಆಗಿದೆ. ಜೊತೆಗೆ ಈ ಲಕ್ಷಣ ಗ್ರಂಥವು ಸಂಸ್ಕೃತ ಸಾಹಿತ್ಯ ಹಾಗೂ ಕಾವ್ಯಮೀಮಾಂಸೆಯ ತಿಳಿವಳಿಕೆಯಿಂದ ರಚಿತವಾದ ಕೃತಿ ಎಂಬ ಗ್ರಹಿಕೆಯಲ್ಲಿ ಕನ್ನಡ ಸಾಹಿತ್ಯದ ಮೊದಲ ಕಾಲ ದಟ್ಟವಾದ ಸಂಸ್ಕೃತದ ಪ್ರಭಾವಕ್ಕೆ ಒಳಗಾದ ಕಾಲವಾಗಿತ್ತೆಂಬುದು ಸ್ಪಷ್ಟವಾಗಿರುತ್ತದೆ ಎಂಬ ನಿರ್ಣಯ ಮಾಡಲಾಗಿತ್ತು. ಆದರೆ ಈ ಪುಸ್ತಕದಲ್ಲಿ ಬೇರಾರೂ ಚಿಂತಿಸದ ಹೊಸ ಪ್ರಶ್ನೆ **ಕವಿರಾಜಮಾರ್ಗದ ದ್ರಾವಿಡ ಬೇರುಗಳಾವುವು** ಎಂಬ ಪ್ರಶ್ನೆಯನ್ನು ಮುಂದಿರಿಸಿಕೊಂಡು ದಕ್ಷಿಣದ ಇತರ ಪ್ರಾಂತೀಯ ಭಾಷೆಗಳಲ್ಲಿ ಬೆಳೆದಿರುವಂತಹ ಸಾಹಿತ್ಯದ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿದ ಮೊದಲ ಹಾಗೂ ಏಕಮೇವ ಕೃತಿಯಾಗಿದೆ. ಕ್ರಿ. ಶ. ೧ ರಿಂದ ೫ ನೇ ಶತಮಾನದ ತಮಿಳು ಸಾಹಿತ್ಯವಾದ ೧. ಆರಂಭ ಕಾಲದ ತೊಲ್ಕಾಪ್ಪಿಯಂ ಒಳಗೊಂಡ ತಮಿಳು ಸಾಹಿತ್ಯ ೨. ನಂತರ ಕಾಲದ ಶಂಗಂ ಸಂಕಲನದ ತಮಿಳು ಸಾಹಿತ್ಯ ೩. ಅನಂತರದ ಶಿಲಪ್ಪದಿಗಾರ ಮತ್ತು ಮಣಿಮೇಗಲೈ ಎಂಬ ಮಹಾಕಾವ್ಯಗಳ ಅಧ್ಯಯನದ ಮೂಲಕ ಕನ್ನಡ ನಾಡಿನ ಆರಂಭ ಕಾಲದ ಕನ್ನಡ ನಾಡಿನ ಬಗ್ಗೆ ಮತ್ತು ಕನ್ನಡಿಗರ ಬಗೆಗೆ ಸ್ಪಷ್ಟವಾದ ರೇಖೆಯನ್ನು ಪುಸ್ತಕದುದ್ದಕ್ಕೂ ಕಾಣಬಹುದಾಗಿದೆ.

ಕನ್ನಡ ಸಾಹಿತ್ಯ ಸಂಸ್ಕೃತಿಗಳು ಪ್ರಾರಂಭವಾದ ಬಗೆಗಿನ ವಿದ್ವತ್ ವಲಯದಲ್ಲಿಯ ಅನಿಸಿಕೆಯಾದ ಆರಂಭಿಕ ಸಹಸ್ರಮಾನವನ್ನು ಸಂಸ್ಕೃತಯುಗವೆನ್ನುವುದಕ್ಕೆ ಬಹು ದೊಡ್ಡ ಅಪವಾದವೆನ್ನಿಸಬಹುದಾದ ಪ್ರಾಚೀನ ತಮಿಳು ಪರಂಪರೆಯನ್ನು ಆಕರಗಳ ಮೂಲಕ ಈ ಕೃತಿಯಲ್ಲಿ ತೆರೆದಿಟ್ಟಿದ್ದಾರೆ. ಶಂಗಂ ಕಾವ್ಯದ ಭಿತ್ತಿಯಾಗಿರುವ ತಮಿಳಗಂ ಎಂಬ ಪ್ರದೇಶ ಪ್ರಧಾನತಃ ಸಾಂಸ್ಕೃತಿಕ, ಆನುಷಂಗಿಕವಾಗಿ ಮಾತ್ರ ರಾಜಕೀಯ ವಲಯವಾಗಿತ್ತು. ಇಲ್ಲಿ ಮೂವೇಂದ್ರರಾದ ಪಾಂಡ್ಯ, ಚೋಳ, ಚೇರರ ಪ್ರಭಾವ ಪ್ರಧಾನವಾಗಿತ್ತು. ಆದರೆ ಇವರನ್ನು ನಿಲ್ಲಿಸುವ ಮತ್ತು ನೆಲಕ್ಕುರುಳಿಸುವ ಸೂತ್ರಗಳು ನೂರಾರು ಚಿರ್‌ಸರ ಕೈಯಲ್ಲಿದ್ದವು. ಶೆಟ್ಟರ್ ಅವರ ಪ್ರಕಾರ ದೊಡ್ಡ ದೊಡ್ಡ ರಾಜರಿಗಿಂತಲೂ ಸಣ್ಣಪುಟ್ಟ ನಾಯಕರು ಸಾಹಿತ್ಯ ಸಾಮ್ರಾಜ್ಯ ನಿರ್ಮಾಣಕ್ಕೆ ಇತ್ತ ಕೊಡುಗೆಯ ಮಹತ್ವದ ಬಗೆಗೆ ಅಲ್ಲದೆ ತಮಿಳಗಂ ಭಾಷೆ ಗಡಿ ಒಳಗಿನ ವ್ಯವಹಾರವಾಗಿ ಮಾತ್ರ ಉಳಿಯಲಿಲ್ಲವೆಂಬುದನ್ನು, ಮತ್ತು ಕನ್ನಡವನ್ನು ಒಳಗೊಂಡ ತಮಿಳೇತರ 'ವಡುಗ' ಜನಾಂಗಗಳು ಶಂಗಂ ಕಾವ್ಯಕ್ಕೆ ನೀಡಿದ ಕೊಡುಗೆಗಳು ಇತ್ಯಾದಿಗಳ ವಿಸ್ತೃತ ಚರ್ಚೆ ಈ ಪುಸ್ತಕದುದ್ದಕ್ಕೂ ಅಂತರ್ಗತಗೊಂಡಿದ್ದು ಕೊನೆಯ ಅಧ್ಯಾಯದಲ್ಲಿ ಫಲಿತಾಂಶವನ್ನು ನೀಡಿದೆ.

ಸಾಂಸ್ಕೃತಿಕ ರಾಜಕೀಯ ರಚನೆ ಮತ್ತು ಪ್ರಕ್ರಿಯೆಗಳ ಅಸಮಾನಾಂತರ ಸಂಬಂಧ ಈ ಪುಸ್ತಕದ ಮುಖ್ಯ ಪ್ರತಿಪಾದನೆಯಾಗಿದೆ. ಸಾಮ್ರಾಜ್ಯ ಶಕ್ತಿ ಸೃಜನಶೀಲತೆ ವಿಷಯದಲ್ಲಿ ನಿರ್ಣಾಯಕ ಪಾತ್ರ ವಹಿಸಲು ಸಾಧ್ಯವಾಗಲಿಲ್ಲ. ಶ್ರೇಷ್ಠ ಕವಿಗಳು ಅಸ್ಥಿರ ರಾಷ್ಟ್ರಗಳಿಂದಲೇ ಬಂದವರು ಎಂಬುದಕ್ಕೆ ಇತಿಹಾಸ ಇದೆ. ಶಂಗಂ ತಮಿಳಗಂ ಇದಕ್ಕಿಂತ ಭಿನ್ನವಾಗಿರಲಿಲ್ಲ ಎಂಬುದನ್ನು ಕೃತಿಕಾರರು ಆಕರಗಳ ಹಿನ್ನೆಲೆಯಲ್ಲಿ ಈ ಕೃತಿಯಲ್ಲಿ ತೋರಿಸಿಕೊಟ್ಟಿದ್ದಾರೆ. ಇವರ ಪ್ರಕಾರ ಪ್ರಾಚೀನ ಕಾಲದಲ್ಲಿ ತಮಿಳು ಎಷ್ಟೇ ಬಲಿಷ್ಠ ಸಾಹಿತ್ಯ ಸಂಸ್ಕೃತಿಯಾಗಿ ವಿಕಾಸಗೊಂಡರೂ ಲಿಪಿಸಂಸ್ಕೃತಿಯಾಗಿ ರೂಪುತಾಳಿದ್ದು ಕನ್ನಡ ತೆಲುಗು ಲಿಪಿಗಳು ಸದೃಢಗೊಂಡ ನಂತರವೇ. 'ತೊಲ್ಕಾಪ್ಪಿಯಂ' ಮತ್ತು 'ಮಾರ್ಗ'ವನ್ನು ಹೋಲಿಸಿ

ನೋಡಿದಾಗ ಒಂದು ಸ್ವತಂತ್ರ ಸಾಹಿತ್ಯ ಸಂಸ್ಕೃತಿ ನಿರ್ಮಾಣದಲ್ಲಿ ಕನ್ನಡಿಗರು 'ತೊಲ್'ಗಿಂತ ಹಿಂದೆ ಬಿದ್ದಿದ್ದರೆಂಬುದು ಸ್ಪಷ್ಟಗೊಳ್ಳುವುದು. ಆದರೆ ಶೆಟ್ಟರ್ ಅವರ ಪ್ರಕಾರ ಲಿಪಿ ಸಂಸ್ಕೃತಿಯಲ್ಲಿ ಕನ್ನಡಿಗರು ತಮಿಳರನ್ನು ಹಿಂದೆ ಹಾಕಿದ್ದರು. ಇದು ಐತಿಹಾಸಿಕ ಅಂಶವಾದರೆ ಬರಹ ಸಂಸ್ಕೃತಿಯ ನಿರ್ಮಾಣ ಸಾಹಿತ್ಯ ಸಂಸ್ಕೃತಿಗೆ ಅನಿವಾರ್ಯ ಎಂಬ ತಿಳಿವಳಿಕೆಯೇ ತಪ್ಪಾಗುತ್ತದೆ. ಲಿಪಿ ಸಂಸ್ಕೃತಿ ರೂಪುಗೊಳ್ಳುವ ಮೊದಲೇ ತಮಿಳಗಂ ಒಂದು ಅಭಿಜಾತ ಕಾವ್ಯವನ್ನೂ ಕಾವ್ಯಮೀಮಾಂಸೆಯನ್ನೂ ಸೃಜಿಸಿಕೊಂಡಿದ್ದುದರಿಂದ ಸಾಹಿತ್ಯದ 'ಮಾರ್ಗ'ಕ್ಕೂ ಲಿಪಿಗೂ ಕಾರ್ಯ ಕಾರಣ ಸಂಬಂಧ ಇದೆ ಎಂಬುದನ್ನು ಪುನರ್ಆಲೋಚನೆಗೆ ಒಳಪಡಿಸಬೇಕಾಗುತ್ತದೆ ಎಂಬ ನಿಲುವನ್ನು ವ್ಯಕ್ತಪಡಿಸಿದ್ದಾರೆ.

ಇಲ್ಲಿಯ ವರೆಗೂ ಕನ್ನಡ ಭಾಷೆ ಮತ್ತು ಸಾಹಿತ್ಯಗಳ ಆಗುಹೋಗುಗಳನ್ನು ಕೇವಲ ಕನ್ನಡದ ಭಿತ್ತಿಯೊಂದರಲ್ಲಿಯೇ ನೋಡಲಾಗಿತ್ತು. ಮಾರ್ಗಕಾರ ಅಭಿವೃದ್ಧಿಶೀಲ ಕನ್ನಡ ನಾಡು-ನುಡಿಗಳ ವೈಶಿಷ್ಟ್ಯವನ್ನು ಬಿಟ್ಟುಕೊಡದೆ ಈಗಾಗಲೇ ಅಭಿವೃದ್ಧಿಗೊಂಡಿರುವ ಸಂಸ್ಕೃತದ ಜೊತೆಗೆ ಕೀಳರಿಮೆಯಿರದ ಮುಖಾಮುಖಿ ನಡೆಸಿದನೆಂಬ ಕಾರಣಕ್ಕಾಗಿ ವಿದ್ವಾಂಸರಿಂದ ಪ್ರಶಂಸೆ ಪಡೆದಿದ್ದಾನೆ. ಇಡೀ ಕನ್ನಡ ಸಾಹಿತ್ಯ ಪರಂಪರೆಗೆ ಮಾರ್ಗಕಾರ ಬ್ರಹ್ಮನೋಪಾದಿಯಾದರೆ ಮುಂದಿನ ಶತಮಾನಗಳ ಕನ್ನಡ ಸಾಹಿತ್ಯ ಆತನಿಗೆ ಎಷ್ಟು ಋಣಿ ಎಂಬುದನ್ನೂ ಪರೀಕ್ಷಿಸಬೇಕಾಗುತ್ತದೆ. ಈ ಕಡೆಗೆ ಕೃತಿಕಾರರು ನಮ್ಮ ಗಮನ ಹರಿಸಿದ್ದಾರೆ. ಯಾವ ರೀತಿ 'ತೊಲ್ಕಾಪ್ಪಿಯಂ'ನ ಕಾವ್ಯ ಭಾಷೆ-ಬದುಕಿನ ಸಿದ್ಧಾಂತದ ಜೊತೆಗೆ ಶಂಗಂ ಕಾವ್ಯರಾಶಿ ಅವಿನಾಭಾವ ಸಂಬಂಧ ಹೊಂದಿತ್ತೋ ಅದೇ ರೀತಿಯ ಸಂಬಂಧವನ್ನು 'ಕವಿರಾಜಮಾರ್ಗ' ಕನ್ನಡ ಪರಂಪರೆಯೊಂದಿಗೆ ಹೊಂದಿದೆಯೆ ಎಂಬ ಪ್ರಶ್ನೆಯನ್ನು ಅವರು ಎತ್ತಿದ್ದಾರೆ. ಶಂಗಂ ಯುಗ ಮುಗಿದ ನಂತರವೂ 'ತೊಲ್ಕಾಪ್ಪಿಯಂ'ನ ಮರುದನಿಗಳು ಆಳ್ವಾರ್-ನಾಯನ್ಮಾರರ ಭಕ್ತಿ ಕಾವ್ಯದಲ್ಲಿ ಕೇಳಿಸುತ್ತವೆ. ಆಂಡಾಳ್ ತನ್ನ 'ತಿರುಪ್ಪಾವೈ'ಯನ್ನು 'ಶಂಗತ್ತಮಿಳ್' ಬರೆದುದಾಗಿ ಹೇಳಿಕೊಳ್ಳುತ್ತಾಳೆ. 'ತೊಲ್ಕಾಪ್ಪಿಯಂ'ನ ಪ್ರಭಾವಕ್ಕೆ ತಮಿಳಿನಲ್ಲಿ ದೀರ್ಘ ಕಾಲದ ನಿರಂತರತೆ ಇದ್ದುದನ್ನು ಇದು ತೋರಿಸುತ್ತದೆ. ಆದರೆ ಕನ್ನಡದಲ್ಲಿ 'ಕವಿರಾಜಮಾರ್ಗ'ಕ್ಕೆ ಯಾಕೆ ಈ ದೀರ್ಘ ಕಾಲದ ನಿರಂತರತೆ ಇಲ್ಲ ಎಂಬ ಪ್ರಶ್ನೆಯನ್ನು ಮುಂದಿಟ್ಟು ಚಿಂತನೆಗೆ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ.

ಕನ್ನಡ ಸಾಹಿತ್ಯ ಸೃಷ್ಟಿಗೆ ಸಂಸ್ಕೃತದ ಪ್ರಭಾವ ಆ ಸಂದರ್ಭದಲ್ಲಿ ಪ್ರಧಾನವಾದರೂ ಅದೊಂದೇ ನಿರ್ಣಾಯಕವಲ್ಲ. ಜೊತೆಗೆ ತಮಿಳು ಸಾಹಿತ್ಯ ಪರಂಪರೆಗೆ ತನ್ನದೇ ಆದ ಸ್ಥಾನವಿದೆ. 'ತಮಿಳಗಂ'ನ ಮೊದಲ ಅಧ್ಯಾಯದ ಅತ್ಯಂತ ರಸವತ್ತಾದ ಭಾಗದಲ್ಲಿ ಶೆಟ್ಟರ್ ಅವರು ತಮಿಳು ಮತ್ತು ಸಂಸ್ಕೃತ ಕಾವ್ಯ ಧರ್ಮ-ಸ್ವಧರ್ಮಗಳ ತುಲನಾತ್ಮಕ ಚಿತ್ರನೋಟವನ್ನು ನೀಡಿದ್ದಾರೆ. ಈ ಎರಡು ಪರಂಪರೆಗಳ ದೃಷ್ಟಿ ತೀರಾ ವಿಭಿನ್ನ ವೆಂಬುದನ್ನು ತೋರಿಸಿದ್ದಾರೆ. ಪ್ರಾಚೀನ ಭಾರತದಲ್ಲಿ ಈ ಎರಡೂ .ಪರಂಪರೆಗಳು ಸಮಾನಾಂತರವಾಗಿ ಮೀಮಾಂಸೆಗಳಾಚೆಗಿನ ಸಮಾನಾಂತರ ಪರಂಪರೆಗಳೊಂದಿಗೆ ಕೆಲಸ ಮಾಡಿವೆ. ಸಾಹಿತ್ಯ ಕೃತಿಗಳ ಬಗ್ಗೆ ಹೇಳಬಹುದಾದ ಈ ಮಾತನ್ನು ಸಾಹಿತ್ಯ ಪರಂಪರೆಗಳಿಗೂ ಅನ್ವಯಿಸಬಹುದೇನೋ ಎಂಬ ಅಭಿಪ್ರಾಯವನ್ನು ಈ ಕೃತಿಯ ಮುನ್ನುಡಿಯಲ್ಲಿ ಎಚ್.ಎಸ್. ಶಿವಪ್ರಕಾಶರು ವ್ಯಕ್ತಪಡಿಸಿರುವುದು ಆಲೋಚಿಸತಕ್ಕದ್ದಾಗಿದೆ.

ಉದಾಹರಣೆಗೆ : ಕದಂಬರು ಬನವಾಸಿಯಲ್ಲಿ ರಾಜಧಾನಿ ಸ್ಥಾಪಿಸಿ ಆಳತೊಡಗಿದ ನಂತರ ಸಂಸ್ಕೃತ ಪ್ರೇಮಿಗಳಾದ ಕದಂಬ ಮಯೂರವರ್ಮನು ಮಯೂರಶರ್ಮ

ನಾಗುವುದಕ್ಕೆ ಹಲವಾರು ಶತಮಾನಗಳ ಮುಂಚೆ, ಈ ಮನೆತನದವರು ಸಮುದ್ರಪತಿಗಳಾಗಿ ಮೆರೆದ ಶೂದ್ರರಾಗಿದ್ದರು. ಈ ವರೆಗೂ ನಮಗೆ ತಿಳಿಯದಿದ್ದ ಇಂತಹ ಹೊಸ ವಿಷಯಗಳು ಕನ್ನಡ ಭಾಷೆ, ಲಿಪಿ ಮತ್ತು ಜನಾಂಗದ ಪ್ರೌಢಿಮೆಯನ್ನೂ ಪುರಾತನತೆಯನ್ನೂ ಪ್ರತಿಪಾದಿಸಲು ಕನ್ನಡಿಗರಿಗೆ ಸಹಕಾರಿಯಾಗಲಿವೆ. ಈ ವಿಷಯದ ಸಲುವಾಗಿ ಗೋವಿಂದ ಪೈ, ಶಂ. ಬಾ. ಜೋಶಿ ಮುಂತಾದವರನ್ನು ಕಾಡಿದ್ದುದರ ಚಿಂತನೆಗೆ ಶೆಟ್ಟರ್ ಅವರ ಈ ಆಲೋಚನೆಗಳು ಒತ್ತಾಸೆಯಾಗಿ ನಿಲ್ಲುತ್ತವೆ.

'ಕವಿರಾಜಮಾರ್ಗ'ವೂ ಒಂದು ರೂಪಾಂತರವೇ, ಆದರೆ ದೂರದ ದಂಡಿ–ಭಾಮಹರ ಪ್ರೇರಣೆ ಪಡೆದ ಈ 'ಅನುವಾದ' ಯಾಕೆ ತಮಿಳು ಪರಂಪರೆಗೆ ಮಿಡಿಯಲಿಲ್ಲ? 'ಕವಿರಾಜಮಾರ್ಗ'ದ ಮಲಯಾಳಂ ಸಂವಾದಿಕೃತಿ 'ಲಲಿತತಿಲಕಂ' ಅತ್ತ ಸಂಸ್ಕೃತ ಇತ್ತ ತಮಿಳು ಎರಡರಿಂದಲೂ ಪ್ರೇರಿತವಾಗಿದೆ. ಪಾಠಗಳ ಅನುವಾದದಲ್ಲಿ ಮಾತ್ರವಲ್ಲ ಪರಿಕಲ್ಪನೆಗಳ ಅನುವಾದದಲ್ಲೂ ಕನ್ನಡ ಪರಂಪರೆ ಯಾಕೆ ಸಂಸ್ಕೃತದ ಕಡೆ ಮುಖ ಮಾಡಿತು? ಯಾವುದೇ ಮೇರು ಕೃತಿ ಇಡೀ ಎರಡನೆಯ ಸಹಸ್ರಮಾನದಲ್ಲಿ ಯಾಕೆ ಕನ್ನಡಕ್ಕೆ ಬರಲಿಲ್ಲ? ತಮಿಳುನಾಡಿನ ಭಕ್ತಿಯ ಪ್ರಭಾವ ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕಕ್ಕೆ ಹರಿದು ಬಂದಾಗ ಶಿವಭಕ್ತರ ಕತೆಗಳನ್ನು ರಗಳೆ ಮೂಲಕ ಕನ್ನಡಕ್ಕೆ ತಂದವನು ಹರಿಹರನೊಬ್ಬನೆ. ಇನ್ನು ತಮಿಳುನಾಡಿನಲ್ಲೇ ನೂರಾರು ವರ್ಷ ಭೂಗತವಾಗಿದ್ದ ಶಂಗಂ ಕಾವ್ಯವಾಗಲೀ ಕಾವ್ಯಮೀಮಾಂಸೆಯಾಗಲೀ ಕನ್ನಡಕ್ಕೆ ಬರತೊಡಗಿದ್ದ ತಮಿಳುನಾಡಿನಲ್ಲಿ ಅದು ಪುನರ್ಜನ್ಮ ಪಡೆದ ಸುಮಾರು ಒಂದು ನೂರು ವರ್ಷಗಳ ನಂತರ ಅಂದರೆ ತೀರಾ ಇತ್ತೀಚೆಗೆ. ಆಧುನಿಕ ಪೂರ್ವಯುಗದಲ್ಲಿ ಸಂಸ್ಕೃತ–ಪ್ರಾಕೃತಗಳಿಂದ ಆಧುನಿಕ ಯುಗದಲ್ಲಿ ಇಂಗ್ಲಿಷಿನಿಂದ ಕನ್ನಡ ಬೇಕಾದಷ್ಟು ಪಡೆದುಕೊಂಡಿದೆ. ಆದರೆ ನೆರೆಹೊರೆಯ ತಮಿಳಿನಿಂದ ಪಡೆದುಕೊಂಡದ್ದರ ಬಗೆಗೆ ಮಾತ್ರ ಮೊದಲಿಗೆ ಈ ಕೃತಿಯೇ ಬೆಳಕು ಚೆಲ್ಲುತ್ತಿರುವುದು. ಭಾರತೀಯತೆಯ ಬಗ್ಗೆ ಕನ್ನಡದ ಬಗ್ಗೆ ತಮಿಳು–ಕನ್ನಡ ಬಾಂಧವ್ಯದ ಬಗ್ಗೆ ಸಾಹಿತ್ಯ – ಸಂಸ್ಕೃತಿಗಳ ಬಗ್ಗೆ ಹೊಸ ರೀತಿಯ ಚಿಂತನೆ ಮತ್ತು ವಿಶ್ಲೇಷಣೆಗಳನ್ನು ಪ್ರೇರೇಪಿಸುವ ಪ್ರೊ. ಶೆಟ್ಟರ್ ಅವರ ಈ ಅಪೂರ್ವ ಕೃತಿಯು ದೇಸಿ ಸಾಹಿತ್ಯ–ಸಂಸ್ಕೃತಿಯ ಅಧ್ಯಯನಾಸಕ್ತರಿಗೆ ಹೊಸ ಆಯಾಮವನ್ನು ಕಲ್ಪಿಸಿದೆ.

ಪ್ರೊ. ಶೆಟ್ಟರ್ ಅವರ ಈ ಪುಸ್ತಕ ಭಾಷೆ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಬಹು ಮುಖ್ಯವಾದ ವಾಗ್ವಾದಗಳನ್ನು ನಮ್ಮ ಮುಂದಿಟ್ಟಿದೆ. ತಮಿಳಿಗಿಂತ ಮೊದಲೇ ಲಿಪಿಯನ್ನು ಕನ್ನಡ ರೂಢಿಸಿಕೊಂಡಿತ್ತೆಂಬುದು ಇಲ್ಲಿಯ ಮೊಟ್ಟ ಮೊದಲ ಆಧಾರಸಹಿತ ದಾಖಲೆ. ಅಪ್ಪಟ ದ್ರಾವಿಡ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಶಂಗಂ ಸಾಹಿತ್ಯಕ್ಕೆ ಕರ್ನಾಟಕದ ಹಲವು ಕವಿಗಳ ಪಾಲಿರುವುದನ್ನು ಹೆಕ್ಕಿ ತೆಗೆದಿರುವುದು ಎರಡನೆಯದು. ಈ ಹಿನ್ನೆಲೆಯಲ್ಲಿ ಅವರು ಹಲವು ಉಪಕ್ರಮಗಳ ಮೂಲಕ ಭಾಷೆ ರಾಜಕೀಯ ಸ್ಥಿತ್ಯಂತರಗಳು, ನೈಸರ್ಗಿಕ ವಿಕೋಪಗಳಿಂದಾದ ಅವಘಡಗಳು, ಸಾಂಸ್ಕೃತಿಕ ಪಲ್ಲಟಗಳು ಮುಂತಾದ ಆರಂಭಕಾಲ ಘಟ್ಟದ ಚಿತ್ರಗಳನ್ನು ನೀಡಿರುವುದು. ಇಲ್ಲಿರುವ ಪ್ರತಿಯೊಂದು ಅಧ್ಯಾಯವು ಒಂದೊಂದು ಸಂಶೋಧನಾ ನಿಬಂಧದಷ್ಟು ಅಧ್ಯಯನದ ವ್ಯಾಪ್ತಿಯನ್ನೂ ಹೊಂದಿದೆ. ಪ್ರೊ. ಶೆಟ್ಟರ್ ಅವರು ಎತ್ತುವ ವಾಗ್ವಾದ, ಚರ್ಚೆಗಳು, ವಿಚಾರಗಳು ಮತ್ತಷ್ಟು ವಿಸ್ತೃತಗೊಳಿಸುವಲ್ಲಿ ನಂತರದವರಿಗೆ ಈ ಕೃತಿಯು ದಿಕ್ಸೂಚಿಯಾಗಲಿದೆ.

ತೊಲ್ಕಾಪ್ಪಿಯಮ್‌ನಲ್ಲಿ ಹಾಕಿಕೊಟ್ಟ 'ಅಹಂ–ಪುಜಂ' ನಿಯಮಗಳು ತಮಿಳು ಭಾಷೆಯಲ್ಲಿ ಹೊಸ ಮಾರ್ಗದ ಒಂದು ಬಾಗಿಲನ್ನೇ ತೆರೆದು ಸಮೃದ್ಧವಾದ ಕಾವ್ಯಪ್ರವಾಹಕ್ಕೆ

ಕಾರಣವಾದವು. ಈ ಬಗೆಯ ಪ್ರೇರಣೆಯನ್ನು ಕವಿರಾಜಮಾರ್ಗ ಒದಗಿಸಲಿಲ್ಲ. ಮಾರ್ಗಕಾರನ ಕನ್ನಡ ವಾರಸುದಾರರು ಅವನಿಂದ ಪಡೆದುಕೊಳ್ಳಲಿಲ್ಲ. ಜೊತೆಗೆ ಗಮನಾರ್ಹವಾದ ಮತ್ತೊಂದು ಅಂಶವೆಂದರೆ ತೊಲ್ಕಾಪ್ಪಿಯಮ್ ಗ್ರಂಥವನ್ನು ಪುನಃಪುನಃ ಜೀವಂತಗೊಳಿಸುವ ಕಾರ್ಯವನ್ನು ಕೈಕೊಂಡು ಮುಂದಿನ ತಲೆಮಾರಿನ ತಮಿಳರು ನಿಷ್ಠೆಯಿಂದ ಒಂದೂವರೆ ಸಹಸ್ರಮಾನ ಕಾಲಾವಧಿಯಲ್ಲಿ (ಕ್ರಿ.ಶ. ೧೦೦ ರಿಂದ ೧೪೦೦) ಸುಮಾರು ಅರ್ಧ ಡಜನ್ ಪಾಂಡಿತ್ಯಪೂರ್ಣ ವ್ಯಾಖ್ಯಾನ ಗ್ರಂಥಗಳನ್ನು ಹೊರತಂದುದನ್ನು ಪ್ರಸ್ತಾಪಿಸುತ್ತಾ, ಇದಕ್ಕೆ ಹೋಲಿಸಿ ನೋಡಿದರೆ ಕನ್ನಡ ಕವಿಗಳೂ ಶಾಸ್ತ್ರಜ್ಞರೂ ಕವಿರಾಜಮಾರ್ಗಕ್ಕೆ ಕೊಟ್ಟ ಗಮನ ತುಂಬಾ ನಿರಾಶಾದಾಯಕ ಎನ್ನುವ ಅನಿಸಿಕೆಯನ್ನು ವ್ಯಕ್ತಪಡಿಸಿದ್ದಾರೆ. ಒಜ್ಜಿಬ್ಬರು ಆನುಷಂಗಿಕವಾಗಿ ಮಾಡಿದ ಉಲ್ಲೇಖಗಳನ್ನು ಮತ್ತು ವಿವಾದಾತ್ಮಕ 'ಶ್ರೀವಿಜಯ'ನ ಸ್ಮರಣೆಯನ್ನು ಬಿಟ್ಟರೆ ಕವಿರಾಜಮಾರ್ಗದಂತಹ ಮೇರುಕೃತಿಯು ಮುಂದಿನ ಪೀಳಿಗೆಯಿಂದ ಪಡೆದ ಗಮನವೂ-ಗೌರವವೂ ಗೌಣವಾದುದೆಂಬ ಅವರ ಅನಿಸಿಕೆಯು ಮಾರ್ಗಕಾರನ ಕೃತಿಯ ಬಗೆಗೆ ಕನ್ನಡಿಗರು ತಾಳಿದ್ದ ನಿಲುವು ಎಂತಹದ್ದು ಎಂಬುದನ್ನು ಸೂಚಿಸುತ್ತದೆ.

ಕಳೆದುಹೋಗಿದ್ದ ಮತ್ತು ಕತ್ತಲಲ್ಲಿ ಅಡಗಿದ್ದ ಪರಂಪರೆಯ ಬಗ್ಗೆ ನಮ್ಮನ್ನು ಎಚ್ಚರಿಸಿ ನಮ್ಮ ಸಂಸ್ಕೃತಿಯ ಸ್ವರೂಪವನ್ನು ಅರಿತುಕೊಳ್ಳುವಂತೆ ಮಾಡಿದ ಕಾಲ ೧೯ನೆಯ ಶತಮಾನದ ಉತ್ತರಾರ್ಧವಾಗಿದೆ. ಈ ಅವಧಿಯಲ್ಲಿಯೇ ಕನ್ನಡದ ಅತ್ಯಂತ ಪುರಾತನ ಕೃತಿ ಎನಿಸಿರುವ ಕವಿರಾಜಮಾರ್ಗ ಮತ್ತು ಕನಿಷ್ಠ ಒಂದು ಶತಮಾನಕ್ಕಿಂತಲೂ ಹೆಚ್ಚು ಕಾಲ ಕತ್ತಲು ಪಾಲಾಗಿದ್ದ ತಮಿಳಿನ ಶಂಗಂ ಸಾಹಿತ್ಯವು ಪುನರ್‌ಬೆಳಕು ಕಂಡಿದ್ದು ಆಗಿದೆ. ನಮ್ಮಲ್ಲಿ ಪಾರಂಪರಿಕ ಸಾಹಿತ್ಯ-ಸಂಸ್ಕೃತಿಯ ಪುನರುತ್ಥಾನದ ಕಾರ್ಯ ದಶಕಗಳ ಕಾಲ ಮುಂದುವರಿಯಿತು ಮಾತ್ರವಲ್ಲ, ಅದಿನ್ನೂ ಮುಂದುವರಿಯುತ್ತಲೇ ಇದೆ. ಅದಕ್ಕೆ ನಿದರ್ಶನ ಈ ಕೃತಿ.

'ವಡುಗರು' ಮತ್ತು 'ವಡವೊಜೆಯಾಳರ್' ತಮಿಳಗಂ ಗಡಿಯಾಚೆಗಿದ್ದ ತಮಿಳೇತರರಾಗಿದ್ದು ಈ ವಡುಗರನ್ನು ನಾವಿನ್ನೂ ಸ್ಪಷ್ಟವಾಗಿ ಗುರುತಿಸಿ ಅವರ ಬಗ್ಗೆ ಇನ್ನೂ ಹೆಚ್ಚು ಅರಿತುಕೊಳ್ಳಬೇಕಾಗಿರುವ ಪ್ರಯತ್ನವನ್ನು ಈ ಪುಸ್ತಕದಲ್ಲಿ ಗುರುತಿಸಬಹುದಾಗಿದೆ. ಕವಿ ಕುಡವಾಯಿಲ್ ಕೀರತ್ತನಾರ್ ಪ್ರಕಾರ ವಡುಗ ಪ್ರದೇಶವು ಬಹುದೂರದ ವರೆಗೆ ಚಾಚಿಕೊಂಡ ಉನ್ನತ ಗಿರಿಶಿಖರಗಳ ನಾಡಾಗಿತ್ತು. ಅಬ್ಬರ ಮಾಡುವ ಮದ್ದಳೆಗಳನ್ನು ಬಾರಿಸುತ್ತಾ ಉಗ್ರಭಯಂಕರ ಸೆಡೆನಾಯಿಗಳೊಡನೆ ಬೇಟೆಯಾಡುವ ಜನಾಂಗಗಳು ಇಲ್ಲಿಯ ನಿವಾಸಿಗಳಾಗಿದ್ದರು. ಅಲ್ಲದೆ ಅಪಾರ ಪ್ರಮಾಣದ ಬರಡು ಭೂಪಟ್ಟಿ ವಡುಗ ಮತ್ತು ತಮಿಳಗಂವನ್ನು ಬೇರ್ಪಡಿಸಿತ್ತು. ಕವಿ ಮಾಮೂಲನಾರ್ ಈ ಚಿತ್ರವನ್ನು ಇನ್ನಷ್ಟು ವಿಸ್ತರಿಸಿ ತಮಿಳಗಂ ವಾಯವ್ಯ ಮತ್ತು ಈಶಾನ್ಯ ಪ್ರದೇಶಗಳಲ್ಲಿದ್ದ ಎರಡು ವರ್ಗಗಳನ್ನು ಪರಿಚಯಿಸಿಕೊಟ್ಟಿರುವನು. ಮಂಜು ಮುಚ್ಚಿ ಆಕಾಶವನ್ನು ಚುಂಬಿಸುತ್ತಿದ್ದ ಗಿರಿಶಿಖರಗಳಲ್ಲಿ ನೆಲೆಸಿದ್ದ 'ಮುರನ್ ಮಿಗುವಡುಗ'ರು ಬಿಲ್ಲುವಿದ್ಯೆಯಲ್ಲಿ ಅತ್ಯಂತ ನಿಷ್ಣಾತರಾಗಿದ್ದರೆಂದು ಅವನು ತಿಳಿಸುವನು. ತಮಿಳಗಂ ಸಮೃದ್ಧ ಪ್ರದೇಶದಿಂದ ದೂರ, 'ಬಹು-ಶೂಲ'ಗಳ ವೀರನಾದ ಚೇರಕಟ್ಟೀಯ ರಾಜ್ಯದ ಗಡಿಯಾಚೆ(ಚೇರ ಅಥವಾ ಇಂದಿನ ಕೇರಳ ರಾಜ್ಯದ ಉತ್ತರಕ್ಕೆ)ಗಿದ್ದ ವಡುಗರನ್ನೂ ಪ್ರಸ್ತಾಪಿಸುತ್ತಾ ಅವರು ತುಳಸೀ ಪುಷ್ಪಮಾಲೆಗಳಿಂದ ಅಲಂಕರಿಸಿಕೊಳ್ಳುತ್ತಿದ್ದರೆಂದೂ ತಮಿಳರಿಗೆ ಅರ್ಥವಾಗದ ಬೇರೊಂದು ಭಾಷೆ(ಮೊಳಿ

ಪೆಯರ್ ತೇಯಂ)ಯನ್ನಾಡುತ್ತಿದ್ದರೆಂದೂ ಹೇಳುವನು. ಈ ಎರಡೂ ಉಲ್ಲೇಖಗಳು ನೀಲಗಿರಿಯಾಚೆಯ ಇಂದಿನ ಕನ್ನಡ ಪ್ರದೇಶವನ್ನು ಸೂಚಿಸುತ್ತಿದ್ದವೆಂಬುದರಲ್ಲಿ ಅನುಮಾನವಿಲ್ಲ ಎಂದು ಲೇಖಕರು ಅಭಿಪ್ರಾಯಪಡುತ್ತ ಕ್ರಿ. ಶ. ಪ್ರಾರಂಭದ ಪ್ರಾಚೀನ ಕನ್ನಡಿಗರ ಸ್ವಭಾವ ಇತ್ಯಾದಿಗಳು ಶಂಗಂ ಕಾಲದ ತಮಿಳು ಸಾಹಿತ್ಯ ಕೃತಿಗಳಲ್ಲಿ ಉಲ್ಲೇಖಗೊಂಡಿರುವುದನ್ನು ಸೂಚಿಸಿದ್ದಾರೆ.

ಕ್ರಿ. ಶ. ೩ನೆಯ ಶತಮಾನಕ್ಕಿಂತ ಮುಂಚಿನ ಕನ್ನಡ ಭಾಷೆ ಮತ್ತು ಲಿಪಿಯ ಬಗ್ಗೆ ನಮಗೆ ಅಸ್ಪಷ್ಟ ಕಲ್ಪನೆ ಮಾತ್ರ ಇದೆ. ಈ ಕಾಲಾವಧಿಯಲ್ಲಿ ನಾಯಕ ಸ್ಥಾನಕ್ಕೇರಿದ್ದ ಸ್ಥಳೀಯರೆಲ್ಲರೂ ಮೌಖಿಕವಾಗಿಯೇ ತಮ್ಮ ವ್ಯವಹಾರವನ್ನು ನಿರ್ವಹಿಸಿಕೊಳ್ಳುತ್ತಿದ್ದುದರಿಂದ ಕನ್ನಡವನ್ನಾಗಲೀ ಇನ್ನಾವ ಭಾಷೆಯನ್ನಾಗಲೀ ಬಳಸುವ ಆವಶ್ಯಕತೆ ಅವರಿಗೆ ಉಂಟಾಗಲಿಲ್ಲ. ಲಿಖಿತ ವ್ಯವಹಾರದ ಆವಶ್ಯಕತೆಯನ್ನು ಅವರು ಅರಿತುಕೊಂಡದ್ದು ತಮ್ಮ ಅಂತಸ್ತನ್ನೂ ವಂಶಾವಳಿಯನ್ನೂ ಉತ್ತಮಪಡಿಸಿಕೊಂಡು ತಮ್ಮ ಅರಸೊತ್ತಿಗೆಯನ್ನು ಅಧಿಕೃತಗೊಳಿಸ ಬೇಕೆಂಬ ದಾಹ ಉಂಟಾದಾಗ. ಇದನ್ನು ಪೂರೈಸಿಕೊಳ್ಳಲು ಅವರು ದೂರ ದೇಶದ ವಿದ್ವಾಂಸರನ್ನು ಬರಮಾಡಿಕೊಂಡು ಪೋಷಣೆ ಒದಗಿಸಿ, ಇಲ್ಲಿ ನೆಲೆಸಲು ಅವರ ಮನವೊಲಿಸಬೇಕಾಗಿ ಬಂದಂತೆ ಕಾಣುವುದು. ಈ ಪ್ರಕ್ರಿಯೆ ಆರಂಭಕಾಲದ ಕದಂಬರ ಶಾಸನಗಳಲ್ಲಿ ಹೆಚ್ಚು ಸ್ಫುಟಗೊಂಡಿರುವುದು. ಕೆಲವು ಶತಮಾನದ ಕಾಲ ಸಮುದ್ರ ಸಂಪತ್ತಿನ ಮೇಲೆಯೇ ಮೇಲೆ ಅವಲಂಬನಗೊಂಡಿದ್ದ ಕದಂಬರನ್ನು ಇಲ್ಲಿ ಬ್ರಾಹ್ಮಣೋತ್ತಮ ಮತ್ತು ಕ್ಷತ್ರಿಯ ಶ್ರೇಷ್ಠ ಎಂದು ಹೊಗಳಲು ಕಾರಣ ಫಲದಾಯಿಗಳು ಬ್ರಾಹ್ಮಣರಾಗಿದ್ದುದು ಎನಿಸುವದು. ಅವರಿಗೆ ಭವ್ಯ ವಂಶಾವಳಿಯನ್ನು ಕುಲಗೋತ್ರವನ್ನು ಒದಗಿಸಿ ಗುಪ್ತ ಮುಂತಾದ ಸಮ್ರಾಟರೊಡನೆ ಮಾಡಿದ ಅವರ ನೆಂಟಸ್ತಿಕೆಯನ್ನು ಕೊಂಡಾಡುವುದು ಅವರ ಮುಖ್ಯ ಉದ್ದೇಶ ಎಂಬ ಭಾವನೆ ಬರುವುದು. ಆರಂಭ ಕಾಲದ ಕಡಲ ಮೇಲಿನ ಶ್ರಮಜೀವನವನ್ನು ಎಷ್ಟು ಸಾಧ್ಯವೋ ಅಷ್ಟು ಮಂದಗೊಳಿಸಲು ಇಲ್ಲಿ ಪ್ರಯತ್ನಿಸಲಾಗಿದೆ. ಅವರು ತೋಡಿಸಿದ ಕೆಲವು ಕೆರೆ ತಟಾಕಗಳ ಪ್ರಸ್ತಾಪ ಬಿಟ್ಟರೆ ಬಹುಸಂಖ್ಯಾತ ಸಮಾಜಕ್ಕೆ ಸಮಾಜಕ್ಕೆ ಸಂಬಂಧಪಟ್ಟ ಅವರ ಜನಪರ ಕಾರ್ಯಗಳ ಪ್ರಸ್ತಾಪ ಇಲ್ಲವೇ ಇಲ್ಲವೆನ್ನುವಷ್ಟು ಅಪರೂಪವಾಗಿದೆ. ಅಂದರೆ ಇಲ್ಲಿ ಬಳಸಿದ ಭಾಷೆ ಬಹುಸಂಖ್ಯಾತ ಸಮಾಜಕ್ಕೆ ಸಂಬಂಧಿಸಿದ್ದಾಗಿರದೆ ಆಶ್ರಿತ ಬ್ರಾಹ್ಮಣ ವಿದ್ವಾಂಸರಿಗೆ ಸಂಬಂಧಪಟ್ಟದ್ದಾಗಿದೆ ಎಂದು ಅರ್ಥ. ಈ ಕಾಲದಲ್ಲಿ ಸ್ಥಳೀಯ ಭಾಷೆಯನ್ನು ಜನಪದ ಸಂಸ್ಕೃತಿಯನ್ನು ರಕ್ಷಿಸಿಕೊಂಡು ಬಂದವರು ಅರಸರಲ್ಲ; ಜನಸಾಮಾನ್ಯರು. ರಾಜ್ಯದ ವ್ಯವಹಾರ ವೃದ್ಧಿಸಿ ಸಮಾಜದ ಎಲ್ಲಾ ವರ್ಗಗಳೊಡನೆ ಒಂದಿಲ್ಲ ಒಂದು ಬಗೆಯಲ್ಲಿ ಸ್ಪಂದಿಸಬೇಕಾದ ಅನಿವಾರ್ಯತೆ ಉಂಟಾದಾಗ ಮಾತ್ರ ಈ ಕಾಲದ ಆಳರಸರು ಜನನುಡಿಯಲ್ಲಿ ವ್ಯವಹರಿಸಲು ಆಸಕ್ತರೆಂದು ಕಾಣುವುದು. ಶೆಟ್ಟರ್ ಅವರ ಈ ವಿವರಣೆಯು ಕದಂಬರು ಅಧಿಕೃತ ಅರಸೊತ್ತಿಗೆಯನ್ನು ಸ್ಥಾಪಿಸಿದಾಗ ಯಾವ ರೀತಿ ಸಂಸ್ಕೃತ ಭಾಷೆಗೆ ಹೆಚ್ಚಿನ ಒಲವನ್ನು ತೋರಿದರು ಎಂಬ ನಿಲುವನ್ನು ಸ್ಪಷ್ಟಪಡಿಸುತ್ತದೆ.

ಒಂದೇ ಮಾತಿನವರು ಎಂದು ಖ್ಯಾತರಾದ 'ಕೋಶರ್'ಗೆ ಸಂಬಂಧಿಸಿದ ವಿವರಣೆ ಶೆಟ್ಟರ್‌ರವರ ಹೊಸ ಸುಳುಹುವಿಗೆ ಪ್ರತೀಕವಾಗಿದೆ. 'ಕೋಶರ್' ಎಂಬ ಪದಬಳಕೆ ಕನ್ನಡದಲ್ಲಿಲ್ಲ. ಆದರೆ 'ಕೊಸರು' ವಿಶೇಷಣ ಹೊಂದಿದ್ದ 'ಕೊಸರುಪಜ್ಜ' ಎಂಬ ಗ್ರಾಮದ ಹೆಸರು ಕ್ರಿ. ಶ. ಸು. ೮೦೦ ರ ಒಂದು ಗಂಗಶಾಸನದಲ್ಲಿ ಬಂದಿರುವುದನ್ನು ತೋರಿಸುತ್ತಾ ಮುಂದುವರಿದು 'ಕೋಶರ್' ಪದವು 'ಕೋಸರು' ಎಂದು ರೂಪಾಂತರ ಪಡೆದುಕೊಳ್ಳ

ಬಹುದಾದರೆ ಅದು 'ಕಾಸರು' ಎಂದು ಆಗುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. 'ಕಾಸರು' ಎಂದರೆ ಕಾಡು, ಅರಣ್ಯ ಮತ್ತು ಇಲ್ಲಿಯ ಪ್ರಧಾನ ಪಶುಸಂಪತ್ತಾದ ಕಾಡುಕೋಣ. 'ಕಾಸು' ಎಂದರೆ ಕಾಂತಿ, ವಿಕಾಸ; 'ಕೊಸಟು' ಎಂದರೆ ಮೋಹಕ, ಆಕರ್ಷಕ. ಈ ಹಿನ್ನೆಲೆಯಲ್ಲಿ 'ಕಾಸರ' ವಿಶೇಷಣ ಹೊಂದಿದ ಸ್ಥಳ, ಪ್ರದೇಶ, ಗ್ರಾಮವನ್ನು ನೆನೆದಾಗ ಕೂಡಲೇ ಹೊಳೆಯುವುದು ಕಾಸರಗೋಡು ಎಂಬ ಪ್ರಮೇಯವನ್ನು ಮಂಡಿಸುತ್ತಾ ಕಾಸರಗೋಡು ಅಥವಾ ಕಾಸರಕೋಡಿಗೂ ಶಂಗಂ ಕಾಲದ ತುಳುವನಾಡಿನ 'ಕೋಶರ'ರಿಗೂ ಏನಾದರೂ ಸಂಬಂಧವಿದೆಯೇ ಎಂಬ ಪ್ರಶ್ನೆಯನ್ನು ವಿದ್ವಾಂಸರ ಮುಂದೆ ಇಟ್ಟಿದ್ದಾರೆ. ಕೋಶರ್ ಜನಾಂಗದ ಮೂಲನಿವಾಸ ತುಳುನಾಡು. ಕರಾವಳಿಯ ಈ ಪ್ರದೇಶಕ್ಕೆ 'ತುಳು' ಎಂಬ ಹೆಸರು ಹೇಗೆ ಬಂತು? ಎಂಬ ಪ್ರಶ್ನೆ ಇದೆ. ಶಂಗಂ ಕಾಲದ ಕೋಶರ್ ಮುಂತಾದವರ ಚಾರಿತ್ರಿಕ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು 'ತುಳು' ಪದದ ಮೂಲವನ್ನು ಹುಡುಕುವ ಪ್ರಯತ್ನವನ್ನು ಮಾಡಿದ್ದಾರೆ. ಇದಕ್ಕೆ ಅತ್ಯಂತ ಸಮೀಪವಾದದ್ದು 'ತೂಳು' ಎಂಬ ಪದ. 'ತೂಳು' ಎಂದರೆ 'ಏರಿಹೋಗು', 'ಹರಿಹಾಯಿ', 'ಹೋರಾಡು', 'ದಾಳಿಮಾಡು' ಎಂದು ಅರ್ಥ. ಶಂಗಂ ಕಾಲದ ನಾಯಕರಲ್ಲಿ ಬಹುತೇಕರು ಸತತವಾಗಿ ಹೋರಾಡುತ್ತಲೇ ಬಾಳಿದವರಾದರೂ ಇದು ತುಳುನಾಡಿನ ಕೋಶರ್ ಜನಾಂಗಕ್ಕೆ ಹೆಚ್ಚು ಹೊಂದಿಕೆಯಾಗುವುದು ಎಂಬ ವಿವರಣೆಯು ತುಳುನಾಡಿನ ಸಾಂಸ್ಕೃತಿಕ ಇತಿಹಾಸದಲ್ಲಿ ಮಹತ್ವದ್ದಾಗಿದೆ. ಜೀವನದ ಹಂಗುತೊರೆದು, ಕೊಟ್ಟ ಮಾತಿಗೆ ನಿಷ್ಠರಾಗಿ ಧರ್ಮಯುದ್ಧ ಮಾಡುವುದು ತುಳುನಾಡಿನ ಯೋಧರ ವಿಶೇಷತೆಯಾಗಿತ್ತೇನೋ. ಕನ್ನಡ ಶಾಸನ ಮತ್ತು ಸಾಹಿತ್ಯದಲ್ಲಿ ಬರುವ 'ತುಟಿಲಾಳ್' ಎಂಬ ಯುದ್ಧವೀರನು ಇದಕ್ಕೆ ಅತ್ಯಂತ ಸನಿಹ ವ್ಯಕ್ತಿಯಾಗಿ ತೋರುತ್ತಾನೆ. ಈ ಪದ ತಮಿಳಿನಲ್ಲಿ (ತೋರಲ್) ಮತ್ತು ಮಲೆಯಾಳಿ ಭಾಷೆಯಲ್ಲಿ ಇಂದಿಗೂ ಚಾಲ್ತಿಯಲ್ಲಿರುವುದು ಗಮನಾರ್ಹ ಎಂಬುದನ್ನು ಪ್ರಸ್ತಾಪಿಸಿದ್ದಾರೆ.

ಕ್ರಿ. ಶ. ಪೂ. ೧ನೇ ಶತಮಾನದ ಸಿತ್ತನ್ ವಾಸನ್ (ಪುದುಕೋಟೆ ಜಿಲ್ಲೆ) ಏಳಕ್ಕಿ ಪಟ್ಟಂ ಗಿರಿಗುಹೆಯ ಶಾಸನ ಜೈನ ಶಾಸನವು ಉಲ್ಲೇಖಿಸುವ ಪ್ರದೇಶವು ಪಶ್ಚಿಮ ಘಟ್ಟದ ಇಂದಿನ ಕನ್ನಡ-ತುಳು ನಾಡ ಭಾಗ. ಈ ಶಾಸನದಲ್ಲಿಯ ಏರುಮಿ(ತ-ಎರುಮೈ), ನಾಟು-ನಾಡು(ತ-ನಾಟ್ಟು), ಪೊಸಿಲ್(ಹೊಸಲು, ಹೊಸ್ತಿಲು), ಪೊಷ್ (ಪ್ರವೇಶ, ದ್ವಾರಬಾಗಿಲು), ಇಳೈಯಾರ (ತುಳುಯೋಧ), ಅತಿಟ-ಅಣಂ-ಅತಿಟಾಣಂ-ಅದಿಟಾಣಂ-ಅದಿಷ್ಠಾನ ಎಂಬ ಅತ್ಯಂತ ಪುರಾತನ ಕಾಲದ ಕನ್ನಡ ಪದಗಳನ್ನು ತಮಿಳು ಶಾಸನತಜ್ಞ ಐರಾವತ ಮಹಾದೇವನ್‌ರವರು ಗುರುತಿಸಿರುವುದನ್ನು ಪ್ರಸ್ತಾಪಿಸಿರುವುದು ಗಮನಾರ್ಹ ಅಂಶವಾಗಿದೆ. ಜೊತೆಗೆ ಈ ಶಾಸನದಲ್ಲಿಯ ಇಳೆಯಾರ್‌ನ ಪ್ರಸ್ತಾಪ ಅಹನಾನೂರಿನಲ್ಲಿಯೂ ಬಂದಿದ್ದು ಅವನನ್ನು ಅನಕ್ಷರಸ್ಥ ಎಂದು ಗುರುತಿಸಲಾಗಿದೆ. ಈ ವ್ಯಕ್ತಿ ತಮಿಳು ಭಾಷೆ ತಿಳಿಯದ ತುಳು ಕನ್ನಡಿಗನನ್ನು ನಿರ್ದೇಶಿಸುವುದು ಎಂಬ ಶೆಟ್ಟರ್ ಅವರ ಅಭಿಪ್ರಾಯ ಯೋಚಿಸತಕ್ಕದ್ದಾಗಿದೆ. ತಮಿಳು ಶಾಸನತಜ್ಞರೇ ಈ ಶಾಸನವನ್ನು ವಿಶ್ಲೇಷಿಸಿ ಇಲ್ಲಿ ಬರುವ ಪದಗಳು ಅತಿ ಪೂರ್ವದ ಕನ್ನಡವು, ಅತಿ ಪೂರ್ವದ ತಮಿಳಿನ ಮೇಲೆ ಆರಂಭ ಕಾಲದಲ್ಲಿ ಬೀರಿದ ಪ್ರಭಾವವನ್ನು ಸಾಬೀತುಪಡಿಸುವವು ಎಂಬ ಮಾತು ಕನ್ನಡ ಭಾಷೆಯ ಪ್ರಾಚೀನತೆಯ ಮೇಲೆ ಹೊಸ ಬೆಳಕು ಚೆಲ್ಲುವಂತಾಗಿದೆ.

ಶಂಗಂ ಕವಿಗಳು ತಮಿಳು ಜನಾಂಗೀಯರಿಗೆ ಅವರ ಪ್ರದೇಶವನ್ನು ಗುರುತಿಸಿಕೊಟ್ಟಂತೆ ಒಂಭತ್ತನೆಯ ಶತಮಾನದ ಪ್ರಾದೇಶಿಕ ಮೇರೆಗಳನ್ನು ಮಾರ್ಗಕಾರನು ಕನ್ನಡಿಗರಿಗೆ

ಗುರುತಿಸಿಕೊಟ್ಟನು. ಆದರೆ ಭಾಷಾ ಗಡಿಯನ್ನು ಗುರುತಿಸುವ ಕ್ರಿಯೆ ಇಂದಿನಂತೆ ಅಂದೂ ಸುಲಭವಾಗಿರಲಿಲ್ಲವೆಂದು ತೋರುತ್ತದೆ. ಕಾರಣ ಶಂಗಂ ಕವಿಗಳಂತೆ ಮಾರ್ಗಕಾರನೂ ನಿರ್ದಿಷ್ಟ ಗಡಿರೇಖೆಯನ್ನು ಎಳೆಯುವ ಸಾಹಸಕ್ಕಿಳಿಯದೆ ಹೆಗ್ಗುರುತುಗಳನ್ನು ಮಾತ್ರ ಸೂಚಿಸಿ ತೃಪ್ತಿಪಟ್ಟುಕೊಂಡನೆನ್ನಬಹುದು. ಮಾರ್ಗಕಾರನು ನುಡಿಯಲ್ಲಿ ಸ್ಪಷ್ಟಪಡಿಸಿದರೂ ಭೌಗೋಳಿಕವಾಗಿ ಒಗಟಾಗಿಸಿಯೇ ಇಟ್ಟ ಗಡಿಯ ಬಗ್ಗೆ ನಮಗಿರುವ ಕೆಲವು ಅನುಮಾನ ಗಳನ್ನು ಬಗೆಹರಿಸಿಕೊಳ್ಳಬೇಕಾದ ಆವಶ್ಯಕತೆ ಈಗ ತೀವ್ರವಾಗಿದೆ. ಏಕೆಂದರೆ ಅವನ್ನು ಪರಿಹರಿಸಿಕೊಳ್ಳದೆ ಕನ್ನಡಿಗರ ಪಾರಂಪರಿಕ ದಕ್ಷಿಣ ಗಡಿಯನ್ನು ಮತ್ತು ತಮಿಳರ (ಮಲಯಾಳಿಗಳ) ಉತ್ತರ ಗಡಿಗಳನ್ನು ತಿಳಿದುಕೊಳ್ಳುವುದಾಗಲೀ, ಇತಿಹಾಸದ ಆರಂಭ ಕಾಲದಲ್ಲಿ ದ್ರಾವಿಡ ಜಗತ್ತಿನೊಡನೆ ಕನ್ನಡಿಗರಿಗಿದ್ದ ಸಂಬಂಧದ ವಾಸ್ತವ ಸ್ವರೂಪವನ್ನು ಅರ್ಥ ಮಾಡಿಕೊಳ್ಳುವುದಾಗಲೀ ಸಾಧ್ಯವಾಗದು. ಈ ಹಿನ್ನೆಲೆಯಲ್ಲಿ ಶಂಗಂ ಸಾಹಿತ್ಯವು ಇತಿಹಾಸಯುಗದ ಆರಂಭಕಾಲದ ಕನ್ನಡ ನಾಡಿನ ಬಗ್ಗೆ ಮತ್ತು ಕನ್ನಡಿಗರ ಬಗ್ಗೆ ಏನನ್ನು ಹೇಳುತ್ತದೆ ಮತ್ತು ಆರಂಭಕಾಲದ ಇತಿಹಾಸವನ್ನು ರೂಪಿಸಲು ಅದು ಯಾವ ಬಗೆಯಲ್ಲಿ ನಮಗೆ ಸಹಕಾರಿಯಾಗುತ್ತದೆ ಎಂಬುದನ್ನು ಅರಿತುಕೊಳ್ಳುವ ಭೂಮಿಕೆಯನ್ನು 'ಮಾರ್ಗಕಾರನು ಕನ್ನಡದೊಳ್ ಭಾವಿಸಿದ ಜನಪದದ ದಕ್ಷಿಣದಂಚಿನ ಚಾರಿತ್ರಿಕ ಹಿನ್ನೆಲೆ' ಎಂಬ ಲೇಖನದಲ್ಲಿ ಲೇಖಕರು ಕಟ್ಟಿಕೊಟ್ಟಿದ್ದಾರೆ. ಕವಿರಾಜಮಾರ್ಗಕಾರ 'ಕನ್ನಡದೊಳು ಭಾವಿಸಿದ ಜನಪದದ ದಕ್ಷಿಣ ಗಡಿಯನ್ನು ಕಾವೇರಿ ನದಿಯ ಮೂಲಕ ಗುರುತಿಸಿದ್ದಾನೆ.' ಮಾರ್ಗಕಾರ ಕಾವೇರಿಯನ್ನು ಒಂದೇ ಒಂದು ಬಾರಿ ಹೆಸರಿಸಿದ್ದರೂ ಈ ನದಿಗೆ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಶಾಶ್ವತ ಸ್ಥಾನವನ್ನು ಕಲ್ಪಿಸಿ ಕೊಟ್ಟು ಕನ್ನಡಿಗರ ಗೌರವವನ್ನು ಸಂಪಾದಿಸಿಕೊಂಡಿದ್ದಾನೆ. ಕಾವೇರಿ ನದಿಯ ಯಾವ ಘಟಕದಲ್ಲಿ ನಿಂತು ಮಾರ್ಗಕಾರನು ಒಂಭತ್ತನೇ ಶತಮಾನದ ಕನ್ನಡ ಜನಪದ ಗಡಿಯನ್ನು ಗುರುತಿಸಿದನೋ ತಿಳಿಯದು ಎನ್ನುವ ಕೃತಿಕಾರರ ಹೇಳಿಕೆ ಯೋಚಿಸತಕ್ಕದ್ದಾಗಿದೆ. ಕೊಡಗು ಪ್ರದೇಶದ ಬ್ರಹ್ಮಗಿರಿಯಲ್ಲಿ ಹುಟ್ಟಿ ಪಶ್ಚಿಮ ಘಟ್ಟದಲ್ಲಿ ಮುಗ್ಗರಿಸುತ್ತಾ ಪೂರ್ವ ಹಾಗೂ ಆಗ್ನೇಯ ದಿಕ್ಕಿಗೆ ಅನೇಕ ಉಪನದಿಗಳನ್ನು ಸೇರಿಸಿಕೊಂಡು ೩೮೦ ಕಿ. ಮೀ. ದಾರಿಯನ್ನು ಕ್ರಮಿಸುತ್ತ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸಂಗಮದ ಬಳಿ ತಮಿಳುನಾಡನ್ನು ಸೇರುವ ಕಾವೇರಿಯ ಯಾವ ಘಟಕವನ್ನು ಗಡಿಯಾಗಿ ಗುರುತಿಸಿದ್ದಾನೋ ಈ ಬಗೆಯ ಪ್ರಯತ್ನವನ್ನು ಇಂದು ಮಾಡಹೊರಟರೆ ಅರ್ಧಕ್ಕಿಂತ ಹೆಚ್ಚು ಕೊಡಗನ್ನು, ಮಂಡ್ಯ ಜಿಲ್ಲೆಯ ದಕ್ಷಿಣ ಭಾಗ ಇಡೀ ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳನ್ನು ಕರ್ನಾಟಕದ ಹೊರಗಿಡಲು ಸಿದ್ಧರಾಗಬೇಕಾಗುತ್ತದೆ. ಕನ್ನಡಿಗರಿಗೆ ಇದು ಆಘಾತವನ್ನುಂಟು ಮಾಡುವುದೆನ್ನುವುದನ್ನು ಊಹಿಸಲೂ ಕಷ್ಟ ಎಂಬ ಆಲೋಚನೆಯನ್ನು ವ್ಯಕ್ತಪಡಿಸಿದ್ದು ಮಾರ್ಗಕಾರ ಈ ನಿರ್ಣಯಕ್ಕೆ ಬರಲು ಇದ್ದ ಕಾರಣಗಳು ಹಾಗೂ ಅವರ ನಿರ್ಣಾಯಕ ನುಡಿಯಲ್ಲಿ ಅಡಗಿರುವ ವಾಸ್ತವಾಂಶವನ್ನು ತಿಳಿದುಕೊಳ್ಳುವ ಪ್ರಯತ್ನವನ್ನು ಷ. ಶೆಟ್ಟರ್ ಅವರು ಮಾಡಿದ್ದಾರೆ. ಮಾರ್ಗಕಾರನ ಹೇಳಿಕೆಯಲ್ಲಿ ಕಾವೇರಿ ಮತ್ತು ಗೋದಾವರಿ ಪದಗಳಿಗೆ ಸಂಕುಚಿತ ಅರ್ಥ ಕೊಟ್ಟು ಇವು ನದಿಗಳನ್ನು ಮಾತ್ರ ಸೂಚಿಸುವುವು ಎನ್ನುವುದಕ್ಕಿಂತ ಕಾವೇರಿ ಮತ್ತು ಗೋದಾವರಿ ಪ್ರದೇಶಗಳನ್ನು ಸೂಚಿಸುವುವು ಎಂದು ಬಗೆದರೆ ಹೆಚ್ಚು ಸಹಜ ಎನಿಸುವುದು. ಆಡಳಿತ ಘಟಕಗಳನ್ನು ಹೆಸರಿಸದೇ ನೈಸರ್ಗಿಕ ಘಟಕಗಳಾದ ನದಿ, ಬೆಟ್ಟ, ಕಾಡು ಮತ್ತು ಸಾಗರಗಳನ್ನೇ ರಾಜ್ಯಗಳ ಗಡಿ ಇತಿಹಾಸವನ್ನು ಗುರುತಿಸುವಲ್ಲಿ

ಬಳಸಲಾಗಿದ್ದು. ಈ ಸಂಪ್ರದಾಯವನ್ನು ಅನುಸರಿಸಿ ಮಾರ್ಗಕಾರನು ಗಂಗಮಂಡಲ ಎನ್ನುವ ಆಡಳಿತ ಘಟಕವನ್ನು ಹೆಸರಿಸದೇ ಕಾವೇರಿಯನ್ನು ಮೇರೆ ಮಾಡಿಕೊಂಡು ಕನ್ನಡ ಜನಪದವನ್ನು ಭಾವಿಸಿಕೊಂಡಿದ್ದಾನೆ ಎನ್ನುವ ಇವರ ಅನಿಸಿಕೆ ಚಿಂತನಾರ್ಹವಾಗಿದೆ. ಕನ್ನಡದೊಳ್ ಭಾವಿಸಿದ ಜನಪದದ ದಕ್ಷಿಣ ಗಡಿಯನ್ನು ಕಾವೇರಿಯಿಂದ ಮಾರ್ಗಕಾರ ಗುರುತಿಸಿದಾಗ ನೃಪತುಂಗನ ಕಾಲದ ರಾಜಕೀಯ ಒತ್ತಡಗಳೇನಿದ್ದವೆಂಬುದನ್ನು ಬಿಚ್ಚಿ ತೋರಿಸಿ ಕೆ. ವಿ. ಸುಬ್ಬಣ್ಣನವರು ಭಾವಿಸಿದಂತೆ ಅವನು 'ನದಿಗಳ ಗೆರೆಹೊಡೆದು ನಕಾಶೆ ನಿರ್ದೇಶನ' ಮಾಡಲಿಲ್ಲವೆಂಬುದನ್ನು ಮನದಟ್ಟು ಮಾಡುತ್ತಾ ಒಂದು ಶತಮಾನ ಕಾಲ ಭಾವಾವೇಶಕ್ಕೊಳಗಾಗಿದ್ದ ಕನ್ನಡಿಗರು ಈ ಗುಂಗಿನಿಂದ ಹೊರಬರುವಂತೆ ಮಾಡಿದ್ದಾರೆ. ಜೊತೆಗೆ ಕಾವೇರಿ ಕನ್ನಡ ನಾಡಿನ ದಕ್ಷಿಣ ಗಡಿಯೆಂದು ಬಗೆದರೆ ಆಗುವ ಅನಾಹುತವನ್ನೂ ತಿಳಿಸಿದ್ದಾರೆ.

ಶಂಗಂ ಕಾಲದ ಸಾಹಿತ್ಯದಲ್ಲಿ ತಮಿಳೇತರರನ್ನು ಗುರುತಿಸಿ ಅವರನ್ನು 'ವಡುಗ' ಎಂಬ ಹೆಸರಿನಿಂದ ಕರೆಯಲಾಗಿದ್ದು ಇವರು ನೀಲಗಿರಿಯ ಉತ್ತರ ವಲಯದ ನಿವಾಸಿಗಳಾಗಿದ್ದು ಬಹುಭಾಷಾ ಜನಾಂಗಗಳಾಗಿದ್ದು (ಕನ್ನಡ, ಕೊಂಕಣಿ, ತುಳು, ಕೊಡಗು ಮುಂತಾದವರು) ಇವರಾರೂ ಲಿಪಿ ಮಾಧ್ಯಮವನ್ನು ರೂಢಿಸಿಕೊಂಡವರಾಗಿರಲಿಲ್ಲ. ತಮಿಳು ಭಾಷೆಯ ಕ್ರಿ. ಶ. ಪೂ. ೧ನೇ ಶತಮಾನದ ಪುರಾತನ ದಾಖಲೆ ತಮಿಳು ಬ್ರಾಹ್ಮೀ ಶಾಸನದಲ್ಲಿ ಬರುವ ಎರುಮೈ ನಾಡುವಿನ ಕನ್ನಡ ರೂಪಾಂತರವೇ ಎರುಮೈ ನಾಡು ಎಂದು ಶಾಸನತಜ್ಞರು ಸೂಚಿಸಿದ್ದು ಇಂದಿನ ಕೊಡಗು, ದಕ್ಷಿಣ ಕನ್ನಡ, ಮೈಸೂರು ಅಲ್ಲದೆ ಉತ್ತರ ಕೇರಳದ ಸ್ವಲ್ಪ ಪ್ರದೇಶವನ್ನು ಈ ನಾಡು ಒಳಗೊಂಡಿತ್ತು. ಈ ಎರುಮೈ ನಾಡಿನ ಅಧಿಪತಿಗಳು ಆಗಿನ ತಮಿಳು ನಾಡಿನ ಆ ಕಾಲದ ಅರಸರೊಂದಿಗೆ ಸಂಬಂಧವನ್ನು ಹೊಂದಿದ್ದರು. ಅಲ್ಲದೆ ಕ್ರಿ. ಪೂ. ಕಾಲದ ಈ ಕನ್ನಡಿಗರು ತಮ್ಮದೇ ಆದ ಲಿಪಿಯನ್ನು ಹೊಂದದ ಕಾರಣ ಕಾವೇರಿಯಾಚೆಯ ಪ್ರದೇಶದಲ್ಲಿ ತಮಿಳು ಬ್ರಾಹ್ಮೀ ಲಿಪಿಯನ್ನು ವ್ಯವಹಾರಕ್ಕೆ ಬಳಸಿಕೊಂಡಿದ್ದರು. ಎರುಮೈ ನಾಡಿನ ಮೂಲ ಜನಾಂಗ ಕೊಡಗಿನವರಾಗಿದ್ದು ಅವರು ತಮಿಳರಿಗಿಂತ ಭಿನ್ನವಾದ ಭಾಷಾ ಜನಾಂಗವಾಗಿದ್ದು ಮಾತ್ರವಲ್ಲದೆ ನಂತರದ ಕಾಲದಲ್ಲಿಯ ಗೌಡ ಕನ್ನಡ, ಜೇನು ಕನ್ನಡ ಮುಂತಾದ ಹಲವು ಕನ್ನಡ ಪ್ರಭೇದಗಳ ಜನರೂ ಆಗಿದ್ದಾರೆ. ಶಂಗಂ ಮತ್ತು ಶಂಗಂ ನಂತರದ ತಮಿಳರಿಗೆ ಅವರ ಭಾಷಾ ಪ್ರದೇಶದ ಉತ್ತರದಲ್ಲಿ ಆಳುತ್ತಿದ್ದ ಅರಸು ಮನೆತನಗಳನ್ನು ಮೈಸೆ, ಪುನ್ನಾಟ, ಕೊಂಗ ಎಂಬ ಪ್ರಾದೇಶಿಕ ಹೆಸರುಗಳ ಮೂಲಕವೇ ಗುರುತಿಸಿದ್ದಾರೆ ಎಂಬ ಕಾವೇರಿ ಪ್ರದೇಶದಲ್ಲಿಯ ವಡುಗರ (ಕನ್ನಡಿಗರ) ಉಲ್ಲೇಖದ ವಿವರಗಳು ಓದುಗರಲ್ಲಿ ಕುತೂಹಲವನ್ನುಂಟು ಮಾಡಿವೆ. ಮಾರ್ಗಕಾರನಿಗಿಂತ ಪೂರ್ವದಲ್ಲಿ ವಡುಗ ಅರಸರು ಕಾವೇರಿ ಆಚೆ (ದಕ್ಷಿಣದ) ಈಚೆ(ಉತ್ತರದ)ಯ ಪ್ರದೇಶದಲ್ಲಿ ಆಳುತ್ತಿದ್ದು ಕೊಂಕಣಿ ಕೊಡಗು ತುಳು ಮತ್ತು ಕನ್ನಡ ಪ್ರದೇಶಗಳನ್ನು ಆಳುತ್ತಿದ್ದವರಾಗಿದ್ದು ಲಿಪಿರಹಿತ ಜನಪದೀಯ ನುಡಿಗಟ್ಟುಗಳನ್ನು ಬಳಸುತ್ತಿದ್ದರು. ಈ ವಿವರವನ್ನೇ ಮುಂದೆ ಮಾರ್ಗಕಾರ ತಂತಮ್ಮ ನುಡಿಯೊಳೆಲ್ಲರು ಜಾಣರ್ ಎನಿಸಿದ್ದ ಈ ಚದುರ ನಾಡವರ್ಗಳ್‌ಕುರಿತೋದದೆಯುಂ ಕಾವ್ಯಪ್ರಯೋಗಮತಿಗಳು ಆಗಿದ್ದರು ಎಂದು ಉಲ್ಲೇಖಿಸಿರುವುದಾಗಿದೆ. ಭಾಷಾ ತಳಹದಿಯ ಮೇಲೆ ಗುರುತಿಸಿಕೊಳ್ಳುವ ಸಂಪ್ರದಾಯ ದ್ರಾವಿಡರಲ್ಲಿ ಅದರಲ್ಲೂ ದಕ್ಷಿಣ ಭಾರತದ ಬುಡಕಟ್ಟಿನ, ಗಿರಿಪ್ರದೇಶದ-ಜನಾಂಗಗಳಲ್ಲಿ ಒಂದಿಲ್ಲೊಂದು ಬಗೆಯಲ್ಲಿ ಆರಂಭ ಕಾಲದಿಂದಲೂ ರೂಢಿಯಲ್ಲಿತ್ತೆನ್ನುವುದು ಮುಖ್ಯ. ಈ ಜನಾಂಗಗಳಿಗೆ ಸ್ವಂತದ್ದೆಂಬ ಭಾಷೆ ಜನಪದ, ರಾಜಕೀಯ ಪ್ರಜ್ಞೆ, ಸಮಾಜ,

ಸಂಸ್ಕೃತಿ ಮತ್ತು ಭೂವಲಯಗಳಿದ್ದವು. ಆದರೆ ಇವರಲ್ಲಿ ಬಹುತೇಕರನ್ನು ಇತಿಹಾಸದ ತೆರೆಯ ಮರೆಗೆ ನೂಕಿದ್ದು ಅವರಿಗಿದ್ದ ಲಿಪಿಯ ಅಭಾವ. ತಮಿಳು ಭಾಷಿಕರು ತಮ್ಮ ಪರಿಧಿಯ ಅಂಚಿನಲ್ಲಿದ್ದ ಉತ್ತರ(ವಡುಗರು)ದವರೊಡನೆ ಮಿತ್ರ-ಶತ್ರು ಸಂಬಂಧ ಹೊಂದಿದ ಸಂದರ್ಭದಲ್ಲಿ ಈ ಎರಡು ಘಟಕಗಳ ನಡುವಣ ಪ್ರದೇಶವನ್ನು ಭೌಗೋಲಿಕವಾಗಿ ಹಂಚಿಕೊಂಡ ಲಿಪಿರಹಿತ ಜನಾಂಗಗಳು (ಪ್ರಧಾನವಾಗಿ ಕೊಡವ ತುಳುವ ಮತ್ತು ಕೊಂಕಣಿಗ) ಸುಮಾರು ಅರ್ಧ ಸಹಸ್ರ ವರ್ಷ ಕಾಲದ ಇತಿಹಾಸದಲ್ಲಿ ತಮ್ಮ ಸ್ವಂತಿಕೆಯನ್ನು ಮರೆದವು. ತಮಿಳು ಸಂಪರ್ಕಕ್ಕೊಳಗಾದರೂ ತಮಿಳಿಗೆ ಸಂಪೂರ್ಣ ಶರಣಾಗದ ಅಗ್ಗಳಿಕೆ ಇವರದ್ದಾಗಿತ್ತು. ಒಂದು ಬಗೆಯಲ್ಲಿ ಅಡ್ಡಗೋಡೆಯಾಗಿ ಮತ್ತೊಂದು ಬಗೆಯಲ್ಲಿ ಸಂಪರ್ಕ ಸೇತುವೆಯಾಗಿ ನಿಂತು ಸ್ವಂತಿಕೆಯನ್ನು ಗಳಿಸಿಕೊಳ್ಳಲು ಪ್ರಯತ್ನಿಸಿದ ಶ್ರೇಯಸ್ಸು ಕಾವೇರಿ ಉದರದ ಈ ಜನಾಂಗಗಳಿಗೆ ಸಲ್ಲುವುದು. ಇಷ್ಟೊಂದು ಮಹತ್ವದ ಪಾತ್ರ ವಹಿಸಿದ ಈ ವಲಯಗಳನ್ನು ಸರಿಯಾಗಿ ಅರಿತುಕೊಳ್ಳುವ ಆವಶ್ಯಕತೆ ನಮಗಿದೆ. ಏಕೆಂದರೆ ಅವನ್ನು ಅರಿತುಕೊಂಡಾಗ ಮಾತ್ರ ತಮಿಳರ 'ವೇಗಡಂ' ಮತ್ತು ಮಾರ್ಗಕಾರನ 'ಕಾವೇರಿಯಿಂದಮಾ'ದ ಸೀಮಾರೇಖೆಗಳು ನಮಗೆ ಅರ್ಥವಾಗುವವು.

ತಮಿಳಿನ ಶಂಗಂ ಸಾಹಿತ್ಯಕ್ಕೆ ವಡುಗ (ಕನ್ನಡ) ನಾಡಿನ ಕವಿಗಳ ಕೊಡುಗೆಯನ್ನು ಗುರುತಿಸಿರುವ ಕೊನೆಯ ಅಧ್ಯಾಯ ಓದುಗರನ್ನು ಆಶ್ಚರ್ಯಚಕಿತಗೊಳಿಸಿದೆ. ವಡುಗ ಕವಿಗಳು ತಮ್ಮ ತಮ್ಮ ಭಾಷೆಯಲ್ಲಿ ಕಾವ್ಯ ರಚಿಸದೇ ತಮಿಳಿನಲ್ಲಿ ಹಾಡುಗಬ್ಬಗಳನ್ನು ರಚಿಸಿದ್ದಾರೆ. ಇದಕ್ಕೆ ಕಾರಣ ಅವರು ಅರಸಿ ಹೋಗುತ್ತಿದ್ದ ಪೋಷಕವರ್ಗವೇ ಆಗಿದೆ. ಮೌಖಿಕ ಕಾವ್ಯಕಲೆಯ ರಚನೆಯಲ್ಲಿ ಪ್ರೌಢಿಮೆ ಹೊಂದಿದ ಕವಿಗಳು ತಮ್ಮ ತಮ್ಮ ನೆಲದ ನುಡಿಗಳಲ್ಲಿ ಮುಖ್ಯವಾಗಿ ಕನ್ನಡ, ತುಳು, ಕೊಂಕಣಿ ಹಾಡುಗಳನ್ನು ರಚಿಸಿರಲು ಸಾಧ್ಯವೇ? ಎಂಬ ಪ್ರಶ್ನೆಯನ್ನು ಹಾಕಿಕೊಂಡು ಅದಕ್ಕೆ ಉತ್ತರವಾಗಿ ಕ್ರಿ. ಶ. ೫ ನೇ ಶತಮಾನದ ನಂತರದ ದಾಖಲಿತ ಕನ್ನಡ ಶಾಸನ ಸಾಹಿತ್ಯವನ್ನು ಸೂಚಿಸಿರುವ ಅವನ ಕಾಲಕ್ಕಿಂತ ಮುಂಚಿನ ಹಾಡುಗಬ್ಬ ವರ್ಗಕ್ಕೆ ಸೇರಿದ ಚತ್ತಾಣ ಮತ್ತು ಬೆದಂಡೆ ಪ್ರಭೇದಗಳ ಹಿರಿಮೆಯನ್ನು ದೃಷ್ಟಿಯಲ್ಲಿರಿಸಿಕೊಂಡು, ಸಾಧ್ಯವಿದೆ ಎಂಬ ಪ್ರಮೇಯುವನ್ನು ಮಂಡಿಸಿದ್ದಾರೆ. ಉತ್ತರ(ವೆಂಗಡ)ದ ಕವಿಗಳ, ವಡಮ ಹೆಸರಿನ ಉತ್ತರದ ಕವಿಗಳ, ಎರುಮೈ ನಾಡಿನ ಕವಿಗಳ, ಕೊಂಕಣದ ಕವಿಗಳ, ಕೋಶ ನೆನೆವ ಕವಿಗಳ ಅತ್ಯುತ್ತಮ ಎಂದೆನಿಸುವ ೨೪ ಕವನಗಳನ್ನು ಕನ್ನಡಕ್ಕೆ ಅನುವಾದಿಸಿ ಪುಸ್ತಕದ ಕೊನೆಯ ಅಧ್ಯಾಯದಲ್ಲಿ ಕೊಟ್ಟಿದ್ದಾರೆ. ಕವಿತೆಗಳು ಅಚ್ಚುಕಟ್ಟಾಗಿ ಅನುವಾದಗೊಂಡಿವೆ. ನಿದರ್ಶನಕ್ಕೆ ಷ. ಶೆಟ್ಟರ್ ಅವರು ಅನುವಾದಿಸಿರುವ ಕವಿತೆಗಳಲ್ಲಿ ಆಯ್ದ ಎರಡು ಕವಿತೆಗಳನ್ನು ಇಲ್ಲಿ ಕೊಡಲಾಗಿದೆ:

೧. ಕವಿ : ವಡಮವಣ್ಣಕ್ಕಣ್‌ಪೇರಿ ಶಾತ್ತಣಾರ್-ನಟ್ರಿಣೈ, ೩೭೮

ಓ ಗೆಳತಿ / ರಾತ್ರಿ ನೀಳನೀಳವಾಗಿ / ಯಾತನೆಯ ನೂರ್ಮಡಿಸಿ
ಅಪಹರಿಸಿದೆ ನೆಮ್ಮದಿಯ / ನನ್ನೆಲ್ಲ ನಿದ್ದೆ ಕದ್ದು.

ಮಾಯದ ಹಳೆಯ ಗಾಯದಂತೆ / ಮರುಕಳಿಸುತಲಿವೆ ಮತ್ತೆ ಮತ್ತೆ
ಲಯಬದ್ಧ ಅಲೆಗಳ ಇಂಪು ಧ್ವನಿಗಳು; / ರವಿಯಾದರೋ,
ಮರೆಯಿಂದ ಹೊರಬರಲು / ಹಿಂಜರಿದು ನಿಂತಿರುವನು.

೨. ಕವಿ ಮಾಮೂಲಣಾರ್ ಕುಜುಂತೊಕೈ ೩೭೨

ಶಂಖ ಕೊರೆದು ಮಾಡಿದ / ಶುಭ್ರ ಬಿಳಿ ಕಂಕಣಗಳು
ನನ್ನ ಮಣಿಕಟ್ಟಿನಿಂದ / ಕಳಚಿ ಬೀಳುತ್ತಿವೆ.

ಕಣ್ಣೀರು ಹರಿಸಿ ಇರುಳ ಸರಿಸಿ / ದಿನ ನೂಕುತಿರುವೆ. ಏಕಾಂಗಿಯಾಗಿ.

ಓ ನನ್ನ ಹೃದಯವೇ! / ಏಳು. ಅವನಿರುವ ತಾಣ ತೋರಿಸು-
ಹೋಗಿ ಮುಕ್ತಿ ಪಡೆಯೋಣ. / ಈ ನಲಿವ ನೆಲದಿಂದಾಚೆ
ಹಲವು ಶೂಲ ಗಾವುದದ / 'ಕಟ್ಟೀ' ರಾಜ್ಯದ ಗಡಿ ದಾಟಿ.
ತುಳಸಿಮಾಲೆಯ ತೊಟ್ಟ /ವಡುಗರು ನಮಗೆ ತಿಳಿಯದ
ನುಡಿಯನಾಡುವರೋ. / ಅಲ್ಲಿ ಸೇರಿ.
ಅವನ ಬೆನ್ನ ಬೀಳೋಣ.

ಈ ಕವಿತೆಗಳು ಆಧುನಿಕ ಕನ್ನಡದ ಕವಿತೆಗಳಿಗೆ ಸರಿಸಾಟಿಯಾಗಿ ಒಂದು ಕೈ ಮಿಗಿಲಾಗಿ ಓದುಗರನ್ನು ವಿಸ್ಮಯಗೊಳಿಸಿವೆ. ಅದಕ್ಕಿಂತ ಮುಖ್ಯವಾಗಿ ಕನ್ನಡಿಗರ ಮಟ್ಟಿಗೆ ನೆನೆಗುದಿಗೆ ಬಿದ್ದಿದ್ದ ಈ ಕಾವ್ಯ ಬೆಳೆಯನ್ನು ಅದರ ಎಲ್ಲ ಸಾಂಸ್ಕೃತಿಕ ಮತ್ತು ಸಾಂದರ್ಭಿಕ ಸಂಕೀರ್ಣತೆಗಳೊಂದಿಗೆ ತಲಸ್ಪರ್ಶಿಯಾಗಿ ಕನ್ನಡಿಗರಿಗೆ ಪರಿಚಯ ಮಾಡಿಕೊಟ್ಟು, ಕವಿರಾಜಮಾರ್ಗಕ್ಕಿಂತ ಭಿನ್ನವಾದ ಕವಿ-ಜನಮಾರ್ಗದ ಸಾಧ್ಯತೆಯನ್ನು ಶೋಧಿಸಿದ್ದಾರೆ. ಜೊತೆಗೆ ಇವು ಇವತ್ತಿನ ಕನ್ನಡ ಪ್ರದೇಶದವರು ಶಂಗಂ ಕಾವ್ಯ ಸಮುಚ್ಚಯಕ್ಕೆ ನೀಡಿದ ಕವಿತೆಗಳಾಗಿವೆ. ಕಾವ್ಯ ಸೂಕ್ಷ್ಮತೆ ಮುಕ್ಕಾಗದ ಹಾಗೆ ಸಂಸ್ಕೃತಿ ವಿಶಿಷ್ಟವಾದ ಅಂಶಗಳನ್ನು ಈ ಅನುವಾದಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಅಲ್ಲದೆ ಕನ್ನಡದ ವಿಪುಲ ಅನುವಾದ ಸಾಹಿತ್ಯದಲ್ಲಿದ್ದ ಒಂದು ಮಹಾನ್ ಕೊರತೆಯನ್ನು ತುಂಬಿಕೊಟ್ಟಿದ್ದಾರೆ.

ಶೆಟ್ಟರ್ ಅವರ ಶ್ರಮ ಮತ್ತು ಶೋಧನೆಯ ಫಲವಾಗಿ ಆರಂಭಕಾಲದ ಕರ್ನಾಟಕ ಇತಿಹಾಸದ ಮಹತ್ವದ ಅಧ್ಯಾಯವೊಂದು ಪ್ರಪ್ರಥಮವಾಗಿ ಈ ಕೃತಿಯ ಮೂಲಕ ಬೆಳಕಿಗೆ ಬರುತ್ತಿದೆ. ಗ್ರಂಥದುದ್ದಕ್ಕೂ 'ವಡುಗರ'ನ್ನು ಪ್ರಸ್ತಾಪಿಸುತ್ತಾ ಹಂತಹಂತವಾಗಿ ಅವರನ್ನು ಪರಿಚಯಿಸುತ್ತಾ ಅವರ ನೆಲೆಗಳನ್ನೂ ನಿಲುವುಗಳನ್ನೂ ವಿಶ್ಲೇಷಿಸುತ್ತಾ ಕನ್ನಡಿಗರು ತಮ್ಮನ್ನು ತಾವು ಅರ್ಥಮಾಡಿಕೊಳ್ಳಲು ಶಂಗಂ ಸಾಹಿತ್ಯವನ್ನು ಪ್ರಸ್ತುತಗೊಳಿಸಬಹುದಾದ ಆವಶ್ಯಕತೆಯನ್ನು ಲೇಖಕರು ಮನವರಿಕೆ ಮಾಡಿಕೊಟ್ಟಿದ್ದಾರೆ. ಮೌರ್ಯ ಅಶೋಕ ಮತ್ತು ಬನವಾಸಿ ಕದಂಬರ ಆಳ್ವಿಕೆಯ ನಡುವೆ ಬಾಯ್ತೆರೆದು ನಿಂತಿದ್ದ ಕಂದಕವನ್ನು ತುಂಬಿ ಈ ಕಾಲದಲ್ಲಿ ಕರ್ನಾಟಕದ ರಾಜ್ಯಶಕ್ತಿಗಳಾಗಿ ಬೆಳೆದು ತಮಿಳರನ್ನು ಗಡಿಯಾಚೆ ನಿಲ್ಲಿಸಿದ ಎರುಮೈ, ಪುನ್ನಾಟ, ಕೊಂಗ, ಕೊಂಕಣ, ತುಳುವ, ಕದಂಬ, ಗಂಗ ಮೊದಲಾದವರು ಕನ್ನಡ ಮತ್ತು ತಮಿಳು ಬೆಳವಣಿಗೆಗೆ ಕೊಟ್ಟ ಕಾಣಿಕೆಯನ್ನು ಮನದಟ್ಟು ಮಾಡಿಕೊಟ್ಟಿದ್ದಾರೆ. ಈ ವಿವರಣೆ ಇದುವರೆಗಿನ ಕರ್ನಾಟಕ ಇತಿಹಾಸದ ಬಗೆಗಿನ ಗ್ರಹಿಕೆಯನ್ನು ಮರುಆಲೋಚನೆಗೆ ಒಳಪಡಿಸುವಂತೆ ಮಾಡಿದೆ.

ಪ್ರೊ. ಷ. ಶೆಟ್ಟರ್ ಅವರ ಈ ಪುಸ್ತಕದಲ್ಲಿ, ವಿಷಯ ಸಂಗ್ರಹದಲ್ಲಿ ಧಾರಾಳತೆ, ನಿರೂಪಣೆಯಲ್ಲಿ ವಸ್ತುನಿಷ್ಠತೆ, ಭಾಷೆಯ ಬಳಕೆಯಲ್ಲಿ ಸರಳತೆ, ವಿಷಯ ಮಂಡನೆಯಲ್ಲಿ ಸ್ಪಷ್ಟತೆಗಳು ಎದ್ದು ಕಾಣುತ್ತವೆ. ಪ್ರತಿ ಅಧ್ಯಾಯದ ಅಡಿಟಿಪ್ಪಣಿಗಳಲ್ಲಿ ಪ್ರಸ್ತಾಪಿಸಿರುವ ವಿಷಯ ವೈವಿಧ್ಯಗಳು ಓದುಗರನ್ನು ನಿಬ್ಬೆರಗಾಗಿಸಿವೆ. ಅಧ್ಯಯನದುದ್ದಕ್ಕೂ ಚಿಕಿತ್ಸಕ ದೃಷ್ಟಿಕೋನ, ಶ್ರಮಸಹಿಷ್ಣತೆ ಎದ್ದು ಕಾಣುತ್ತದೆ. ಈ ಕೃತಿಯಲ್ಲಿ ವಿಷಯದ ವಿವರಣೆ, ನಿರೂಪಣೆ, ತೀರ್ಮಾನ ಹಾಗೂ ಮುಕ್ತಾಯಗಳು ತರ್ಕಬದ್ಧವಾಗಿ ಹಾಗೂ ಸುಸಂಬದ್ಧವಾಗಿ ಇದ್ದು ಆಸಕ್ತ ಓದುಗರನ್ನು ಸರಾಗವಾಗಿ ಓದಿಸಿಕೊಂಡು ಹೋಗುವಲ್ಲಿ ಯಶಸ್ವಿಯಾಗಿದೆ. ಈ ಪುಸ್ತಕದ ಪ್ರಾರಂಭದಲ್ಲಿ ಶೆಟ್ಟರ್ ಅವರು 'ನಾನು ಮಂಡಿಸಲು ಪ್ರಯತ್ನಿಸಿರುವುದು ನಿರ್ಣಯಗಳನ್ನಲ್ಲ, ಪ್ರಚೋದನೆಗಳನ್ನು ಮಾತ್ರ' ಎಂದಿದ್ದರೂ ಓದುಗರಿಗೆ ಇಲ್ಲಿಯ

ಪ್ರಾಚೀನ ಕನ್ನಡ ನಾಡು-ನುಡಿಯ ಬಗೆಗಿನ ವಿವರಗಳು ನಿರ್ಣಯಗಳೇ ಆಗಿದ್ದು ಆ ಗುಂಗಿನಿಂದ ಹೊರಬರಲು ಸಾಧ್ಯವಾಗದು ಎನಿಸುತ್ತದೆ. ತಮ್ಮ ಸುದೀರ್ಘ ಕಾಲದ ಅಧ್ಯಯನದಲ್ಲಿ ಕಂಡುಕೊಂಡ ಫಲಿತಗಳನ್ನು ಈ ಕೃತಿಯ ಮೂಲಕ ಬೆಳಕಿಗೆ ತಂದು ಪ್ರಾಚೀನ ಕನ್ನಡಿಗರ ನಾಡು-ನುಡಿ ಚಿಂತನೆಯ ಬಗೆಗೆ ಓದುಗರಲ್ಲಿ ಸಂಚಲನವನ್ನುಂಟು ಮಾಡಿದ ಪ್ರೊ. ಷ. ಶೆಟ್ಟರ್ ಅವರ ಈ ಮೇರು ಕೃತಿಯು ಕನ್ನಡದಲ್ಲಿಯೇ ವೈಶಿಷ್ಟ್ಯಪೂರ್ಣವಾಗಿದ್ದು ಕನ್ನಡಿಗರು ಅವರಿಗೆ ಚಿರಋಣಿಯಾಗಬೇಕಾಗಿದೆ.

✦ ಡಾ. ಸಿ. ನಾಗಭೂಷಣ, ವಿಶೇಷಾಧಿಕಾರಿಗಳು, ಗು.ವಿ.ಸ್ನಾತಕೋತ್ತರ ಕೇಂದ್ರ, ಜ್ಞಾನತುಂಗಾ – ಯರಗೇರಾ, ರಾಯಚೂರು-೫೮೪ ೧೩೩ ✦

ತುಂತುರು ಮಳೆ

ಎಳೆ ಬಿಸಿಲಲಿ ಹನಿ ಹನಿ ಹನಿ

ಎಂ. ರಾಜ್‌ಕುಮಾರ್

೧

ನನ್ನೊಳಗೆ ಮುಳುಗಿ
ಹುದುಗಿ ಹುಗಿದು ಮುಗಿದು
ದಿನವೂ ಮರೆಯಾಗುವ ಲಕ್ಷಾನುಲಕ್ಷ ಸೂರ್ಯರಿಗೂ
ಬೆಳಗಲಾಗಲಿಲ್ಲ ನನ್ನ
ಆಳಕ್ಕಿಳಿದಷ್ಟೂ ಘೋರ ಭಯ
ಗದ್ಗದಿತ ನಡುಕ
ಯಾರೂ ಹೆಕ್ಕಲಾಗಿಲ್ಲ ಬರೀ ಸಿಕ್ಕಷ್ಟೇ ಹವಳ
ಹುಚ್ಚನಂತೆ, ಅನಾಥ ಆಕ್ರಂದನದಂತೆ
ಮೊರೆಯುತ್ತೇನೆ ಮರೆಯುತ್ತೇನೆ.
ಭೋರ್ಗರೆದು ಅಪ್ಪಳಿಸುತ್ತೇನೆ ನಿನ್ನ
ಸೆರಗ ಚುಂಗಗಂಟಿದ
ಚಂದ್ರ ಮುಖ
ಸವರ ಬಯಸುತ್ತೇನೆ
ಮುಡಿ
ತುಂಬ ನಗುವ ನಕ್ಷತ್ರ ಮಲ್ಲಿಗೆ
ಮುತ್ತುಗಳ ಮುತ್ತಿಡಲು ಚಿಮ್ಮುತ್ತಿವೆ
ಶುದ್ಧ, ಶಾಂತ, ಸನ್ನದ್ಧ, ಸಮೃದ್ಧ ಮಹಾಕಾಯಿ
ತಾಯಿ ತಲೆ ಮೇಲಿದ್ದು ಕಾಯ್ದ ನಭ ನೀನು
ಒಬ್ಬಂಟಿ ತಳಮಳದ ಅಲೆ
ಅಲೆಗೂ ಮಳೆ
ನೀನು ಅವ್ವಾ,
ಒಪ್ಪಿಸಿಕೋ ತೆರೆ ತೆರೆಗಳೊಳಗೂ
ಹೊಡಮರಳಿ ಉಮ್ಮಳಿಸೋ ದುಃಖ ಅಗಾಧ

ನೀರು, ರುಚಿ ಕಣ್ಣೀರು ಸಮುದ್ರ ನಾನು.

೨

ಇಂದೇನಾದರೂ
ನಟ್ಟ ನಡುರಾತ್ರಿಯಲಿ ಬಟ್ಟ
ಬತ್ತಲೆಯಾಗಿ ಹೊರಬಿದ್ದಿದ್ದರೆ
ಬುದ್ಧನೂ
ಶಂಕಿತ ಉಗ್ರನಾಗುತ್ತಿದ್ದ.
ಎಂದಿನಂತೆ ಬಂದ ಗಾಂಧಿ
ಎಂದು ನಕ್ಕಿದ್ದರೋ? ಇವರು
ಬುದ್ಧ ನಕ್ಕಷ್ಟೇ ಸುದ್ದಿ ನಕ್ಕರೂ ಇಬ್ರಾಹೀಂ ದಾವೂದಾ....
ಕೇಳಿಸಿತು ಗಾವುದಾ ಗಾವುದಾ ಗಾವೂದಾ...

೩

ಅಂದು ಮೋಡ ಕನಿಕರಿಸಿ ಹನಿ
ಗೂಡಿದಷ್ಟೇ ಇಂದೂ ಹಂಗೇ ಸುರಿದಿದೆ ಮಳೆ
ತಟ್ಟಕ ಮಟ್ಟಕ ಘಟ್ಟಕ ಜೆಟ್ಟಕ ಏರಿವೆ ಇಳಿದಿವೆ ಅದೇ ಶ್ರಾವಣ
ಹೊಗಳಿ ಹಾಡಲು ಇಲ್ಲ ದತ್ತಣ್ಣ
ಈಗ ಕುಣಿಯೋದಿಲ್ಲ ರಾವಣ
ಎಲ್ಲಾ ಇದ್ದಾಂಗ ಇರತೈತಿ ಶ್ರಾವಣಾನೂ
ನೋಡಾಕ ಕಣ್ಣಲ್ಲಿ ಸೌಭಾಗ್ಯ ಬೇಕೋ ಅಣ್ಣ.
ಬೇಂದ್ರೆ ಮತ್ತ ಶ್ರಾವಣಾ
ಒಂದಕ್ಕೊಂದು ಎಂಥಾ ದ್ರಾವಣಾ?
ಒಂದ ಕೊಂದು ಇನ್ನೊಂದು ಉಳಿದಾವರ ಹ್ಯಾಂಗ ಬಂಧು ?

೪

ಹೌದು, ಅವ್ವ ಹೇಳಿದ-
ಗುಡ್ಡ ಗುಡ್ಡ ಸ್ಥಾವರ ಲಿಂಗ,
ಮರತಾಪರ ಹೆಂಗ.
ಈಗಿದ್ದು ಹಿಂಗೆದ್ದು ಹೊರಟಿತು ಶ್ರಾವಣಾ
ಮುಗಿದಂತೆ ರಾಮಾ
ಯಣಾ...

೫

ನಿಮ್ಮೂರ ಗುಡ್ಡದ ಮ್ಯಾಲೆ
ಕೂಡಿ ಮುದ್ದಾಡುವ ನೆಲ ಮುಗಿಲು
ನಿಂತ ನೆಲವೇ ಕುಸಿಯಿತೇನೋ?
ನಾನಿದ್ದಲ್ಲಿ ಅಗಲಿರುವ ದಿಗಿಲು
ನೀ ನಡೆದಾಡೋ ನದಿ
ಗುಂಟ ನಗೀ ನವಿಲ ಸಾಲು
ಜಗ್ಗಿ ಹಿಡಿದು ಹೆಣೆದ ಜಡೆಯಂತೆ

ಬದುಕು ಪೊದೆ ಬಿದಿರು
ನಗಿಸಿ ನಗೆಗಲಿಸಿ ನೀ ಹೋದೆ
ಉಸಿರಿಗೊಮ್ಮೆ ಅಪಸ್ವರ
ಬಿದಿರ ಗಳಕೊಂದೊಂದು ಎದೆ ತುಂಬ ರಂಧ್ರದ ಕೊಳಲು
ಅಳುವುದಿಲ್ಲ, ಯಾರಿಗೂ ಹೇಳುವುದಿಲ್ಲ ನೀ
ನಿರದ ಗೂಡಲ್ಲಿ, ನೀ ಕಲಿಸಿದ ಹಾಡಿದೆ
ನಿನ್ನ ನೆನಪ ಉಗಾದಿಗೊಮ್ಮೆ ಉಲಿಯುತ್ತೇನೆ
ಅವ್ವನೇ ಅಡವಿಟ್ಟ ಕೋಗಿಲೆ ಮರಿಯಾದರೂ
ಸಾಕಿದ್ದು ಕಾಗೆ ಋಣ ನೆನೆಯುತ್ತೇನೆ.

೬

ಬಂದೆ ಇರು, ಬಂದೇ ಬಿಟ್ಟೆ
ಎನ್ನುತ್ತಲ್ಲೇ ಅವಸರಿಸಿ ತಡವರಿಸಿ ಗದಬಡಿಸಿ
ನಿನ್ನ ಕಿರು ಬೆರಳಗುಂಟ
ಹೆಜ್ಜೆ ಇಡುವುದ ಕಲಿತವನು
ಮುಳುಗು ಸೂರ್ಯನ ತೋರಿಸಿ
ಅಲೆ ಅಳಿಸುವ ಹೆಜ್ಜೆ ಗುರುತುಗಳ
ಮುಟ್ಟಾಟ ಆಡಿಸಿ – ಅಳು ಮರೆಸಿ
ಬದುಕ ಕಲಿಸಿದವನು

ಮೋಡ ಮಡುಗಟ್ಟಿ ನೋಡ
ನೋಡುತ್ತಲೇ ಸುರಿದ ಮಳೆ
ತೊಯ್ಯಲಾರದೆ ಅಡ್ಡಗಟ್ಟಿ
ಸಾಕುವ ನೀ ಮತ್ತೊಂದು ಮುಗಿಲು
ಕಾಯುವ ಅನವರತ ಗುರು
ಉಳಿದದ್ದು ನಗೆಮುಗುಳು.

೭

ನೀರಿನ ಉಂಡೆಯಾಗಿದ್ದೆ
ಎಲ್ಲಿಂದ ಹೇಗೆ ಅಪ್ಪಳಿಸಿದೆ ಹುಡುಗಿ ?
ಮೈಯೆಲ್ಲ ಬೆಂಕಿ ಆಕಾಶ ಸಂಚಾರ ಮಿಂಚು
ಎದೆಯೊಡೆದು ಗುಡುಗು ಧ್ವನಿ
ನಾನೀಗ ಮೋಡವಾಗುಳಿದಿಲ್ಲ
ತೇಲಾಡಿಸುವ ಗಾಳಿ ನೀನಿಲ್ಲ
ಸುರಿಯಲೇಬೇಕು ನೆಲ ತುಂಬ
ಹರಿದ ಸರದಂತೆ
ಅಳುವ ಹಣೆಬರಹವೂ ಇರದ
ಶುದ್ಧ ಪೌರುಷ
ನಾನು ಮುಂಗಾರು, ಇಳಿದಲ್ಲೇ ಮೊಳಕೆ
ಯಾರ ಹಂಗೇನು ಮೋಡಕೆ
ನಿನಗೆ ಸೋತ ಮೋದಕೆ

ಸಿಂಗರಿಸಿಕೊಂಡಳು ನೆಲದಾಕೆ
ತೊಟ್ಟು
ನಾ ಕೊಟ್ಟ ಹಸಿರು ಹಸಿ ರವಿಕೆ.

೮

ಮಳೆಯಾಗಿ ನೀನಿಳಿದ ಪರಿಗೆ
ಈ ಧರೆಗೆ ಸಂಪತ್ತು ಸಂಗೀತ ಸೊಲ್ಲು
ಇನ್ನು ಏನೂ ಹುಡುಕುವುದಿಲ್ಲ ಅಲ್ಲಿ
ಮಕ್ಕಳ ನಗೆಯಾಗಿ ಸುತ್ತಿರುವ ಮುತ್ತಿಡುವ
ನಿನ್ನ ಶಾಶ್ವತ ಕರುಣೆ. ನನ್ನ ಬಾಳು
ಎಳೆಗರುವಾಗಿ ಕುಡಿದಂತೆ ಹಾಲು
ಇಂದು ಅಂಗಳದ ಹುಲ್ಲು.

೯

ಹೌದು. ಮಳೆ ಇಲ್ಲೂ ಬಿದ್ದಿತ್ತು, ಗೆಳತಿ
ಮುದುಡಿದ ಹೂವಿಗೆ ನಗೆಯ ತೀಡಿತ್ತು,
ಚಂದ್ರನ ಮೋತಿಗೆ ಮೋಡವೇ ಮುತ್ತಿಟ್ಟು
ಜೋಗುಳ ಗುನುಗಿತ್ತು.
ಎಂದಿಗೂ ಮುಗಿಯದ ಎಲ್ಲೂ ಬರದಿದ್ದ
ಚಿಕ್ಕಿ ಕವನ ಗಾಳಿಗೆ ತಂಪಾಗಿ ಕಿವಿಯ ತುಂಬಿತ್ತು,
ನಾಡಿನ ಕನಸು ಕಂಡರಿಯದಂಥ ಚಿತ್ರ ಬಿಡಿಸಿತ್ತು
ಉದುರಿದ ಹನಿಯಂತೆ
ಹಣೆ ಬರಹ ಚಿಕ್ಕಿ ನಕ್ಕಷ್ಟೆ ಬದುಕು
ಸುಮ್ಮನೆ ನೆನದಿತ್ತು, ಗೆಳತಿ
ಇಲ್ಲೂ... ಹೌದು ಮಳೆ...

೧೦

ಚಿಕ್ಕವೋ ಚೊಕ್ಕವೋ ಸಿಕ್ಕವೋ
ಆಕಾಶ ಬೆಕ್ಕಬರಲು ಮಾಡಿ ಹುಡುಕಿದರೂ
ಸಿಗಲಿಲ್ಲ ಚಿಕ್ಕಿ, ನೆಂದ ಅಂಗಳದಾಗ
ತುಂಬ ತುಂಬಿ ಹೆಜ್ಜೆ ಹೆಜ್ಜೆಗೊಂದು ಗಿಡ ಹುಟ್ಟಿ
ಎಲೆಗೊಂದು ಹೂವರಳಿ ನಕ್ಕಿವೆ ಅವ್ವಾ...

೧೧

ಬಟಾ ಬಯಲು ಚೊಕ್ಕ ಆಕಾಶ
ಎಷ್ಟು ಹುಡುಕಿದರೂ ಚಿಕ್ಕ ನಕ್ಷತ್ರ
ಅವ್ವಾ
ನೀನಿಂದು ಕಾಣಲಿಲ್ಲ,
ಖರೆ ಅವರು ಹೇಳಿದ್ದು, ಮಾಡು
ಅದರ ಗೂಡು. ಸಿಗುವುದಿಲ್ಲ ನೋಡು
ಕಣ್ಣೀರು ಸುರಿಯೋದು ಬಿಡೋದಿಲ್ಲ.

೧೨

ಮಿನುಗತಿ ಹನಿ ಹನಿಯೊಳಗ ಜಿನುಗತಿ
ಅವ್ವಾ... ನನ್ನ ನರಳಿಕೆ ಬಳಲಿಕೆ ತೊಳಲಿಕೆಯೊಳಗ
ಅಡಗಿದೀ ಎಲ್ಲಾ ಇದ್ದದ್ದು ಏನೇನೇನೂ ಅಲ್ಲ
ಅನಿಸಿದಾಗ ನೀನs ಬರತೀ ಮತ್ತ ರಮಸತೀ

೧೩

ಬೆಳ್ಳನ ಕೂದಲಾ ಕರ್‍ರಗ ಮಾಡಿದಂಗ
ಕರ್‍ರನ ಮುಖಾ ಬೆಳ್ಳಗ ಮಾಡಾಕ
ಇಲ್ಲ ನೋಡು ಬಣ್ಣ,
ಬೆಳ್ಳಂದು ಕರ್‍ರಗಾದೀತು
ಕಪ್ಪಂದು ಬೆಳ್ಳಗಾಗಾಕ
ಬೆಳಕು ಬರಿ ಬಣ್ಣ ಅಲ್ಲೋ ಅಣ್ಣ...

೧೪

ನೆಂದ ನೆಲದಿಂದ ಕೊನರಿದಂತೆ ಚಿಗುರು
ಬೆಂದ ಮನದಿಂದ ಒಂದೊಂದು ಕವಿತೆ ಹಗುರು
ನೀಡೆಂದು ನಾ ಬೇಡಿ ಕೇಳಿದರು
ಅಂದಿನಂತೆಯೇ ಹಾಡ ಹಾಡುತ್ತಿರುವಿ ಓ ಗುರು
ನೊಂದ ಜೀವಕೆ ಬೇರೆ ಸಾಂತ್ವನವು ಬೇಕೆ?
ಯಾಕೆ? ಉಸಿರು.

೧೫

ನಿಮ್ಮ ನೆನಪೇ ಹೀಗೆ. ಹನಿ ಹನಿ
ಗುಂಟ ಇಳಿ
ಬಿದ್ದ ತಂಪು ಸೊಂಪಿನ ಹಾಗೆ
ಗೊತ್ತು ನನಗೆ
ನೆನೆದು ನೆಲ ಘಮ
ಘಮಿಸಿದಾಗೆಲ್ಲ ನಿಮ್ಮ ಹೆಜ್ಜೆ
ಸುತ್ತಲೂ ಕದಲಿದ ಕೃಷ್ಣ ಲೀಲೆ
ಯಲಿ ರಾಧೆಯ ಗೆಜ್ಜೆ.

೧೬

ಯಾವ ಮೋಡ ತಾ ಕನಿಕರಿಸಿ ಹನಿಗೂಡಿತೋ
ಇಲ್ಲೊಂದು ಬೀಜ ನೆಲದೆದೆಯ ಸೀಳಿ ಅದು ಹೇಗೆ
ಚಿಗುರೊಡೆದು ಹೂ ಅರಳಿತೋ?
ಮಳೆ ಹೂವು ನೀ
ನಿರುವುದಕ್ಕೆ ಜೀವ ಜೀವದ ಸಾಲು
ಜೀವಿಸುವ ಅಹವಾಲು.

೧೭

ಉದ್ದೋಽಕ ಒಂದ ಗೆರಿ ಎಳದ್ಹಂಗ
ಇಲ್ಲ ಇಳಿಯೂದಿಲ್ಲ ಮಳಿ

ಮುಗಿಲ್ನಿಂದ ಉದರೂದು ಒಂದೊಂದs ಹನಿ,
ಅದs ನೋಡು ಒಂದಾಗಿ ಇರೂದಂದ್ರ ;
ಒಂದರೊಳಗ ಇನ್ನೊಂದು ಇರಬೇಕು,
ಒಂದೊಂದು ಇನ್ನೊಂದು ಒಂದಾಗಿ ಇರಬೇಕು
ಯಾರಿಗೂ ಕಾಣದ್ಹಂಗ
ಝುಮಝುಮರು ಮುಂಜಾನೆ
ಬೆಳಗಿನೊಳಗ ಬೆಳಕ ಸೇರಿ
ಬೆಳಗಬೇಕು
ಉದೋsಕ ಒಂದ ಗೆರಿ ಎಳದ್ಹಂಗ.

೧೮

ಬಸಿರಾಗದ ಗಂಡಿನಿಂದ ಇನ್ನೆಂಥ ವಂಶೋದ್ಧಾರ?
ಕಾಳು ಕಾಳಿನೊಳಗ ತೆನಿ ತುಂಬ ಮಕ್ಕಳು
ಚಿರಾಯುವಾಗಲಿ ಹಸಿರ ಹೆಣ್ಣು ಶ್ರಾವಣ ಸಂತಾನ.

೧೯

ಬೆಚ್ಚನೆ ಹಾಸಿಗೆಯಲ್ಲಿರುವುದು
ಜೊತೆಯಲ್ಲಿ ನೆನಪುಗಳ ರಾಶಿ ರಾಶಿ ಹೂವು,
ದಿಂಬಿನಂಚೇಕೊ ತೊಯ್ದಿಹುದು
ಗೊತ್ತಿಲ್ಲ ಯಾರು ಹೊಲಿದರೊ
ಅರಿವೆಯೊಳಗೆ ತುಂಬಿ ತುಂಬಿ ನೋವು...

೨೦

ಬಸವಳಿದ ಜೀವಕ್ಕೆ ಕರಗಿ ಕರುಣಿಸಿದಿ ಗಂಗೆಯಾದೆ
ಮಕ್ಕಳ ಬದುಕು ಹಸನಾಗಿರಲೆಂದು
ಗಡಿಯುದ್ದಕ್ಕೂ ವೈರಿ
ಗಳ ಎದೆ ನಡುಗಿಸುವ ಭದ್ರ ಕೋಟೆಯಾದೆ,
ಆಶೀರ್ವದಿಸು, ಹಿಮವಂತ,
ನಿನ್ನಂತೆ ನಾನೂ ಆಗುವಂತೆ.

೨೧

ನಡೆದಷ್ಟು ದೂರ ನಡೆಯಬೇಕಾದ ಹಾದಿ,
ಕಾಲಿಗಷ್ಟೇ ನೋವಂತೆ, ಯಾಕೆ
ತುಳಿಸಿಕೊಂಡ ನೆಲಕಿಲ್ಲವೇ? ಹುಲ್ಲಿಗಿಲ್ಲವೇ ವ್ಯಾಧಿ?
ಇರುವೆ
ನಾಳೆ ಕೂಡ ಇಂದಿನಂತೆ
ಮಣ್ಣಾಗುವ ಹಾದಿ ಮೇಲೆ ಪರಿಮಳ ಹೂವಿನೊಳಗೆ
ಯಾಕೆ ಗೊತ್ತೆ?
ಕೈಯಲ್ಲಿ ನಿಮ್ಮ ಕವಿತೆ ಎಂದಿನಂತೆ.

✦ **ಎಂ. ರಾಜ್‌ಕುಮಾರ್**, C/o ಸುಮಾ ರಾಜ್‌ಕುಮಾರ್, ಎಸ್.ಟಿ.ಡಿ. ಕೇಂದ್ರ,
ಕಾವೇರಿ ವಿದ್ಯಾರ್ಥಿನಿ ನಿಲಯ, ಕೆ.ಸಿ.ಡಿ. ಆವರಣ, ಧಾರವಾಡ – ೫೮೦ ೦೦೧ ✦

'ಒಡೆಯಲಾರದ ಪ್ರತಿಮೆ' : 'ಪರಿಶೀಲನೆ' ಯ ಪರಿಶೀಲನೆ

ಬಸವರಾಜ ವಕ್ಕುಂದ

ಸಂಕಲನ-೪೦ ರಲ್ಲಿ ಪ್ರಕಟವಾದ ನನ್ನ 'ಒಡೆಯಲಾರದ ಪ್ರತಿಮೆ' ಕವನ ಸಂಕಲನದ ಬಗ್ಗೆ ಆರ್. ತಾರಿಣಿ ಶುಭದಾಯಿನಿಯವರು ಬರೆದಿರುವ ಪುಸ್ತಕ ಪರಿಶೀಲನೆ ಕುರಿತು ಈ ಪ್ರತಿಕ್ರಿಯೆ. ಇಂದಿನ ಬಹಳಷ್ಟು ಪುಸ್ತಕ ಪರಿಚಯ-ಪರಿಶೀಲನೆ-ವಿಮರ್ಶೆಗಳ ಮುಖ್ಯ ವೈಪರೀತ್ಯಗಳಿಗೆ ಈ ಪುಟ್ಟ ಬರಹ ನಿದರ್ಶನವಾಗಿರುವುದರಿಂದ ಇದನ್ನು ಬರೆಯುವುದು ಅನಿವಾರ್ಯವೆನಿಸುತ್ತಿದೆ.

"ನವ್ಯದ ಕಾಲದಲ್ಲಿ ಪ್ರಚಲಿತವಿದ್ದ ಒಡೆದ ಪ್ರತಿಮೆಗಳು ಈ ಕವಿಗೆ ಇಷ್ಟವಾಗಿಲ್ಲ. ಒಟ್ಟು ಶಿಲ್ಪದ, ಒಟ್ಟಂದದ ಪರಂಪರೆಯ ಹರವು ಎಂದು ಇವರ ತಿಳಿವಳಿಕೆ" ಎಂದು ಆರಂಭವಾಗುವ ಶುಭದಾಯಿನಿಯವರ ಪರಿಶೀಲನೆ "ಈ ಸಂಕಲನದ ಕವಿತೆಗಳು ಬಹುತೇಕ ಇದೇ ಮಾರ್ಗದಲ್ಲಿ ಸಾಗುತ್ತವೆ. ಒಳ್ಳೆಯತನಕ್ಕಾಗಿ ಕಾತರಿಸುವ ಅವರ ಕವಿತೆಗಳ ಮನಸ್ಸೇನೋ ಒಳ್ಳೆಯದೇ. ಆದರೆ ಈ ಕಾಲದ ಹಿಂಸೆಗಳು, ಅನೂಹ್ಯ ನೋವುಗಳನ್ನು ಅವು ಆಳವಾಗಿ ದಾಖಲಿಸುವುದಿಲ್ಲವಲ್ಲ ಎಂದು ಅನ್ನಿಸಿಬಿಡುತ್ತದೆ. ಒಡೆದ ಪ್ರತಿಮೆಗಳ ದಾರಿ ಬೇಡ ಎಂದು ನವೋದಯದ ಆದರ್ಶದ ಹಾದಿ ಹಿಡಿದಿರುವುದು ಮತ್ತೆ ಎಲ್ಲೋ ಒಂದೆಡೆ ಹಿಂದಕ್ಕೆ ಚಲಿಸಿದಂತೆ ಆಗಲಿಲ್ಲವೆ? ಹಾಗೇ ಕವಿಯು ಕೊಟ್ಟ ಹೊಸ ಕೊಡುಗೆಯೇನು ಎಂಬ ಪ್ರಶ್ನೆಯೂ ಇಲ್ಲಿ ಕಾಡುತ್ತದೆ" ಎಂಬ ತೀರ್ಪುಗಳಲ್ಲಿ ಮುಕ್ತಾಯವಾಗಿದೆ.

ಇಲ್ಲಿ ಒಡೆದ ಪ್ರತಿಮೆಗಳು ನನಗೆ ಇಷ್ಟವಾಗಿಲ್ಲ ಎಂದು ಹೇಳುವ ಶುಭದಾಯಿನಿಯವರು 'ಒಡೆಯಲಾರದ ಪ್ರತಿಮೆ' ಎಂಬುದನ್ನು 'ಒಟ್ಟು ಶಿಲ್ಪದ ಒಟ್ಟಂದದ ಪರಂರೆಯ ಹರವು' ಎಂದು ನಾನು ತಿಳಿದಿದ್ದೇನೆ ಎಂದು ಕಲ್ಪಿಸುತ್ತಾರೆ. ಒಡೆದ ಪ್ರತಿಮೆ ನವ್ಯದಾದ್ದರೆ ಒಡೆಯಲಾರದ ಪ್ರತಿಮೆ ನವೋದಯಕ್ಕೆ ಸಂಬಂಧಪಟ್ಟದ್ದೆಂಬ ಮತ್ತೊಂದು ಕಲ್ಪನೆಯನ್ನು ಇದಕ್ಕೆ ಜೋಡಿಸಿಕೊಂಡು ಇದು 'ಹಿಂದಕ್ಕೆ ಚಲಿಸಿದಂತೆ ಆಗಲಿಲ್ಲವೇ?' ಎಂಬ ಪ್ರಶ್ನೆಯನ್ನು ಕೇಳುತ್ತಾರೆ. 'ಒಡೆಯಲಾರದ ಪ್ರತಿಮೆ' ಎಂಬ ರೂಪಕ ಮೊದಲು ಜ್ಞಾಪಿಸುವುದೇ ಒಡೆದ ಪ್ರತಿಮೆಗಳನ್ನು, ಹಾಗೆ ಒಡೆದವುಗಳನ್ನು ಸಂಯೋಜಿಸುವ ಸಾಧ್ಯತೆಗಳ ಕುರಿತು ಚಿಂತಿಸುವ ನನ್ನ ಕವಿತೆಗಳು ದಲಿತ-ಬಂಡಾಯಗಳ ಜನಪರ ವೈಚಾರಿಕ ಅಗ್ನಿದಿವ್ಯದಲ್ಲಿ ಹಾದು ಬಂದಿವೆ. ಹೀಗಿರುವಾಗ 'ಒಡೆದ ಪ್ರತಿಮೆಗಳ ದಾರಿ ಬೇಡವೆಂದು ನವೋದಯದ ಆದರ್ಶದ ಹಾದಿ ಹಿಡಿದಿರುವುದು' ಎಂಬ ಮಾತಿನ ಅರ್ಥವೇನು? ಒಡೆಯಲಾರದ ಪ್ರತಿಮೆಗೆ ನವೋದಯದ ಹಾದಿ ಎಂಬ ಅರ್ಥ ಯಾವ ಕೋಶದಲ್ಲಿದೆಯೋ ಶುಭದಾಯಿನಿಯವರೇ ಹೇಳಬೇಕು.

ನವೋದಯದವರು ಈ ಶತಮಾನದ ಕನ್ನಡ ಕಾವ್ಯಕ್ಕೆ ಬಹು ಮುಖ್ಯ ಕೊಡುಗೆ ನೀಡಿದ್ದು ತಿಳಿದ ಸಂಗತಿ. ಸಾಂಸ್ಕೃತಿಕ ಪುನರುಜ್ಜೀವನ ಎಂಬ ಅರ್ಥಕ್ಕೆ ಸಮಾನವಾದ ನವೋದಯ ಎಂಬ ಪದವನ್ನು ಬಳಸಿ ಅದಕ್ಕೆ ಸೂಕ್ತವೆನಿಸುವ ಸಮೃದ್ಧ ರಚನೆಗಳನ್ನವರು ನೀಡಿರುವದು ಇಂದಿಗೂ ಅದರ ಪ್ರಭಾವ ಒಟ್ಟು ಕನ್ನಡ ಕಾವ್ಯದ ಮೇಲೆ ಆಗುತ್ತಿರುವುದು ಗೊತ್ತಿರುವ ವಿಷಯವೇ. ಈ ನೆಲೆಯಿಂದ ನವೋದಯದವರ ಬಗ್ಗೆ ನನಗೆ ಅಪಾರ ಗೌರವವಿದೆ. ನವ್ಯರು ಆರಂಭದಲ್ಲಿ 'ಹಳೆಮನೆ ಮಂದಿ' ಎಂಬ ಲೇವಡಿಯ ಮೂಲಕ ಅವರನ್ನು ಗುರುತಿಸಿ ಅವರ ಕಾವ್ಯ ಹುಸಿ ಕನಸು ಆದರ್ಶಪ್ರಿಯತೆಗಳನ್ನು ಆರಾಧಿಸುತ್ತವೆ

ಎಂಬುದಕ್ಕೆ ಒತ್ತು ಕೊಟ್ಟರು. ಒಂದು ಕಾಲಕ್ಕೆ ಈ ಸಂಘರ್ಷದ ಅಗತ್ಯ ಇದ್ದಿತಾದರೂ ನವ್ಯದ ಕೊನೆಯ ದಿನಗಳಲ್ಲಿ ನವೋದಯದ ಕುರಿತು ಅವರ ಆರಂಭದ ಕಟುತ್ವವನ್ನು ಉಳಿಸಿಕೊಳ್ಳಲಿಲ್ಲ. ಸ್ವತಃ ಅಡಿಗರೇ ಬೇಂದ್ರೆಯವರನ್ನು ಯುಗದ ಕವಿ ಎಂದು ಕರೆದರು. ನವ್ಯರೇ ಉಳಿಸಿಕೊಳ್ಳದ ಆ ದೃಷ್ಟಿಕೋನವನ್ನು ಶುಭದಾಯಿನಿಯವರು ನವ್ಯೋತ್ತರದ ೩-೪ ದಶಕಗಳ ನಂತರ ಬಳಸುತ್ತಿರುವುದು ಹಿಂದಕ್ಕೆ ಚಲಿಸಿದಂತೆ ಅಲ್ಲವೇ? ಇಂದು ನವೋದಯ, ನವ್ಯ, ಪ್ರಗತಿಶೀಲ, ದಲಿತ ಬಂಡಾಯ ಎಂಬ ವರ್ಗೀಕರಣದ ಚರ್ವಣವನ್ನು ಮೀರಿ ಕನ್ನಡ ವಿಮರ್ಶೆ ಹೊಸ ನೆಲೆಗಳ ಶೋಧದಲ್ಲಿ ತೊಡಗಿರುವುದು ಇವರ ಗಮನಕ್ಕೆ ಬಂದಿಲ್ಲವೇಕೆ? ಅಷ್ಟಾಗಿಯೂ ಹೃದಯದ, ಹೃದಯವಂತಿಕೆಯ ಮೂಲಕ ಪ್ರವೇಶಿಸಿದರೆ ಮಾತ್ರ ಕಾವ್ಯ ತನ್ನ ಸೂಕ್ಷ್ಮಗಳನ್ನು ಬಿಟ್ಟು ಕೊಡುತ್ತದೆಯೇ ಹೊರತು ಕೇವಲ ಬುದ್ಧಿ ಪಾಂಡಿತ್ಯಗಳಿಗೆ ಹಾಗೂ ಪೂರ್ವಗ್ರಹಿಕೆಗಳಿಗಲ್ಲ ಎಂಬುದು ಸ್ವತಃ ಕವಯಿತ್ರಿಯೂ ಆಗಿರುವ ಶುಭದಾಯಿನಿಯವರಿಗೆ ತಿಳಿಯದ ಸಂಗತಿಯೇನಲ್ಲ.

'ಪ್ರತಿಮೆ'ಯು ಕುರಿತು ಪಾರಿಭಾಷಿಕ, ತಾಂತ್ರಿಕ ಅರ್ಥಗಳನ್ನು ಮಾತ್ರ ಶುಭದಾಯಿನಿಯವರು ಗಮನಿಸಿದಂತಿದ್ದು 'ಒಟ್ಟು ಶಿಲ್ಪದ ಒಟ್ಟಂದದ ಪರಂಪರೆಯ ಹರವು' ಎಂಬಂತಹ ಗೊಂದಲಮಯ ಮಾತುಗಳನ್ನು ಅವರು ಬರೆಯಲು ಕಾರಣವಾದಂತಿದೆ. ಪ್ರತಿಮೆ ಪದ ನವೋದಯ, ನವ್ಯ ಹಾಗೂ ನವ್ಯೋತ್ತರದಲ್ಲಿ ಪಡೆದುಕೊಂಡ ಅರ್ಥವ್ಯಾಪ್ತಿ ಹಾಗೂ ಭಿನ್ನ ಆಯಾಮಗಳನ್ನು ಒಂದು ಖಚಿತ ಸಂದರ್ಭದಲ್ಲಿ ಶೋಧಿಸಿಕೊಳ್ಳುವ ಪ್ರಯತ್ನ ಈ ಕವಿತೆಯಲ್ಲಿದೆ. ಅಫಘಾನಿಸ್ತಾನದಲ್ಲಿ ಬುದ್ಧನ ಮೂರ್ತಿಗಳನ್ನು ಒಡೆಯಲಾದ ಸಂದರ್ಭ ಈ ಕವಿತೆಯ ಹಿಂದಿನ ವರ್ತಮಾನದ ಪ್ರೇರಣೆ. ಈ ಸಂದರ್ಭವನ್ನು ಕೇಂದ್ರವಾಗಿಟ್ಟುಕೊಂಡು ಇಂದು ಜಗತ್ತನ್ನು ತಲ್ಲಣಗೊಳಿಸುತ್ತಿರುವ ಭಯೋತ್ಪಾದನೆ ಹಾಗೂ ಮೂಲಭೂತವಾದಗಳ ನಿರರ್ಥಕತೆ ಹಾಗೂ ಅವುಗಳನ್ನು ಧಿಕ್ಕರಿಸಿ ಮುನ್ನಡೆಯಬೇಕಾದ ಮಾನವೀಯ ನೆಲೆಗಳನ್ನು ಅದರೆಲ್ಲ ಜ್ವಲಂತತೆಗಳೊಂದಿಗೆ ಈ ಕವಿತೆ ಶೋಧಿಸುತ್ತದೆ ಎಂದುಕೊಂಡಿದ್ದೇನೆ. ಡಾ. ಗುರುಲಿಂಗ ಕಾಪಸೆ, ಮಾರುತಿ ರಾವ್ ಹಾಗೂ ಕುಂವೀಯಂತಹ ಪ್ರಾಜ್ಞರು ಈ ಅರ್ಥವನ್ನೇ ಗ್ರಹಿಸಿ ಪತ್ರ ಬರೆದಿದ್ದಾರೆ. ಇವುಗಳಲ್ಲಿ ಎರಡು ಪತ್ರಗಳು ಇದೇ 'ಸಂಕಲನ'ದಲ್ಲಿ ಈ ಕವಿತೆ ಪ್ರಕಟಗೊಂಡ ನಂತರದ ಸಂಚಿಕೆಯಲ್ಲಿ ಪ್ರಕಟಗೊಂಡಿವೆ.

ಮೂರ್ತಿಗಳನ್ನು ಒಡೆದರೆ ಪ್ರತಿಮೆಗೆ ನಷ್ಟವಿಲ್ಲ
ಆದರೆ ಮೂರ್ತಿಗಳು ಕಲಕುವ ರಕ್ತ ತಿಳಿಯಾಗುವುದು ನೀರಿನಷ್ಟು ಸುಲಭವಲ್ಲ
ಯಾಕೆಂದರೆ ಜೀವಗಳು ಆಗ ಕುದಿವ ಸುಣ್ಣದ ಕಲ್ಲು

ಇಂಥ ತಳಮಳಗಳು ಭಾರತದ ಸಂದರ್ಭದಲ್ಲಿ ಅಂಬೇಡ್ಕರ್ ಮೂರ್ತಿ, ಗಾಂಧೀ ಮೂರ್ತಿ, ಬಾಬ್ರೀ ಮಸೀದಿ ಮುಂತಾದವುಗಳ ನೆನಪನ್ನು ತಂದುಕೊಡಬಲ್ಲವು. ಕವಿತೆಯ ಈ ಸಾಮಾನ್ಯ ವಿವರಗಳನ್ನು ಗಮನಿಸದೆ 'ಈ ಕಾಲದ ಹಿಂಸೆಗಳು, ಅನೂಹ್ಯ ನೋವುಗಳನ್ನು ಅವು ಆಳವಾಗಿ ದಾಖಲಿಸುವುದಿಲ್ಲವಲ್ಲ ಅನ್ನಿಸಿಬಿಡುತ್ತದೆ' ಎಂಬ ದೊಡ್ಡ ಪದಗಳ ಚಪಲ ಚಾತುರ್ಯಗಳಿಗೆ ಲೇಖಕಿ ಒಳಗಾಗಿರುವುದನ್ನು ಗಮನಿಸಿದರೆ ಇವರು ಪದ್ಯಗಳನ್ನು ಓದುವ ಗೋಜಿಗೆ ಹೋದಂತಿಲ್ಲ ಎಂಬ ಅಂಶ ಸ್ಪಷ್ಟವಾಗುತ್ತದೆ. ವ್ಯಕ್ತಿ, ಸಮಾಜ ಹಾಗೂ ವಿಶ್ವದ ಭಿನ್ನ ಸ್ತರಗಳಲ್ಲಿ ನಡೆಯುತ್ತಿರುವ ಇಂದಿನ ಎಲ್ಲ ಬಗೆಯ ಕ್ರೌರ್ಯ ತಳಮಳಗಳನ್ನು ಕುರಿತು ಇಲ್ಲಿ ಅನೇಕ ಪದ್ಯಗಳು ಮಾತಾಡುತ್ತವೆ. ಇನ್ನೂ ಮುಂದುವರಿದು ಇವರು

'ಪ್ಲೇಟೋನ ಆದರ್ಶ ಪ್ರತಿಮೆ ಸಿದ್ಧಾಂತವನ್ನು ಅರಿಯುವ ಸಾಧ್ಯತೆಯೂ ಹೌದು' ಎಂಬಂತಹ ಬಾಲಿಶ ಮಾತುಗಳನ್ನು ಇಲ್ಲಿ ಜೋಡಿಸಿದ್ದಾರೆ. 'ಆದರ್ಶವು ವಕ್ಕುಂದ ಅವರನ್ನು ಕಾಡಿದೆ. ನಾಡಪ್ರೇಮದಿಂದ ಹಿಡಿದು ಕ್ರಾಂತಿಯ ತನಕ ಅವರು ಈ ಭಾವದಿಂದ ಮಿಡಿಯುತ್ತಾರೆ' ಎಂಬ ಗ್ರಹಿಕೆಗೆ ಅವರು ಉಲ್ಲೇಖಿಸಿರುವ ಪದ್ಯಗಳನ್ನು ಗಮನಿಸಿದರೆ ಅವರು ಖಂಡಿತವಾಗಿ ಆ ಕವಿತೆಗಳನ್ನು ಇಡಿಯಾಗಿ ಓದಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

'ಕನ್ನಡದ ಸುವರ್ಣ' ಎಂಬ ಪದ್ಯ ಆದರ್ಶಗಳನ್ನು ಹಾಗೂ ನಾಡಿನ ವೈಭವಗಳನ್ನು ಬಣ್ಣಿಸುವ ನವೋದಯದ ಧಾಟಿಯ ಪದ್ಯವೆಂದು ಅವರು ತೀರ್ಮಾನಕ್ಕೆ ಬರಲು ಕಾರಣ ಬಹುಶಃ ಮೊದಲಿನ ಎರಡು ನುಡಿಗಳಿರಬೇಕು. ಮೂರನೆಯ ನುಡಿಯಿಂದ ಕೊನೆಯ ಸಾಲಿನ ವರೆಗೆ ಈ ವೈಭವದ ವಿಡಂಬನೆ ಹಾಗೂ ಇಂದು ಕರ್ನಾಟಕ (ಹಾಗೇ ಭಾರತ) ಎದುರಿಸುತ್ತಿರುವ ಜಾಗತೀಕರಣದ ಹಿನ್ನೆಲೆಯ ತಳಮಳಗಳನ್ನು ಚಿತ್ರಿಸಲಾಗಿರುವುದನ್ನು ಇವರು ಗಮನಿಸದೆ ಇಡೀ ಕವಿತೆಗೆ ನವ್ಯದ ಕನ್ನಡಕದ ಮೂಲಕ ಕಂಡ ನವೋದಯದ ಲೇಬಲ್ ಅಂಟಿಸುವ ಕೆಲಸ ಮಾಡುತ್ತಾರೆ.

ಅಂತರ್ಜಾಲದಲಿ ವ್ಯಾಪಾರ ವಹಿವಾಟು/ ಈ ನೆಲದ ಬೆವರಿನಲಿ ಬೆಳೆಯನೆತ್ತುವರು
ನೇಣಿನಲಿ ಪ್ರಾಣಗಳ ಕಳೆದುಕೊಳ್ಳುತ್ತಿರುವ / ಕನಸುಗಳು ತಲೆಯೆತ್ತಿ ಬಾಳಬೇಕು
ಹೊರಗಿನ ಭೂತಗಳು ಒಳಗಿನ ಹೆಗ್ಗಣ / ಇಬ್ಬರಿಗು ಈ ನಾಡು ಬಂಗಾರ ತತ್ತಿ

'ಕನ್ನಡದ ಸುವರ್ಣ' 'ಬಂಗಾರ ತತ್ತಿ' ಆಗುತ್ತಿರುವ ವಿಷಾದಪೂರ್ಣ ಪ್ರಕ್ರಿಯೆಯಲ್ಲಿ ಹಿಂಸೆ ನೋವುಗಳು ಕಾಣಿಸದೆ 'ಆದರ್ಶ' ಮಾತ್ರ ಕಂಡದ್ದು ಹೇಗೆ ಮತ್ತು ಏಕೆ? ಎಂಬ ಗುಮಾನಿ ಸಹಜವಲ್ಲವೇ?

'ಕೆಂಪು ಟೊಮೆಟೊಗಳಿಗೆ' ಎಂಬ ಪದ್ಯ ಅಮೆರಿಕಾ ಹಾಗೂ ಐರೋಪ್ಯ ರಾಷ್ಟ್ರಗಳ ಜಾಗತೀಕರಣದ ಸಾಂಸ್ಕೃತಿಕ ಆಕ್ರಮಣಗಳನ್ನು ಸರಳ ನಿರೂಪಣೆಯಲ್ಲಿ ವಿಡಂಬಿಸುತ್ತ ಬಿಂಬಿಸುವ ಕವಿತೆ. ಅದು ಭಾರತೀಯ ದೇಶಿಯ ನೆಲೆಗಳನ್ನು ಲಘು ವಿಡಂಬನೆಯ ಮೂಲಕವೇ ಗುರುತಿಸುತ್ತ ನಮ್ಮ ನೆಲದ ಸತ್ವ ಎಲ್ಲ ಬಗೆಯ ಆಕ್ರಮಣಗಳನ್ನು ಎದುರಿಸಲು ಸಮರ್ಥವಾಗಿದೆ ಎಂಬ ಆಶಯದಿಂದ ಕೂಡಿದೆ. ಇಂಥ ಪದ್ಯದಲ್ಲಿ ನವೋದಯದ ಯಾವ ಆದರ್ಶವನ್ನು ಕಂಡರೋ ಅವರೇ ವಿವರಿಸಬೇಕು. ಸಾಂಸ್ಕೃತಿಕ ಪುನರ್ನಿರ್ಮಾಣದ ಆದರ್ಶ ನವೋದಯದವರಿಗಿತ್ತೆಂಬುದು ನನಗೆ ಗೊತ್ತಿದ್ದು ಅಂಥ ಸಕಾರಾತ್ಮಕ ನೆಲೆಯಲ್ಲಿ ಗ್ರಹಿಸುವುದಾದರೆ ನನ್ನ ಸಹಮತ ಇದ್ದೇ ಇದೆ. ಆದರೆ ನವೋದಯದ ಆದರ್ಶ ಹುಸಿ ಎಂಬ ನವ್ಯರ ನಕಾರಾತ್ಮಕ ದೃಷ್ಟಿಯ ಗ್ರಹಿಕೆ ಇಂಥ ಸಂದರ್ಭದಲ್ಲಿ ಅನ್ವಯವಾಗದೆಂಬುದು ನನ್ನ ವಾದ. 'ಕೆಂಪು ಟೊಮೆಟೊಗಳಿಗೆ' ಕವಿತೆಯ ಈ ಸಾಲುಗಳನ್ನು ಗಮನಿಸಬಹುದು:

ಕೆಂಪು ಕೆನ್ನೆಯ ಟೊಮೆಟೊಗಳೇ / ನಿಮಗೆ ಬೀಜವಾಗುವ ಶಕ್ತಿಯೇ ಇಲ್ಲ
ನಮ್ಮ ಜವಾರಿ ಬೀಜಗಳ ಕೊಲ್ಲುವ ಶಕ್ತಿ ಕೂಡ / ಖಂಡಿತ ಇಲ್ಲ ನಿಮಗೆ
ನಾವು ಅನ್ನಕ್ಕೆ ಹಸಿದಿರಬಹುದು / ವಯಾಗ್ರ ಅಗತ್ಯ ಎಂದೂ ಬಿದ್ದಿಲ್ಲ
ಮಾರುಕಟ್ಟೆಯ ನಿಮ್ಮ ಮೂರಾಬಟ್ಟೆ ದಾರಿಗಳಲ್ಲಿ
ನಾವು ತಪ್ಪಿಸಿಕೊಳ್ಳುವುದಿಲ್ಲ ಬಣ್ಣದ ಜಿಂಕೆಯ ಬಲೆಗೆ ಸಿಲುಕುವುದಿಲ್ಲ
ನಿಮ್ಮ ಸಹವಾಸದಲ್ಲಿ ನಮ್ಮನ್ನು ಬೀಜರಹಿತರನ್ನಾಗಿಸದೆ
ನಮ್ಮ ಸಹವಾಸದಲ್ಲಿ ನೀವೂ ಬೀಜಸಹಿತರಾಗಿ

'ನಿಶ್ಚಿಂತವಾಗಿರಿ' ಎಂಬ ಪದ್ಯದಲ್ಲಿ ಕ್ರಾಂತಿ-ಬಂಡಾಯಗಳ ಸೋಗಲಾಡಿತನಗಳನ್ನು

ಕಟುವಾಗಿ ವಿಡಂಬಿಸಲಾಗಿದೆ. ಇದನ್ನು ಕೂಡ ಅವರು ಇನ್ನೇನು ಕ್ರಾಂತಿ ಆಗಿಬಿಡುತ್ತದೆ ಎಂದು ನಾನು ನಂಬಿಕೊಂಡು ಈ ಕವಿತೆ ಬರೆದಿರುವೆನೇನೋ ಎಂಬಂತಹ ರೀತಿಯಲ್ಲಿ ಬರೆಯುತ್ತಾರೆ. ಈ ಎಲ್ಲ ವಿವರಗಳನ್ನು ಗಮನಿಸಿದರೆ ಶುಭದಾಯಿನಿಯವರು ಪದ್ಯದ ಶೀರ್ಷಿಕೆ, ಒಂದೆರಡು ಸಾಲು ಅಥವಾ ಒಂದೆರಡು ನುಡಿಗಳನ್ನು ಓದಿ ಒಟ್ಟು ಕವಿತೆಗಳ ಬಗ್ಗೆ ಗೊಂದಲಮಯ ಬೀಸು ಹೇಳಿಕೆಗಳನ್ನು, ತೀರ್ಮಾನಗಳನ್ನು ನೀಡುತ್ತಾರೆ ಎಂಬುದು ಸ್ಪಷ್ಟವಾಗುತ್ತದೆ.

ಪರಂಪರೆಯ ಸತ್ವಗಳನ್ನು ಜೀರ್ಣಿಸಿಕೊಂಡು ವರ್ತಮಾನದ ಸಂದರ್ಭಗಳಲ್ಲಿ ಪುನರ್‌ಶೋಧಕ್ಕೆ ಗುರಿಪಡಿಸುವುದು 'ಹಿಂದಕ್ಕೆ ಚಲಿಸು'ವಂತಹದಲ್ಲ ಎಂಬುದನ್ನು ಒಟ್ಟು ಕಾವ್ಯ ಪರಂಪರೆಯ ನನ್ನ ಓದಿನ ಮಿತಿಯಲ್ಲಿ ನಾನು ಗ್ರಹಿಸಿಕೊಂಡಿದ್ದೇನೆ. ಪರಂಪರೆಯ ಚಲನೆ ಸೃಜನಶೀಲತೆಯಲ್ಲಿ ಅಳವಡುವುದು ಹಿಂದೆ-ಮುಂದೆ ಎಂಬ ಸರಳ ರೇಖಾತ್ಮಕವಾಗಿ ಅಲ್ಲ, ಅದು ಆವರ್ತನ ಮಾದರಿಯದು. ಕನಸು-ವಾಸ್ತವ, ವರ್ತಮಾನ-ಚರಿತ್ರೆ, ಆಧುನಿಕತೆ ಪರಂಪರೆ ಮುಂತಾದವುಗಳ ಮುಖಾಮುಖಿಯಲ್ಲಿ ಸಮಕಾಲೀನ ಪ್ರಜ್ಞೆ ಹರಳುಗಟ್ಟುತ್ತದೆ ಎಂದು ನಾನು ನಾಡಿನ ಚಿಂತಕರಿಂದ ಕಲಿತಿದ್ದೇನೆ. ಆ ನಿಟ್ಟಿನಲ್ಲಿ ನನ್ನ ಅಭಿವ್ಯಕ್ತಿಯನ್ನು ನನ್ನ ಅನುಭವಗಳ ಕಕ್ಷೆಯಲ್ಲಿ ರೂಢಿಸಿಕೊಳ್ಳಲು ಹವಣಿಸಿದ್ದೇನೆ. ನಿಂತ ಹೆಜ್ಜೆಗೆ ಹಿಂದಣ ಹೆಜ್ಜೆಯ ಅಗತ್ಯ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಅಂಗೀಕಾರಗೊಂಡ ಬಹುಮಹತ್ವದ ಡೈಯಲೆಕ್ಟಿಕಲ್ ಚಿಂತನೆಯ ಮಾದರಿಯೆಂಬುದು ಸಮಕಾಲೀನ ಸಂದರ್ಭದಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಗಂಭೀರವಾಗಿ ತೊಡಗಿಸಿಕೊಂಡವರಿಗೆ ತಿಳಿದ ಸಂಗತಿಯೇ.

ಕೊನೆಯದಾಗಿ, ಶುಭದಾಯಿನಿಯವರು 'ಕವಿಯು ಕೊಟ್ಟ ಹೊಸ ಕೊಡುಗೆಯೇನು ಎಂಬ ಪ್ರಶ್ನೆಯೂ ಇಲ್ಲಿ ಕಾಡುತ್ತದೆ' ಎಂಬ ಮಾತಿನೊಂದಿಗೆ ಆರಂಭದ ಸಾಲುಗಳಲ್ಲಿಯೇ ನಿಯೋಜಿಸಿ ಕೊಂಡಂತಿರುವ ಅಂತಿಮ ತೀರ್ಪನ್ನು ಬರೆಯುತ್ತಾರೆ. ಕವಿಯೊಬ್ಬನ ಹೊಸ ಕೊಡುಗೆ ಏನು ಎಂಬುದನ್ನು ನಿಸ್ಪೃಹ ಮನಸ್ಸಿನ ಪ್ರಾಜ್ಞರು, ಸಹೃದಯರು ಹಾಗೂ ಕಾಲ ತೀರ್ಮಾನಿಸುತ್ತವೆ ಎಂಬ ನಂಬಿಕೆಯೇ ನಾನು ಇಂದಿಗೂ ಬರವಣಿಗೆಯನ್ನು ಬದುಕಿನಷ್ಟೇ ಪ್ರೀತಿಸಲು ಕಾರಣವಾಗಿದೆ. ಪಠ್ಯವನ್ನು ಓದದೆ ಅಥವಾ ಯಾವುದೋ ಪೂರ್ವಗ್ರಹಿಕೆಗಳ ಕೃತಕ ಗಾಜಿನ ಮೂಲಕ ತೀರ್ಪುಗಳನ್ನು ನೀಡಿ ಬರಹಗಾರರನ್ನು ಏಳಿಸುವ-ಬೀಳಿಸುವ ಹುನ್ನಾರಿನ ವಿಮರ್ಶೆ- ಪರಿಶೀಲನೆ-ಪರಿಚಯಗಳ ನಾಟಕಗಳೂ ಕೂಡ ಒಂದು ಸಲ ಕಾಲನ ಅಗ್ನಿದಿವ್ಯಕ್ಕೆ ಗುರಿಯಾಗಿ ಬಣ್ಣ ಕಳಚಲೇಬೇಕು ಹಾಗೂ ಅಂತಹ ಬರಹಗಳ ಕೊಡುಗೆಗಳೇನು ಅಪಾಯಗಳೇನು ಎಂಬುದು ಜನಸಮ್ಮುಖಗೊಳ್ಳಲೇಬೇಕು ಎಂಬ ಭರವಸೆಯೂ ನನ್ನ ಬರವಣಿಗೆಯ ಹಿಂದಿನ ಶಕ್ತಿ. ಇಂಥ ಅಂಶಗಳು ನನ್ನ ಕವಿತೆಗಳಲ್ಲೂ ಪ್ರಕಟಗೊಂಡಿರುವುದನ್ನು ಕೆಲವರಾದರೂ ಪ್ರಾಜ್ಞರು, ಸಹೃದಯರು ಈಗಾಗಲೇ ಗುರುತಿಸಿದ್ದಾರೆ. ಹುಸಿ ಕನಸುಗಾರಿಕೆ, ಕಾಲ್ಪನಿಕ ಆದರ್ಶ, ಯುಟೋಪಿಯಾಗಳಿಂದ ನಾನು ಕೇವಲ ಬರವಣಿಗೆಯಲ್ಲಲ್ಲ ಬದುಕಿನಲ್ಲೂ ಕೂಡ ಬಹಳ ದೂರ ಎಂಬುದನ್ನು ನನ್ನ ಕವಿತೆಗಳೂ ಹೇಳುತ್ತೇವೆ. ಆದ್ದರಿಂದ ಶುಭದಾಯಿನಿಯವರು ಪ್ರಾಂಜಲ ಮನಸ್ಸಿನಿಂದ ಇನ್ನೊಮ್ಮೆ ನನ್ನಕವಿತೆಗಳನ್ನು ಓದಿ ಅವುಗಳ ನಿಜವಾದಮಿತಿಗಳೇನು ಎಂಬುದನ್ನು ಗುರುತಿಸಿ ಹೇಳಿದರೆ ನಾನು ಅವುಗಳನ್ನು ಪ್ರೀತಿಯಿಂದ ಸ್ವೀಕರಿಸುವೆ ಹಾಗೂ ಅವರಿಗೆ ಋಣಿಯಾಗಿರುವೆ.

✦ **ಬಸವರಾಜ ವಕ್ಕುಂದ,**
ನಂ. ೨೬೨, ೪ನೇ ಕ್ರಾಸ್, ಚೆನ್ನಬಸವೇಶ್ವರನಗರ, ಧಾರವಾಡ-೫೮೦ ೦೦೭ ✦

೪೫

ಶ್ಯಾಮವರ್ಣದ ರಾಮ ನನ್ನ ಪ್ರಿಯತಮ ಬಂದಿದ್ದಾನೆ ಮರಳಿ ನನ್ನೂರಿಗೆ
ಜೀವ ಹೋದರು ಕೂಡ ನಾನವನ ಬಿಡಲಾರೆ ಅಂಟಿಕೊಳ್ಳುವೆ ಅವನ ಚರಣಗಳಿಗೆ
ಸಪ್ತಲೋಕಗಳ ಸುತ್ತಿ ಬಂದರು ಹರಿ ಲೀನ ಹರಿಯೊಂದಿಗೆ
ಮೂಲೋಕಗಳು ಮೂರೇ ಹೆಜ್ಜೆ ಮೂಲೋಕದೊಡೆಯನಿಗೆ
ಮೀರಾಳ ಪ್ರಭು ಹರಿ ಅವಿನಾಶಿ
ಅವಳವನ ಚರಣದಾಸಿ

೪೬

ನನ್ನ ನಾಚಿಕೆ ನನಗೆ ಶತ್ರುವಾಯಿತು ಗೆಳತಿ ಗೋಪಾಲನೊಂದಿಗೆ ಹೋಗಗೊಡಲಿಲ್ಲ
ಕ್ರೂರ ಅಕ್ರೂರ ರಥದೊಳಗವನ ಕರೆದೊಯ್ದಾಗ ಕೈ ಕೈ ಹಿಚುಕುತ್ತ ನಿಂತೆನಲ್ಲ
ಶ್ಯಾಮನಗಲಿಕೆಯಿಂದ ನನ್ನ ಮೈಗೆಲ್ಲ ಹೊತ್ತಿಕೊಂಡಿದೆ ಬೆಂಕಿ
ಗಿರಿಧರನ ದಾಸಿ ಮೀರಾಗೆ ಆಶ್ಚರ್ಯವಿದು ತಾನುಳಿದದ್ದು ಹೇಗೆ ಬದುಕಿ

೪೭

ಹರಿಯಲ್ಲದೆ ನನಗೆ ಮತ್ತಾರು ಗತಿ, ನೀನೇ ರಕ್ಷಕ ನಾ ಸೇವಕಿ
ನಿನ್ನ ನಾಮ ಜಪ ನಡೆಯುತಿದೆ ಅನುದಿನ ನನ್ನ ಹೃದಯ ತುಳುಕಿ
ಕೂಗಿ ಕರೆಯುತ್ತಿರುವೆ ಮತ್ತೆ ಮತ್ತೆ ಪ್ರಭು ಬಂದು ರಕ್ಷಿಸೆಂದು
ಸಂಸಾರ ಸಾಗರದಿ ಸಿಲುಕಿರುವೆ, ನಾವೆ ಒಡೆದಿದೆ, ಹಾಯಿ ಏರಿಸೆಂದು
ವಿರಹಿಣಿ ಮೀರಾ ಕಾದಿದ್ದಾಳೆ ಪ್ರಿಯನ ದಾರಿ
ಇರಿಸಿಕೋ ಅವಳನೆಂದೆಂದಿಗೂ ಸನಿಹದಲ್ಲಿ ಹರಿ

೪೮

ನನ್ನಿಂದ ಬರೆಯುವುದು ಆಗಲಾರದ ಕೆಲಸ ಹೇಗೆ ಬರೆಯಲಿ ಪತ್ರ
ಲೆಕ್ಕಣಿಕೆ ಹಿಡಿದರೆ ಕೈಯಲ್ಲಿ ಕಂಪನ ನೀರಾಡುತಿದೆ ನೇತ್ರ
ಎಷ್ಟು ತಡಕಾಡಿದರು ಹೇಳಲಾಗದು ನನ್ನ ಹೃದಯದಸದಳ ವ್ಯಥೆಯ
ಕಣ್ಣಾರೆ ಕಂಡು ಹೋಗಿ ಹೇಳು ಗೆಳತಿ ಆ ಹರಿಗೆ ನನ್ನ ಕಥೆಯ
ಮೀರಾಳ ಪ್ರಭು ಗಿರಿಧರ ನಾಗರ
ನಿನ್ನ ಚರಣ ಕಮಲಗಳಲಿ ನೀಡು ನನಗಾಸರ

೪೯

ಸಾಧಿಸುವುದು ಹೇಗೆ ಪ್ರಭುವಿನೊಂದಿಗೆ ಮಿಲನ
ಅಮೂಲ್ಯ ಮಾನವ ಜನ್ಮ ಆಗುತಿದೆ ವ್ಯರ್ಥ ಸ್ಖಲನ
ಕಳೆಯುತಿದೆ ಕಾಲ : ವ್ಯವಹಾರದಲಿ ಐದು ನಿದ್ದೆಯಲಿ ಮೂರು ಪ್ರಹರ
ಮೀರಾಳ ಪ್ರಭು ಗಿರಿಧರನ ಪೂಜಿಸು ಕಳೆದೀತು ಅಜ್ಞಾನ ತಿಮಿರ

೫೦

ಕೃಪೆದೋರು ಪ್ರಿಯತಮನೆ ದರ್ಶನವನೀಯ ಬಾ
ಕರೆದು ಕರೆಯುತ್ತಿರುವೆ ಈ ಬಾರಿಗಾದರು ಹರುಷ ತಾ
ಜ್ಯೇಷ್ಠದಲಿ ಮಾತ್ರ ನೀರಿಗೆ ಹಕ್ಕಿ ಸಂಕುಲದ ಕೊರಗು
ಆಷಾಢದಲಿ ಮಾತ್ರ ನವಿಲು ಚಾತಕಗಳಿಗೆ ಮಳೆಯ ಹಲುಬು

ಶ್ರಾವಣದ ಸೆಳಕಿನಲಿ ತೀಜ ಹಬ್ಬದ ಸೊಗಸು ಸಖಿಯರೊಡಗೂಡಿ
ಭಾದ್ರಪದದಲ್ಲಿ ಹೊಳೆತುಂಬಿ ಹರಿಯುವವು ನಮ್ಮಗಲಿಕೆಯ ನೆನಪ ನೀಡಿ
ಆಶ್ವೀನದಲ್ಲಿ ಬಿದ್ದ ಸ್ವಾತಿಯ ಹನಿ ಚಿಪ್ಪಿನಲ್ಲಿ ಮುತ್ತು
ಕಾರ್ತೀಕದಲ್ಲಿ ಜನಕೆ ಪೂಜೆಯ ನೆನಪು ಸೇರುವರು ನಿನ್ನ ಸುತ್ತಮುತ್ತು
ನನ್ನ ಪಾಲಿಗೆ ನೀನೇ ಸಕಲ ಸಖಿ ಹನ್ನೆರಡು ತಿಂಗಳು
ಮಾರ್ಗಶೀರ್ಷದಲಿ ನಡುಗಿಸುವ ಚಳಿ ಬಾ ಜತೆಗೆ ತಂಗಲು
ಭೂಮಿಗೆ ಹೊದಿಸಿದ ಪುಷ್ಯದ ಮಂಜಿನಲಿ ನೀ ಕಾಣದಪಗುವಿ
ಮಾಘದಲಿ ವಸಂತ ಪ್ರತಿ ಹೃದಯದಲಿ ಸಂಗೀತ ನೀನೆ ಹಾಡಾಗುವಿ
ಫಾಲ್ಗುಣದಿ ಜನ ಹೋಳಿಯಾಡುತ್ತಿರಲು ವನರಾಜ ವೃಕ್ಷ ಸುಡುವವು ನನ್ನನ್ನು
ಚೈತ್ರದಲಿ ನಿನ್ನ ದರ್ಶನದ ಹಂಬಲ ಬಲಿತು ತೆರೆದೆ ಇರುವವು ನನ್ನ ಕಣ್ಣು
ವೈಶಾಖದಲಿ ಮತ್ತೆ ಹೂಮುಡಿದು ವೃಕ್ಷ ಹಾಡುವುದು ಕೋಗಿಲ
ನಿನ್ನ ದರ್ಶನಕೆ ಚಡಪಡಿಸುವ ವಿರಹಿಣಿ ಮೀರಾಗೆ ವ್ಯಾಕುಲ
ದಿನ ಕಳೆಯುವಳು ಮೀರಾ ಪಂಡಿತರ ಜೋಯಿಸರ ಶಕುನ ಕೇಳುತ್ತ
ಗಿರಿಧರನು ಬರುವ ಮಂಗಲ ವಾರ್ತೆ ತರುವ ಕಾಗೆಗಳ ಹಾರಿಸುತ್ತ

೫೧

ತಂಪೀವ ಚೆಲುವ ಹರಿ ಪಾದಗಳನು ಮುಟ್ಟಿ ನಮಿಸು ಮನವೆ
ಕಮಲ ಕೋಮಲ ಪಾದಗಳಲಿ ಜಗದ ಬೇಗೆ ಕಳೆಯೆ
ಆ ಪಾದಗಳನೆ ಪ್ರಹ್ಲಾದ ಮುಟ್ಟಿ ಪಡೆದ ಇಂದ್ರಪದವಿ
ಧ್ರುವ ನಿತ್ಯನಾದ ಅವೇ ಪಾದ ಬಂದಾವೊ ಅನಾಥಗೊದವಿ
ಆಪಾದಮಸ್ತಕ ಬ್ರಹ್ಮಾಂಡ ಮೂಡಿ ಸಿರಿ ತುಂಬಿತೆಲ್ಲ ಕಡೆಗೆ
ಗೋಪಿಕೆಯರೊಡನೆ ಕುಣಿದು ತಾಗಿದವು ಕಾಳಿಂಗನಾ ಹೆಡೆಗೆ
ಗೋವರ್ಧನಗಿರಿ ಎತ್ತಿ ಇಂದ್ರನ ಗರ್ವ ಪುಡಿಪುಡಿಗೈದ
ಅಗಮ್ಯ ಸಂಸಾರ ಸಾಗರದಿ ಹಡಗ ದಾಸಿ ಮೀರಾಳ ಗಿರಿಧರನ ಪಾದ

೫೨

ಅನಂತಲೀಲಾ ರಸಿಕ ವಿಹಾರಿ ನಿನಗೆ ನನ್ನ ನಮನ
ಮಯೂರ ಮುಕುಟ ಸೂರೆಗೊಳ್ಳುತಿದೆ ಮಧುರ ಮುರಳಿಗಾನ
ರತ್ನಕುಂಡಲ ಕಪ್ಪು ಮುಂಗುರುಳು ಹಣೆಗೆ ತಿಲಕಶೋಭೆ
ಕಂಡು ಸಿಲುಕಿತೊ ಬ್ರಜನಾರಿ ಬಳಗ ಮೀರಾಳ ಗಿರಿಧರನ ತಾಬೆ

೫೩

ನನ್ನ ಜೀವ ಪ್ರಾಣಗಳಿಗೆ ಹರಿ ನೀನೆ ಆಧಾರ
ಮೂರು ಲೋಕದಲಿ ನಿನ್ನನುಳಿದು ನನಗಿಲ್ಲ ಯಾರ ಆಸರ
ಸಂಸಾರದಲ್ಲಿ ಕಂಡುಕೊಂಡೆ ನೀ ಮಾತ್ರ ನನ್ನ ಹಿತಬಂಧು
ಮೀರಾಳ ಪ್ರಭು ನಾ ನಿನ್ನ ದಾಸಿ ಕಾಯಿ ನೀನೆ ಬಂದು

೫೪

ಬ್ರಜವಾಸಿ ಕೃಷ್ಣ ಗೋಕುಲದ ಕೃಷ್ಣ ಆ ಅದೇ ಕೃಷ್ಣ ನಮ್ಮವನು
ಆಧಾರ ಅವನೆ ನಮಗೆಲ್ಲ ಲೀಲೆಯಲಿ ಹಿತವ ನೀಡುವವನು
ಅವನ ಪ್ರೇಮದ ಭಾಗ್ಯ ಪಡೆದ ಬ್ರಜನಾರಿ ಬಳಗ ಧನ್ಯ
ಹಾಡಿ ಕುಣಿದು ಚಪ್ಪಾಳೆ ತಟ್ಟಿ ನಗೆ ಹಂಚಿಕೊಳುವುದರ ಪುಣ್ಯ

ಯಶೋದಾನಂದರ ಪೂರ್ವಜನ್ಮದ ಪುಣ್ಯಫಲಿತ ಕೃಷ್ಣ
ಅವಿನಾಶಿ ಎನಿಸಿ ತೇಜೋರೂಪದಲಿ ಮನ ಸೂರೆಗೊಂಡ ಕೃಷ್ಣ
ಹಳದಿ ವಸ್ತ್ರ ವೈಜಯಂತಿ ಮಾಲೆ ಕೊಳಲ ಶೋಭೆಯವನು
ದಾಸಿ ಮೀರಾಗೆ ನೀಡು ದರುಶನವ ಚತುರ ಗಿರಿಧರ ನೀನು

೫೫

ಕೇಳೆ ಗೆಳತಿ ದೊಡ್ಡೊಡ್ಡ ಕಣ್ಣುಗಳ ಕೃಷ್ಣನಾಟವ
ನಗುತ ಸವಿಯುತಿರುವನಲ್ಲ ನನ್ನ ಮೈಯ ಮಾಟವ
ಜಿಲ್ಲ ಹುಚ್ಚಿನವ ದೃಷ್ಟಿ ಬಾಣದಲಿ ನನ್ನೆದೆಯ ಘಾಸಿಗೊಳಿಸಿ
ಗೆಳತಿ ಹೇಳಿದಳು ಮೀರಾಗೆ 'ತಾಯಿತ ಕಟ್ಟುವೆ ಕೈಗೆ
ಯಂತ್ರಮಂತ್ರಗಳ ಮಾಡಿ; ಸರಿಯೌಷಧ ಹುಡುಕುವೆ ಮೈಗೆ
ಪ್ರೇಮರೋಗವಾಧರೆ ನಿನಗೆ ಪರಿಹಾರ ನೀಗದು ನನಗೆ'

ತೇದು ಚಂದನವ ಹಚ್ಚಿಕೊಂಡರು ಸೋತು ಹೋದೆ ಗೆಳತಿ
ಮಾಟ ಮಂತ್ರಗಳ ಜಾದು ಯಂತ್ರಗಳ ಮಾಡಿ ದಣಿದೆ ಗೆಳತಿ
ತಟ್ಟಲಿಲ್ಲ ಎಳ್ಳಷ್ಟು ಲಾಭ ಕಾಯಿಲೆಯ ವಿಷಯದಲ್ಲಿ
ಬಿಟ್ಟೇಳದಂತೆ ಪ್ರಿಯನ ಮೂರ್ತಿ ಕುಳಿತಿಹುದು ಹೃದಯದಲ್ಲಿ

ಈಗ ನೀನೇ ಹೇಳು ಗೆಳತಿ ನಾನೇನು ಮಾಡಬೇಕು
ಒಂದೇ ಔಷಧ ಶ್ಯಾಮಲ ಮೂರ್ತಿಯ ನನಗೆ ನೀಡಬೇಕು
ಹರ್ಷ ತುಂಬಿ ತುದಿಗಾಲಲಿ ನಿಂತು ಕಾಯುತಿರುವೆ ನಾನು
ಸಾಕ್ಷಾತ್ಕಾರದ ಪ್ರತೀಕ್ಷೆಯೊಂದೇ ಕೊಡಿಸುವೆಯಾ ನೀನು

ಪ್ರಿಯನ ವಿರಹದಲಿ ನನ್ನ ಹೃದಯ ತುಣುತುಣುಕು ಆಯಿತವ್ವ
ಇಣುಕಿ ನೋಡು ನೀನೇ ಒಳಗೆ ಕಂಡೀತು ಅದರ ಪಾಡು
ಅವನ ಕಾಣದೆ ಈ ಹಾಳು ಮನೆಯಲಿ ನಾನೆಂತು ಇರಲಿಯವ್ವ
ಆರಾಮವಾಗಲು ಮೀರಾಗೆ ಅವಳ ಗಿರಿಧರನೆ ಬೇಕು ನೋಡು

೫೬

ಪ್ರೇಮದೊಳಗೆ ಸಿಕ್ಕೆ ಕೃಷ್ಣ ನಿನ್ನ ಚೆಲುವ ರೂಪ ಕಂಡು
ನನ್ನ ವಂಶ ಪರಿವಾರವು ಮರಮರಳಿ ನಿಂದಿಸುವರಿದನು ಕಂಡು
ಆದರೇನು ಮಯೂರ ಮುಕುಟ ನಟವರನ ಪ್ರೇಮ ತಪ್ಪದೆಂದಿಗು
ಅವನ ಪ್ರೇಮದೊಳಗೆ ಸಿಕ್ಕ ನನ್ನ ಮನವು ಪ್ರಸನ್ನವೆಂದಿಗು
ಲೋಕ ಹೇಳುವದು ನಾನು ಹುಚ್ಚಿನಲಿ ತಿರುಗುತಿರುವೆನೆಂದು
ಮೀರಾಗೆ ಗೊತ್ತು ಆ ಅಂತರ್ಯಾಮಿಗೆ ಸಕಲರ ಮನ ತಿಳಿದಿರುವದೆಂದು

೫೭

ಯಾರೆ ತಡೆದರು ನಿಲ್ಲದು ಪಯಣ ಭಕ್ತಿಮಾರ್ಗದೊಳಗೆ
ಅವರೊಂದು ಮಾತಿಗೆ ಲಕ್ಷ ಮಾತುಗಳ ಉತ್ತರವಿದೆ ನನ್ನೊಳಗೆ
ನನ್ನುಸಿರ ಪುತ್ರಿ ಹತಮಾರಿ ನಾದಿನಿಯ ಕಾಟ ಯಾರಿಗೆ ಹೇಳಲಿ
ಜಗದಪಹಾಸ್ಯವ ಸಹಿಸುವಳು ಮೀರಾ ಗಿರಿಧರನ ಪ್ರೀತಿಯಲ್ಲಿ

✦ **ಬಸವರಾಜ ವಕ್ಕುಂದ** : # ೨೬೨, ಇಟಗಿಯವರ ಮನೆ,
೪ ನೆಯ ಕ್ರಾಸ್, ಚನ್ನಬಸವೇಶ್ವರನಗರ, ಧಾರವಾಡ – ೫೮೦ ೦೦೭ ✦

ವಾಸ್ತವ

ಅಶೋಕ ನರೋಡೆ

ಜೀವಪರ
ಜೀವನದ ಪರ
ಜನಪರ ನಿಲುವು
ಸಮಾಜಪರ ಒಲವು
ಎಲ್ಲಿ ಹೋದವು ಎಲ್ಲ ?

ಹೋರಾಟ ಚಳುವಳಿ
ದೊಡ್ಡವರ ಬಳುವಳಿ
ಅಧಿಕಾರಕ್ಕೆ ಮೆಟ್ಟಿಲುಗಳು
ಆದರ್ಶ :
ಹೇಳಲು ಕೇಳಲು
ಗಾದಿ ಲಭಿಸಿದೊಡನೆ
ಮೆದುಳು ಮಾಯ!
ಹೃದಯ ಗಾಯಭ !

ಹಾಲು ಹೊಳೆ ಹರಿವ
ಜೇನು ಮಳೆ ಸುರಿವ
ಬಡವರ ಉದ್ಧಾರ
ಮೇಲು – ಕೀಳು ನಿರ್ಮೂಲನೆ
ಸಮಪಾಲು ಸಮಬಾಳು
ಕನಸುಗಳು :
ಕಾಲುವೆಯಲ್ಲಿ ತೇಲಿ
ಹೆಣವಾಗಿ ಹರಿದು
ಹೋಗುವವು.

✦ **ಡಾ. ಅಶೋಕ ನರೋಡೆ,**
'ಅಪೂರ್ವ', ೧೭, ಬಸವನಗರ, ಮಹಾಲಿಂಗಪುರ-೫೮೭ ೩೧೨ ✦

ನಾಲ್ಕು ಕವಿತೆಗಳು

ಚನ್ನಪ್ಪ ಅಂಗಡಿ ಬಮ್ಮನಹಳ್ಳಿ

೧. ಪದ್ಯ ಬೆಳೆಯುತ್ತಲೇ ಹೋಗುತಿದೆ

ಪದ್ಯ ಬೆಳೆಯುತ್ತಲೇ ಹೋಗುತಿದೆ ಅಡ್ಡಾದಿಡ್ಡಿ
ಗದ್ಯವನೂ ಮೀರಿ ಮೂಲೆಮೂಲೆಗೂ ಸಾರಿ
ಶುರುವಾತಿಯಿಂದ ಪದವ ಹಿಡಿದಿಡುವ ಯತ್ನದಲಿ
ಗೆದ್ದವರೆಷ್ಟೊ ಬಿದ್ದವರೆಷ್ಟೊ
ರದ್ದುಗೊಂಡರೆ ಸಾಕು ಪದ್ಯವೆಂದು ಗೋಗರೆದವರೆಷ್ಟೊ

ಕಥೆಯಾಗುವ ಕನವರಿಕೆಯ ನಡುವೆ
ಅರೆಯೆಚ್ಚರ ಸ್ಥಿತಿಯನು ಬೆಚ್ಚಿ ಬೀಳಿಸಿ
ಕವಿತೆ ಬಿರುಗಾಳಿಯಾಗಿ ಬೀಸಿ ಹೋಗುತ್ತದೆ
ತಲೆಯೆತ್ತುವ ಕಥೆಯನು ಮೊಟಕಿ
ನೀತಿ ನಿಯಮಗಳನು ನುಂಗಿ ನೀರಿಳಿಸಿ
ತೆವರಿ ತೆಂಬಗಳನು ಸವರಿ ಸಮಾಧಿಸಿ

ಋತುಮಾನದ ಏರುಪೇರಿನ ಮೂಗಿನಡಿ ಅತಿವೃಷ್ಟಿ
ಕೊಚ್ಚಿ ಹೋದ ಇಹಪರ
ನಡುನೀರಿನಲಿ ಮುಳುಗುತಿರುವ ಸಂಹಿತೆ
ಛಂದೋಭಂಗವ ಗುರಿಯಾಗಿಸಿ
ದಂಡೆತ್ತಿ ಬಂದಿರುವ ಕುರುಸೈನ್ಯ

ಅಕ್ಷರವ ಪ್ರಕ್ಷುಬ್ಧಗೊಳಿಸುವ ಅಟಾಟೋಪ
ಜರೂರಿತ್ತೆ ಖಂಡಕಾವ್ಯದ ಕತ್ತು
ಹಿಸುಕುವ ಖಗ್ರಾಸ ಬುದ್ಧಿ ?
ಕರೆಯದೇ ಕಾಣಿಸಿಕೊಳ್ಳುವ ಕಸರತ್ತು
ಕಾಣಬೇಕೆಂದಾಗ ಕಾಡಿಸುವ ಮಸಲತ್ತು
ಹುಟ್ಟಿಯೇ ತೀರಬೇಕೆನ್ನುವ ತೆವಲು
ಸಿದ್ಧ ಸೂತ್ರದೊಂದಿಗಿನ ಹಾದರ
ಏನಿಂಥ ಎಳಸು ? ಎಡವಟ್ಟು ?

೨. ರಂಗೋಲಿ

ನೆಲವನಪ್ಪಿದ ಅಸ್ಖಲಿತ ಗೆರೆಗಳು
ಮೊದಲ ಕಿರಣದೊಂದಿಗೆ ಪೈಪೋಟಿಗಿಳಿದು
ಬೀರಿದ ಗೆಲುವಿನ ನಗೆ
ಚುಕ್ಕಿಗಳೆಲ್ಲ ದೃಷ್ಟಿಬೊಟ್ಟಾಗಿ
ಸ್ವಯಂ ನಿವಾಳಿಸಿಕೊಂಡು
ಚಿಮ್ಮಿ ಹೋಗುವ ನೆರಿಗೆಯ
ಮಟ್ಟಸತನಕೆ ಹುಟ್ಟಡಗಿದಂತೆ
ನಾಚಿ ಕರಗಿಹೋಗುವ ತೆರ
ಏರುತಿರುವ ಬಿಸಿಲಿಗೆ ಕಣ್ಣುಕ್ಕಿ
ಇಳಿಸಿದ ದೃಷ್ಟಿ ನೆಟ್ಟ ದಿಕ್ಕಿಗೇ ಸ್ಥಿರ

ಚುಕ್ಕಿಗಳ ನಡುವಿನಂತರ ಹೆಚ್ಚಾಯಿತೇನೊ
ಕುಂಟೋಬಿಲ್ಲೆಯಾಟದ ತೆರದಿ ಜಿಗಿಯುತ
ಸಾಗಲಾದೀತೆ ?
ಕೈತುತ್ತ ನೆನೆಯುತ ಕೂತರೆ ಹಸಿವಿಂಗೀತೆ?
ನುರಿದು ಸಣ್ಣಗಾಗಿ ಸುರಿದಾಗ
ಓಡೀತು ಲಲಾಟರೇಖೆ ಅನತಿ ದೂರಕೆ.
ಸವರಿಕೊಂಡು ಬರುವ ಅಂಗಾಲಿಗಂಟಿ
ತುಂಡರಿಸಿ ಮಣ್ಣ ಸೇರುವಾಗ
ಅಡುಗೆಮನೆ ತುಂಬಿಕೊಂಡ ಹೊಗೆ
ನೆತ್ತಿ ಸುಡುವ ಸೂರ್ಯನಿಟ್ಟ ಚುಕ್ಕಿಸಮೂಹ
ಒಂದಕೊಂದು ಸೇರಿ ಹಣೆಯಿಂದಿಳಿದ ರೇಖೆ
ತಳಕುಬಿದ್ದ ಗೆರೆಗಳೆಲ್ಲ ಹೊಸೆದುಕೊಂಡು
ಕಪಾಳಕಡರಿದ ಕೆನ್ನೆತ್ತರು.

ಉರಿದುರಿದು ಸೋತ ಸೂರ್ಯನ ಕಣ್ಣೆವೆ
ಭುವಿಯ ಮುಖಕೆಳೆದ ನೆಳಲೆಳೆ

ಅಲ್ಲಿ ಹುಟ್ಟಿ ಆಳಕಿಳಿಯುವ ಮಡಿಕೆ
ಇಳಿಬೀಳುವ ಚರ್ಮದ ಕೆಳಗಿನ ಕತ್ತಲೆ
ಗೀರಿದ ಗೀಟಿನಗುಂಟ ತುಳಿದು
ಹೋಗುವನುಕೂಲಕೆ ಒಡಮೂಡಿದ ಕಾಲ್ದಾರಿ
ಸುಕ್ಕುಸುಕ್ಕೂ ಬಿಕ್ಕುವ ರಂಗೋಲಿ ಸೈ
ಚುಕ್ಕಿಯನಿಡಲು ಸಾರಿಸಿ ಸಜ್ಜಾದಂಗಳ-ಮೈ

೨. ಚಕ್ರ

ಉರುಳಿದ್ದೇ ಉರುಳಿದ್ದು
ಮೂಲವೆಲ್ಲಿಯದೋ ಕೊನೆಯೆಲ್ಲಿಯದೂ
ಕಾಲಿಗೆ ಕೈಯಿಗೆ ಬಾಯಿಗೆ ಅಂಡಿಗೆ
ಕಟ್ಟಿಕೊಂಡು ಸರಿದು ಜರಿದು
ಫುಟ್‌ಪಾತಿನ ಕುತ್ತಿಗೆಯ ಮೇಲೆ ಹರಿದು

ಸವೆದು ಹೋಗುತಿವೆ ಹಲ್ಲುಗಳು
ಚಲಿಸುತ ಉಜ್ಜಿ ಮಸೆಯುತ ತಿಕ್ಕಿ
ಜಡ್ಡುಗಟ್ಟಿದಚ್ಚಿನ ತೋಳು ತೊಡೆಯ
ಮೂಳೆ ಚಕ್ಕಳದಿಂದ ಹೊರಟಿದ್ದು
ಕರಕರ ಗರಗಸದ ಎಡೆಬಿಡದ ಸದ್ದು

ಎಣ್ಣೆ ಬಂದಾಗ ಕಣ್ಣು ಮುಚ್ಚಿ
ಕೀಲೆಣ್ಣೆಗಾಗಿ ಕೀಳುದಾರಿ
ಸಿಗದಿದ್ದರೆ ಏರಿಳಿತಕೆ ಸಿಕ್ಕುಸಿಕ್ಕಾದ ಒಳದಾರಿ

ತಲೆಯೇ ತಾನಾಗಿ ನೆಲೆಯಿಲ್ಲದೇ
ತಿರುಗಿದರೂ ಸಿಗದಾಗಿದೆ ನೆಲೆ
ಕಾರಣ ಭೂಮಿಯದೂ ಅದೇ ಸ್ಥಿತಿ
ಹೊರಟರೆ ವಿರುದ್ಧ ದಿಕ್ಕಿನಲಿ
ದಿಕ್ಕು ತಪ್ಪುವದು ಶತಸ್ಸಿದ್ಧ
ಕಳಚಿ ಬಿಸಾಕಿದಾಗಲೂ ತೆವಳಿಕೊಂಡು
ಹಿಂಬಾಲಿಸುವ ಜನ್ಮಾಂತರದ ಪ್ರಾರಬ್ಧ

ವೇಗೋತ್ಕರ್ಷವನು ಬೆನ್ನಟ್ಟಿ
ಗಮ್ಯಸ್ಥಾನವನೇ ಹಿಮ್ಮೆಟ್ಟಿ
ಅಪಾಯದಂಚಿಗೆ ಮುಖಾಮುಖಿ
ಕೀಲು ಮುರಿದ ರಂಧ್ರದಲಿ
ಕೈಕೇಯಿಯ ಕುಟಿಲ ಬೆಣೆಯಿಟ್ಟು
ಪಾಕವಾಗುತಿರುವ ಕಾರಸ್ಥಾನ
ತಿರುಗುವ ಕ್ರಮಕ್ಕಿಲ್ಲ
ತಿರುಗಿ ನೋಡುವ ವ್ಯವಧಾನ.

೪. ಗಳಿಗೆ ಬಟ್ಟಲು

ಇದೇ ಮೊದಲಲ್ಲ
ಈ ಇಂಥ ಆಕೃತಿಯ ನೋಡಿದ್ದು,
ಗೊಂದಲವನನುಭವಿಸಿದ್ದು.
ಮೊದಲಾವುದೊ ಕೊನೆ ಯಾವುದೊ
ಕೆಳಗಾವುದೊ ಮೇಲಾವುದೊ
ಕಾಲನಿರ್ಣಯದಂತೆ ಹರಿಯುವ ಮರುಳು
ಕಾಲ ನೋಡುವ ದೃಷ್ಟಿಗೇ ಮರಳು
ಆ ನವಿರು ನೇಯ್ಗೆಯಾಕಾರ, ಬಂಧವಿಲ್ಲದ್ದು.

ಪಡೆದೆನೆಂಬ ಗರ್ವ
ಕಳೆದೆನೆಂಬ ಕೊರಗು
ಕ್ಷಣಮಾತ್ರದಲಿ ತಲೆಕೆಳಗು
ಕಾಲನ ಮಹಿಮೆಗೆ ಬಾಗುವ-
ದರಲಿದೆಂತದೋ ಹಿತ! ಕಾದು ನಿಂದರೂ ಅನಾಹತ.

ಮುಳ್ಳು ಬೆಳೆಯದ ದಾರಿ, ಪಿಡುಗುಡುವ ಮೌನ
ಕಣ್ಣೀರು ಹರಿದಷ್ಟು
ನಿಶ್ಯಬ್ದದ ಸಾಂತ್ವನ
ಗಂಟೆಯೊ ಗಳಿಗೆಯೊ ಇರುವದಷ್ಟೆ ಸಮಯ
ನಿಮಿಷದ ಹರುಷವಿಲ್ಲಿ ಅಯೋಮಯ

ಹುಡುಕುತಿದೆಯೊಂದು ದೃಶ್ಯ
ಎಲ್ಲ ಇದ್ದೂ- 'ಇರುವದೆಲ್ಲ ಬಿಟ್ಟು'
ಅಲ್ಲ.
ತ್ರಿವಲಿಯೊಂದೇ ಅದೃಶ್ಯ

ಜಾರುವಿನಲ್ಲಿರುವ ವರೆಗೂ ಹದವಿತ್ತು
ಜಾರುವಾಟಕೆ ಒಂದಷ್ಟು ಮುದವಿತ್ತು
ಕಟಿಯ ಮೋಹಕೆ ಕೆಳಬಂದರೆ
ಸೆಟವಿಯ ಚೂಪು ಲೇಖನಿಯ ತಿವಿತ
ಕಾಲನಿಯಮವ ಹೇಳುವ ತುಡಿತ
ಇಕ್ಕಟ್ಟ ದಾರಿಯಲಿ ಸಿಕ್ಕಿಕೊಂಡಾಗಲೇ ತಿಳಿದದ್ದು-
ಕೆಳಗಾವುದೋ? ಮೇಲಾವುದೋ?

✦ **ಚನ್ನಪ್ಪ ಅಂಗಡಿ ಬಮ್ಮನಹಳ್ಳಿ,** ಕೃಷಿ ಅಧಿಕಾರಿ, ರಾಜ್ಯ ಮಣ್ಣು ಸಮೀಕ್ಷೆ ಕಛೇರಿ,
ಬೆಳಗಾವಿ ರಸ್ತೆ, ಧಾರವಾಡ-೫೮೦ ೦೦೮ ✦

೧. ವೃತ್ತಾಂತ

ನಮ್ಮಪ್ಪ
ಪಡಸಾಲೆಯಲ್ಲಿ ಎಲೆಡಿಕೆ
ಕುಟ್ಟುತ್ತಿದ್ದ ಕಲ್ಲನ್ನು
ಪ್ರಾಚ್ಯ ಶೋಧಕರೊಬ್ಬರಿಗೆ
ತೋರಿಸುತ್ತಿದ್ದೆ.

ಅಲ್ಲಿ
ಆಗ ತಾನೆ ಇದಿರಾದ
ಅಜ್ಜನ ಮೊಮ್ಮಗ
ಓಡುತ್ತಿದ್ದ ಜಿರಲೆಯನ್ನು ನೋಡಿ
ಎಲೆಡಿಕೆ ಕುಟ್ಟುವ
ಕಲ್ಲಿನಿಂದ
ಜಜ್ಜಿ ಹಾಕಿದ!

೨. ಬಿಡುಗಡೆ

ಅಮೇರಿಕಾದಲ್ಲಿ
ಮೊಮ್ಮಗಳು ಹುಟ್ಟಿದ
ವಾರ್ತೆಯನ್ನು
ಭಾರತದಲ್ಲಿರುವ ನಾವು
ತಿಳಿದುಕೊಂಡೆವು.
ಆದರೆ
ಯಾರಿಗೂ ಸೂತಕದ ಬಾಧೆ
ಇರಲಿಲ್ಲ.

✦ ಚೇತನ್ ಮುಂಡಾಜೆ, ಅಂಚೆ ಕಳ್ಳಿಗೆ-೫೭೪ ೨೯೭, ತಾ. ಬಂಟ್ವಾಳ (ದ.ಕ) ✦

ಬಿನ್ನಹ

ವಿ. ಹರಿನಾಥ ಬಾಬು

ಎಲ್ಲ ಪ್ರೀತಿಯ ಮನಸ್ಸುಗಳೇ,
ನನ್ನದೊಂದು ಮಾತು.

ನಾನು ಬೇಡ ಬಂದಿಲ್ಲ ನಿಮ್ಮ
ಅನ್ನ ಬಟ್ಟೆ ಬರೆ

ನಾನು ಕೇಳುವುದಿಲ್ಲ ನಿಮ್ಮ
ಹಣ ಒಡವೆ ವಸ್ತು

ಲಪಟಾಯಿಸಲಾರೆ ನಿಮ್ಮ
ಆಸ್ತಿ ಅಂತಸ್ತು ಅಹಮಿಕೆ

ವಂಚಿಸುವುದಿಲ್ಲ ನಿಮ್ಮ
ಮಕ್ಕಳು ಹೆಂಡತಿ ನಿಮ್ಮನ್ನು

ನನ್ನ ಬೇಡಿಕೆ ಮತ್ತು
ಆಜ್ಞೆ
ಎರಡೂ ಒಂದೆ!

ಒಂದು ಮಾತು–
ಇವೆ ಆಶೆ ಆಕಾಶದಷ್ಟು
ಅವಕಾಶಗಳೂ ಅಷ್ಟೆ
ಎಲ್ಲರಿಗೂ – ಇಲ್ಲದವರಿಗೂ–
ಸಿಗುವಂತಾಗಲಿ
ಇರಲಿ ಭೂಮಿಯಂತೆ
ತಾಯಿಗುಣ
ನೀವು ಕುಳಿತ ಸಾಲಿನಲ್ಲೇ
ಊಟಕ್ಕೆ
ಅವರಿಗೂ ಎರಡು ಎಲೆಯಿರಲಿ

ಎಲ್ಲರ ಹೊಟ್ಟೆ ತಣ್ಣಗಿರಲಿ!

✦ ವಿ. ಹರಿನಾಥ ಬಾಬು, ಸದಾಶಿವನಗರ, ಶಿರುಗುಪ್ಪ – ೫೮೩ ೧೨೧ ✦

ಎರಡು ಕವಿತೆಗಳು

ರಜಿಯಾ ಡಿ. ಬಿ.

೧. ಪಟ

ಕ್ಷಣ ಮರೆಯುತ್ತೇನೆ
ಸರಿಗಮದ ಪಿಯಾನೋ ನಾದ
ದಲ್ಲಿ ಪ್ರತಿ ಪ್ರಶ್ನೆಗೆ ಉತ್ತರ
ಆಗಲಾರೆ ಹೊರಳಿ ನೋಡಿದರೆ
ವ್ಯರ್ಥ ದೌರ್ಬಲ್ಯದ ಏಕಾಂತ.
ಪ್ರತಿ ಹೂವಿನಲ್ಲೂ ನಳನಳಿಸುವಂಥ ಕಳೆ
ಹೊಸತು ಹೊಸತೇ ಮನದ ಆಕಾಂಕ್ಷೆಗಳ
ಅರಿವು ಹತ್ತಿರ ಹತ್ತಿರ
ಇದೂ ಅಜನಬೀ ಅಪರಿಚಿತ
ಮನವೆ, ಯಾಕೆ ಹೀಗೆ ಮೌನ
ದೊಳಗಿನ ಕಡಲ ಮರ್ಮರ...
ಬಾಳ ಬಂಡಿಯೊಳು ಇಲ್ಲ ಯಾರಿಗೂ ಸುಖ
ಹುಡುಕಾಟದ ಆ- ಜತೆಯಾಗದೆ
ಆಕೆಯಾದ - ಅವನಾದ ನಾವು
ಗಳಾಗದಂಥ ನಡೆಯೊಳಗಿನ
ಧೂಳೀಪಟದ ದಟ್ಟ ಛಾಯೆ.

೨. ವಿರಸನ

ಚುಕ್ಕಿಯಾದೆ
ಅಮ್ಮನ ಚಿತ್ತವೆಲ್ಲಾ ಚಿತ್ತಾರ
ವಾಗಿಸಿ ಯುಗಾದಿ ಚಂದಿರನಂತೆ.

ಬೇವು ಬೆಲ್ಲವನ್ನೆ ಉಣಿಸಿಟ್ಟು
ಅರ್ಧ ಚಂದಿರನಾಗಿ ಅರ್ಥಕ್ಕೆ ನಿಲುಕದಂತೆ
ಮೋಡಗಳ ಮರೆಯಲ್ಲಿ ಅವಿತೆಬಿಟ್ಟವನು
ಅಮ್ಮನ ಮನದಂಗಳ ಬೆಳಗದೆ

ದಂತಗೊಂಬೆಯಂತೆ ದಂತ
ಕತೆಯಾಗೆ ಉಳಿದು
ಆ ಚುಕ್ಕಿಯೊಳಗೆ ಒಂದಾದ,
ಚಿತ್ತಾರದಲ್ಲೆ ಚಿಗುರಿದ್ದವನು
ಬಂದಾನು ಮತ್ತೆ ಬೇವು ಬೆಲ್ಲ
ವಿತ್ತವನು ಮನದೊಳಗೆ ತುಂಬಿ ಚೈತ್ರ
ಪ್ರಕೃತಿ ರಹಸ್ಯವೇ ಮರುಸೃಷ್ಟಿ ವಿಕಸಿಸುವಂತೆ.

✦ ರಜಿಯಾ ಡಿ. ಬಿ., W/o ಡಾ. ಡಿ. ಜಿ. ಫಕ್ರುದ್ದೀನ್, ಪ್ರಾಂಶುಪಾಲರು, ಹೆಚ್‌ಕೆಬಿಕೆ ಇಂಜಿನೀಯರಿಂಗ್ ಕಾಲೇಜು, ೨೨/೧, ನಾಗವಾರ, ಬೆಂಗಳೂರು-೪೫ ✦

ಪುಸ್ತಕ ಪರಿಶೀಲನೆ

೧. **ಮಂದ್ರಾವಲೋಕನ** : ಸಂ. ಎಂ. ಎಸ್. ವೆಂಕಟರಾಮಯ್ಯ, ಭಾರತೀ ಪ್ರಕಾಶನ, ಸರಸ್ವತೀಪುರಂ, ಮೈಸೂರು-೯. ಪ್ರ. ಮು. ೨೦೦೩, ಪು. ೭೨, ರೂ.೬೦/-

ಇದು ಡಾ. ಎಸ್. ಎಲ್. ಭೈರಪ್ಪನವರ 'ಮಂದ್ರ' ಕಾದಂಬರಿ ಕುರಿತ ವಿಮರ್ಶಾ ಲೇಖನಗಳ ಸಂಕಲನ. ಕನ್ನಡದ ಏಳು ಜನ ವಿಮರ್ಶಕರು 'ಮಂದ್ರ'ದ ಕುರಿತು ಇಲ್ಲಿ ವಿಶ್ಲೇಷಿಸಿದ್ದಾರೆ. ಮೈಸೂರಿನ ಸಿರಿಗನ್ನಡ ವೇದಿಕೆ ನೀಡಿದ ಪ್ರಕಟಣೆಗೆ ಸ್ಪಂದಿಸಿ ಬರೆದ ವಿಮರ್ಶಾಬರಹಗಳಿವು. 'ಆತ್ಮಶೋಧನೆಯ ಆಳಕ್ಕಿಳಿಸುವ ಅನನ್ಯ ಕೃತಿ' ಎಂದು ಹೇಳುತ್ತ, ಕೆ ಎಸ್ ವತ್ಸಲಾಂಬ ಅವರು, ಕೃತಿಯ ಪ್ರಧಾನ ಪಾತ್ರವೆನಿಸುವ ಮೋಹನಲಾಲನ ಸಂಗೀತಕ್ಕೆ ಹೆಣ್ಣುಗಳೇ ಸ್ಫೂರ್ತಿಯೆನ್ನುವುದಾದರೆ, ಅವನ ಮೂಲ ಶಕ್ತಿಯಲ್ಲಿ ಸತ್ವವಿರಲಿಲ್ಲವೇ? ಕಲಾವಿದನಾದವನಿಗೆ ನೈತಿಕ ಬದ್ಧತೆಯಾಗಲೀ, ಸಾಮಾಜಿಕ ಬದ್ಧತೆಯಾಗಲೀ ಇರುವ ಅಗತ್ಯವಿಲ್ಲವೇ? ಎಂಬೆರಡು ಮುಖ್ಯ ಪ್ರಶ್ನೆಗಳನ್ನು ಎತ್ತುತ್ತಾರೆ.

ಸುಮನ್ ಎ. ಆಚಾರ್ ಬರೆಯುತ್ತ, 'ಕಲೆಯನ್ನು ನೋಡಿದಾಗ ಸ್ವರ್ಗ ಪ್ರವೇಶ ಮಾಡಿದ ಹಾಗಾಗುತ್ತೆ, ಕಲಾವಿದನ ಒಳಹೊಕ್ಕಾಗ ಬೇರೆಯೇ ಇರುತ್ತೆ. ಯಾಕೆ ಈ ಕಾಂಟ್ರಡಿಕ್ಷನ್?' 'ಮಂದ್ರ'ದಲ್ಲಿ ಬರುವ ಈ ಪ್ರಶ್ನೆಯನ್ನು ಸಮೀಕರಿಸುತ್ತ ಈ ಲೇಖಕಿ, ಕಲೆ ಒಂದು ಕಲ್ಪನೆ, ಕನಸು, ಭಾವನೆ. ಆದರೆ ಜೀವನ ಹಾಗಲ್ಲ, ಅದು ವಾಸ್ತವ. ಕಲೆಗಾರರ ಮನಸ್ಸು ಸಹಜ ಭಾವನೆಗಳಿಗಿಂತ ಸಾಧನೆಯ ಕಡೆಗೆ ಕೇಂದ್ರೀಕೃತವಾಗಿರುತ್ತದೆ. ಒಬ್ಬ ಕಲಾಕಾರನ ಜೀವನವನ್ನು ಇನ್ನೊಬ್ಬ ಕಲಾಕಾರನ ಜೀವನಕ್ಕೆ ಹೋಲಿಸಿ ನೋಡಬೇಕೇ ಹೊರತು ಸಾಮಾನ್ಯನೊಬ್ಬನ ಜೀವನಕ್ಕೆ ಅಲ್ಲ... ಅಂತೆಲ್ಲ ತಮ್ಮ ವಿಚಾರಧಾರೆಯನ್ನು ಹರಿಬಿಡುತ್ತಾರೆ. ಕೊನೆಗೂ ಮಹಾನ್ ಸಂಗೀತ ಕಲಾವಿದನಾದ ಮೋಹನಲಾಲನು ಲೈಂಗಿಕ ನಿಗ್ರಹ ಶಕ್ತಿಯಿಲ್ಲದ ದುರ್ಬಲ ಎಂದೇ ತೀರ್ಮಾನಕ್ಕೆ ಬರುತ್ತಾರೆ.

'ಓದುಗರ ಸ್ಥಿತಿ ಬುದ್ಧಿ-ಭಾವವನ್ನು ಕದಡಬಲ್ಲ ಕೃತಿ' ಎಂದು ಬರೆಯುತ್ತ, ಗೀತಾ ಬಿ. ಸನದಿಯವರು, ಕಲೆ ಎಂದರೆ ಸ್ವರ್ಗ, ಕಲಾಕಾರನೆಂದರೆ ಕಲಾಭಕ್ತನಿಗೆ ಸಾಕ್ಷಾತ್ ದೇವರು, ಅಂಥ ಆರಾಧ್ಯ ವ್ಯಕ್ತಿಯಲ್ಲೊಂದು ವಿರೋಧ ಗುಣ ಹೊಂದಿರುವುದನ್ನು ನಿದರ್ಶನವಾಗಿ ತೋರಿಸುವುದೇ ಕಾದಂಬರಿಯ ಮೂಲ ತಿರುಳು ಎಂದೇ ಆರಂಭಿಸುತ್ತಾರೆ. ಕಲೆ ಬೇರೆ, ಕಲಾವಿದನ ವ್ಯಕ್ತಿತ್ವವೇ ಬೇರೆ. ಅತಿಯಾದ ಬಯಕೆ, ಹುಚ್ಚು ವಿಚಾರಗಳಲ್ಲಿ ಮುಳುಗಿದ್ದರೆ, ಕಲೆ ಕರಗತವಾಗುವುದಿಲ್ಲ. ಅದೇ ಮೋಹನಲಾಲನ ಕಟ್ಟ ಕಡೆಯ ಸೋಲಿಗೆ ಕಾರಣ ಎಂದೂ ಅವರು ಗುರುತಿಸುತ್ತಾರೆ.

ಡಾ. ಎಸ್.ಪಿ ಪ್ರಭಾವತಿಯವರು, 'ಮಂದ್ರ'ದ ಭಾಷೆ, ಸಂಗೀತದ ಭಾಷೆ, ಕಾಮದ ಲಯದೊಂದಿಗೆ ಇಲ್ಲಿ ಸಂಗೀತ ಮಿಡಿಯುತ್ತದೆ. ಇದು ಉದ್ದೇಶಪೂರ್ವಕ ನೇಯ್ದ ಹೆಣಿಗೆ. ಕಾಮವು ಇಲ್ಲಿ ವಿಜೃಂಭಿಸಿದೆ ಎಂಬುದನ್ನು ಸೂಕ್ಷ್ಮವಾಗಿ ಆಪಾದಿಸಿದ್ದಾರೆ.

ಉಮಾ ರಾಮಚಂದ್ರ ಅವರು ವಿಶ್ಲೇಷಿಸುತ್ತ, ಪರಿಪೂರ್ಣ ಕಲಾವಿದನಾದ ಮದನ ಮೋಹನಲಾಲ, ವೈಯಕ್ತಿಕವಾಗಿ ಮನೋರೋಗಿಯೇ ಇರಬೇಕು ಎಂದು ಅನುಮಾನ ಪಡುತ್ತಾರೆ. ಆತ ಉತ್ತಮ ನಾಗರಿಕ ಅಥವಾ ಪ್ರಜೆ ಆಗಲಿಲ್ಲ ಎಂಬ ಮಾತನ್ನು ಹೇಳುತ್ತಾರೆ. ಕಲೆಯನ್ನು ಆರಾಧಿಸಬೇಕು, ಕಲಾಕಾರನನ್ನಲ್ಲ ಎಂಬ ತೀರ್ಮಾನ ಇವರದು.

ಪದ್ಮ ಕುಲಕರ್ಣಿ ಸಮೀಕ್ಷಿಸುತ್ತ, ಪ್ರತಿಭಾನ್ವಿತ ನಾಯಕನೊಬ್ಬನ ಇಡೀ ವ್ಯಕ್ತಿತ್ವದ

ಅಧಃಪತನವನ್ನು 'ಮಂದ್ರ' ಹಿಡಿದಿಡುತ್ತದೆ ಅನ್ನುತ್ತಾರೆ. ಕಾದಂಬರಿಯಲ್ಲಿ ಮಧುಮತಿಯ ಪಾತ್ರವನ್ನು ಮೆಚ್ಚಿಕೊಳ್ಳುತ್ತಾ, ಗಂಡ ಮನೆ ಸಂಸಾರವನ್ನು ತೊರೆದು ಸಂಗೀತ ಸಾಧನೆಯೊಂದೇ ಜೀವನದ ಗುರಿ ಮಾಡಿಕೊಂಡ ಮಧುಮತಿಯದು ಒಂದು ಧೃಡವಾದ ಪಾತ್ರವೆಂದು ವಿಶ್ಲೇಷಿಸಿದ್ದಾರೆ.

ಕೆ. ಲಕ್ಷ್ಮಣರಾವ್ ಬರೆಯುತ್ತ, ಅಪ್ಪಟ ಸಂಗೀತದ ಪರಿಭಾಷೆಯ ಕಾದಂಬರಿ ಎನ್ನುತ್ತಾರೆ. ಒಟ್ಟಾರೆ 'ಮಂದ್ರಾವಲೋಕನ' 'ಮಂದ್ರ' ಕೃತಿ ಓದದೇ ಇದ್ದವರಿಗೂ ಸಹ ಕುತೂಹಲ ಹುಟ್ಟಿಸುವಂತಿದೆ ಮತ್ತು ಒಮ್ಮೆಯಾದರೂ ಓದಿ ನೋಡುವಾ ಎನ್ನಿಸುವಂತಿದೆ.

೨. ಶ್ರೀ ಕನಕದಾಸರು : ಬಸವರಾಜ ನಾಯ್ಕರ, ನ್ಯಾಶನಲ್ ಬುಕ್ ಟ್ರಸ್ಟ್, ಇಂಡಿಯಾ, ಪ್ರ. ಮು. ೨೦೦೬, ಪು. ೧೧೪, ರೂ. ೪೫/-

ಬಸವರಾಜ ನಾಯ್ಕರರವರು ಇಂಗ್ಲಿಷಿನಲ್ಲೇ ಮೊದಲು ಬರೆದು, ನಂತರ ಈ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಬಂಕಾಪುರದ ಕುರುಬ ಜನಾಂಗದ ಮುಖಂಡನಾದ ಬೀರೇಗೌಡ ಮತ್ತು ಬಚ್ಚಮ್ಮನಿಗೆ ದೇವರ ವರಪ್ರಸಾದದಿಂದ ಹುಟ್ಟಿದ ತಿಮ್ಮಪ್ಪನೆಂಬ ಮಗುವೇ ಮುಂದೆ ಕನಕದಾಸನಾದ ಕತೆಯನ್ನು ಬಸವರಾಜ ನಾಯ್ಕರ ತುಂಬ ವಿಸ್ತಾರವಾಗಿ ಮತ್ತು ಮನಮುಟ್ಟುವಂತೆ ಹೇಳಿದ್ದಾರೆ. ದೈವಭಕ್ತನಾಗಿ ಬೆಳೆದ ತಿಮ್ಮಪ್ಪ ಮಹಾಪಂಡಿತರೊಬ್ಬರಿಂದ ಶಿಕ್ಷಣ ಪಡೆದ. ಆಚಾರ್ಯರು ಅವನಿಗೆ ಕಾವ್ಯ, ನಾಟಕ, ಅಲಂಕಾರಶಾಸ್ತ್ರ, ವ್ಯಾಕರಣ, ಛಂದಸ್ಸು, ರಾಮಾಯಣ, ಮಹಾಭಾರತ ಮತ್ತು ಭಾಗವತಗಳನ್ನೊಳಗೊಂಡ ಜ್ಞಾನವನ್ನು ಧಾರೆಯೆರೆದರು. ಆಗಲೇ ಬಾಲಕ ಕಾವ್ಯರಚನೆಗೆ ಆರಂಭಿಸಿದ್ದ. ಮುಂದೆ ತಂದೆ ತೀರಿಹೋದ ಬಳಿಕ, ಅಲ್ಲಿಯ ಮಲ್ಲನಾಯಕನ ಉಪಟಳ ತಾಳಲಾರದೇ ಕಾಗಿನೆಲೆಗೆ ಬಂದು ನೆಲೆಸಿದ ಆ ಬಾಲಕನಿಗೆ, ಒಮ್ಮೆ ಗ್ರಾಮದ ಹೊಲದಲ್ಲಿ ಅಗೆಯುತ್ತಿದ್ದಾಗ ಭೂಮಿಯಲ್ಲಿ ಬಂಗಾರದ ನಾಣ್ಯ ತುಂಬಿದ ಕೆಲವು ಪಾತ್ರೆಗಳು ದೊರೆತವು. ಅನಿರೀಕ್ಷಿತವಾಗಿ ದೊರೆತ ಅವನ್ನು, ಬಡವರಿಗೆ ಅನ್ನದಾನ, ಜಾತ್ರೆ, ಗುಡಿಗಳ ಜೀರ್ಣೋದ್ಧಾರ ಇವೇ ಮುಂತಾದ ಸುಧಾರಣಾತ್ಮಕ ಕಾರ್ಯಗಳಿಗಾಗಿ ವಿನಿಯೋಗಿಸಿದ್ದರಿಂದ ಜನರು ಅವನನ್ನು ಮಹಾದಾನಿಯೆಂದು ಕರೆದು, ಕನಕಪ್ಪ ಎಂದು ಹಾಡಿ ಹೊಗಳಿ, ನಂತರ ಕನಕನಾಯಕ ಎಂಬ ಹೆಸರು ಬಂತೆಂಬುದನ್ನು ಲೇಖಕರು ಆಪ್ತವಾಗಿ ಕಟ್ಟಿಕೊಡುತ್ತಾರೆ.

'ಹರಿಭಕ್ತಿಸಾರ' ಹಾಗೂ 'ಮೋಹನ ತರಂಗಿಣಿ' ಬರೆದ ಸಂದರ್ಭಗಳನ್ನು ಲೇಖಕರು ಅಲ್ಲಿಯ ವಿವರಗಳ ಮೂಲಕ ಹಂಚಿಕೊಂಡಿದ್ದಾರೆ. ಕನಕದಾಸರ ಚರಿತ್ರೆಯನ್ನು ಸಂಕಲನದುದ್ದಕ್ಕೂ ತಮ್ಮ ಸಂಶೋಧನಾತ್ಮಕ ದೃಷ್ಟಿಕೋನದಿಂದ ಅಳೆದುನೋಡಿದ್ದಾರೆ. ನಂತರ ಲಕ್ಷ್ಮೀದೇವಿಯೊಡನೆ ಆದ ವಿವಾಹ, ಒಬ್ಬ ಪುತ್ರನ ಜನನದ ನಂತರ ಮಗು ಅನಿರೀಕ್ಷಿತವಾಗಿ ತೀರಿಹೋದದ್ದು, ಆಗ ಆದಿಕೇಶವ ಕನಸಿನಲ್ಲಿ ಬಂದು ಆಜ್ಞಾಪಿಸಿದಂತೆ ಕನಕದಾಸನಾಗಿ ಪರಿವರ್ತನೆಯಾಗಿ, ಇಡೀ ವಿಶ್ವವೇ ತನ್ನ ಮನೆಯೆಂದುಕೊಂಡು ಭಕ್ತಿಪಂಥದ ಶ್ರೇಷ್ಠರಲ್ಲಿ ಒಬ್ಬರಾದ ಬಗೆಯನ್ನು ಓದುಗರ ಕಣ್ಣಿಗೆ ಕಟ್ಟುವಂತೆ ನಾಯ್ಕರ್‌ರವರ ಚಿತ್ರಣವಿದೆ. ನಂತರ ಕನಕದಾಸರು ಉಡುಪಿಗೆ ಬಂದಾಗ ಅಲ್ಲಿ ಅವರಿಗಾದ ಅವಮಾನ ಹಾಗೂ ಅವರ ನಿಷ್ಕಲ್ಮಶ ಭಕ್ತಿಯಿಂದಲೇ ಕೃಷ್ಣನ ಮೂರ್ತಿಯೇ ಹಿಂದಕ್ಕೆ ತಿರುಗಿ, ಕಿಂಡಿ ಏರ್ಪಟ್ಟು ದರ್ಶನ ನೀಡಿದ್ದು, ಇವೆಲ್ಲ ಮೊದಲೇ ತಿಳಿದ ಸಂಗತಿಯಾಗಿದ್ದರೂ ಲೇಖಕರು ಅದನ್ನು ಇನ್ನಷ್ಟು ಮನ ಮಿಡಿಯುವಂತೆ ಹೇಳಿದ್ದಾರೆ. ಕನಕದಾಸರು ಹಲವು ವರ್ಷಗಳ ನಂತರ ಕಾಗಿನೆಲೆಗೆ ಮರಳಿ ತಮ್ಮ ತೊಂಬತ್ತೆಂಟನೇ ವರ್ಷದಲ್ಲಿ ಇಷ್ಟದೇವನಾದ ಆದಿಕೇಶವನಲ್ಲಿ ಐಕ್ಯನಾದ ಕುರಿತು ಪ್ರಸ್ತಾಪವಿದೆ.

ಕೊನೆಯಲ್ಲಿ ಕನಕದಾಸರ ಕೃತಿ 'ಮೋಹನ ತರಂಗಿಣಿ'ಯ ಕಥಾಸಾರಾಂಶ, ಪ್ರಸಿದ್ಧ ಕೀರ್ತನೆಗಳ ಕುರಿತು ವಿವರಗಳು, 'ಹರಿಭಕ್ತಿಸಾರ' ಕೃತಿಯ ಮಹತ್ವ ಮತ್ತು ಭಾಮಿನೀ ಷಟ್ಪದಿಯ ರಾಮಧಾನ್ಯ ಚರಿತ್ರೆ ಎಂಬ ಖಂಡಕಾವ್ಯದ ಕುರಿತು ವಿಶ್ಲೇಷಣೆ, ಹಾಗೂ 'ನಳಚರಿತ್ರೆ'ಯ ಕುರಿತು ವಿಮರ್ಶಾತ್ಮಕ ಬರಹ, ಇವುಗಳನ್ನೆಲ್ಲ ನೀಡಿದ್ದಾರೆ.

– **ಪ್ರಕಾಶ ಕಡಮೆ,** ೯೦, ಕಾಳಿದಾಸನಗರ, ವಿದ್ಯಾನಗರ ವಿಸ್ತರಣೆ, ಹುಬ್ಬಳ್ಳಿ–೩೧

೩. **ಮುಳ್ಳಿನ ಬಾಯಿಯಲ್ಲಿ ಹೂ ಸಾಲಿಗೆ : ಜಂಬಣ್ಣ ಅಮರಚಿಂತ,** ಸುಮುಖ ಪ್ರಕಾಶನ, ೧೭೪೪–ಇ/೨೮, ೧ನೇ ಮಹಡಿ, ೧ನೇ ಮೇನ್, ವಿದ್ಯಾರಣ್ಯನಗರ, ಬೆಂಗಳೂರು–೨೨, ಪ್ರಮು. ೨೦೦೫, ಪುಟ; ೮೦, ರೂ. ೩೩/–

ಜಂಬಣ್ಣ ಅಮರಚಿಂತರ ಈ ೧೧೧ ಗಜಲ್ ಖುಷಿಕೊಡುತ್ತವೆ. ಸಂಕಲನದ ಹಲವು ಸಾಲುಗಳು ಕಾವ್ಯಾತ್ಮಕ ಅಭಿವ್ಯಕ್ತಿಯಿಂದ ಶ್ರೀಮಂತವಾಗಿವೆ. ಆ್ಯಂಟಿ ಗಜಲ್ ಹಾಗೂ ಆಜಾದ್ ಗಜಲ್‌ಗಳ ರೂಪದಲ್ಲಿ ಇದು ಹೊಸ ಪ್ರಯೋಗ ಎಂದು ಹೇಳಿಕೊಂಡಿರುವ ಅಮರಚಿಂತರ ಈ ಗಜಲ್‌ಗಳು ಓದುಗರ ಎದೆಯಲ್ಲಿ ಖುಷಿಯನ್ನೂ, ತಲ್ಲಣಗಳನ್ನೂ ಎಬ್ಬಿಸಲು ಸಮರ್ಥವಾಗಿವೆ :'ಅಡಕಿಲ ಗಡಿಗೆಗಳಂತೆ ಕುಲಗಳು ಒಂದರ ಮೇಲೊಂದು ಕೂಡಿವೆ ಕುಲದ ವ್ಯಾಕುಲ ಅಲೆ...' / 'ಮುಚ್ಚಿದ ಕಣ್ಣು ತೆರೆಯಲು ಯುಗಗಳು ಬೇಕಾದವು ಕಂಗಳಲಿ ಬೆಳಕಿನ ಕುರುಡು...' ಹೀಗೆ ಅದ್ಭುತ ಕಾವ್ಯ ಸಾಲುಗಳನ್ನು ಅಮರಚಿಂತರು ಕೆಲ ಕಡೆಗಳಲ್ಲಿ ಗಜಲ್ ಪ್ರಕಾರಕ್ಕೆ ಹೊಂದಿಸಲು ಹೋಗಿ, ಅದರ ಅಮಿತ ಧ್ವನಿಪೂರ್ಣತೆಗೆ ಕಡಿವಾಣ ಹಾಕುತ್ತಿದ್ದಾರೇನೋ ಅನ್ನಿಸುವದು. ಮತ್ತು ಇಲ್ಲಿಯ ಗಜಲ್‌ಗಳ್ಯಾವುದಕ್ಕೂ ತಲೆಬರಹವಿಲ್ಲದ್ದರಿಂದ ಅವು ಅವುಗಳಷ್ಟಕ್ಕೇ ವಿಹರಿಸಿದಂತಿವೆ. ತಲೆಬರಹವಿರುವ ಕವಿತೆಗಳ ಒಂದು ಮಿತಿಯೆಂದರೆ, ತಲೆಬರಹದ ಅರ್ಥಕ್ಕೆ ಸೀಮಿತಗೊಳಿಸಿ ಸಹೃದಯರು ಓದಿಕೊಳ್ಳುವ ಸಾಧ್ಯತೆ ಇರುತ್ತದೆ. ಕಾಂತಾಸಮ್ಮಿತ ಗಜಲ್ ರೂಪವನ್ನು ಅಮರಚಿಂತರು ತಮ್ಮ ಬಂಡಾಯ ಮನೋಧರ್ಮಕ್ಕೆ ಒಗ್ಗಿಸಿಕೊಂಡಿರುವುದು ಒಂದು ವಿಭಿನ್ನ ಪ್ರಯತ್ನ ಅನ್ನಿಸುತ್ತದೆ.

'ಗಡಿಗಳೆದ್ದಿವೆ ಮನದ ತುಂಬಾ ತಡೆಗೋಡೆಗಳೆದ್ದಿವೆ, ಮಾತು ಕೇಳುವ ಕಿವಿಗಳೆಲ್ಲಿ...' ಅಮರಚಿಂತರ ಚಿಂತೆ.

'ಕತ್ತಲೆ ಬೆಳಕಿನಾಟಗಳು ಒಳಹೊರಗೆ ನಡೆದಿವೆ, ನಡೆದಿವೆ ಕಪ್ಪುಬಿಳುಪಿನ ನಕಲಿ...' ಎಂಬುದು ಅಮರಚಿಂತರ ವ್ಯಾಕುಲ.

'ಆಟವಿದೆ..., ಸೋಲು ಗೆಲುವು, ನಾವು ಆಡಬೇಕಾಗಿದೆ...' ಎಂಬ ಅಮರಚಿಂತರ ಆತಂಕ.

'ನಮ್ಮನ್ನು ನಾವು ಕೊಂದುಕೊಂಡು ಗೋರಿಗೊಂಡರೇನು ಬಂತು? ಒಳಗೆ ನಾರುವ ಶವದ ಕಂಪು...' ಎಂಬುದು ಅಮರಚಿಂತರ ವಿಷಾದ.

ಎದೆಯ ಲಯ ಮತ್ತು ಮಾಗಿದ ಬಂಡಾಯ ನಮ್ಮೆಲ್ಲರದೂ ಕೂಡ ಆಗಿದೆ. ದೀರ್ಘ ಮುನ್ನುಡಿ ಬರೆದ ಬರಗೂರು ರಾಮಚಂದ್ರಪ್ಪನವರು, ಈ ಗಜಲ್‌ಗಳ ಆಳ ಹಾಗೂ ವಿಸ್ತಾರವನ್ನು ಗಮನಿಸುತ್ತಾ, ಬಂಡಾಯ ಕಾವ್ಯಕ್ಕೆ ಹೊಸ ಸಾಧ್ಯತೆ ಒದಗಿಸಿದ ಉನ್ನತ ಉದಾಹರಣೆ ಎಂದಿದ್ದಾರೆ.

–**ಸುನಂದಾ ಕಡಮೆ,** ೯೦, ಕಾಳಿದಾಸನಗರ, ವಿದ್ಯಾನಗರ ವಿಸ್ತರಣೆ, ಹುಬ್ಬಳ್ಳಿ–೩೧

೪. **ವೀರಶೈವಾಂಧ್ರ ವಾಙ್ಮಯ : ಮೂಲ ಶಿಷ್ಟಾ ರಾಮಕೃಷ್ಣಶಾಸ್ತ್ರಿ,** ಅನು : **ಕಾರುಪಲ್ಲಿ ಜಾನಕಿರಾಮಯ್ಯ,** ಲಿಂಗಾಯತ ಅಧ್ಯಯನ ಸಂಸ್ಥೆ, ಶ್ರೀ ಎಡೆಯೂರು ಜಗದ್ಗುರು

ತೋಂಟದಾರ್ಯ ಸಂಸ್ಥಾನಮಠ. ಗದಗ. ಪ್ರ.ಮು. ೨೦೦೭. ಪು. ೩೨೨. ರೂ.೨೦೦/-

ಭಾರತೀಯ ಚರಿತ್ರೆಯಲ್ಲಿಯೇ ೧೨ನೇ ಶತಮಾನ ಸುವರ್ಣಾಕ್ಷರಗಳಲ್ಲಿ ಬರೆದಿಡುವಂಥದ್ದು. ಇದಕ್ಕೆ ಮುಖ್ಯವಾದ ಕಾರಣವೆಂದರೆ ಕರ್ನಾಟಕದ ಅಂದಿನ ಶರಣರಿಂದಾದ ಸಾಮಾಜಿಕ, ಧಾರ್ಮಿಕ ಹಾಗೂ ಸಾಹಿತ್ಯಿಕ ಸುಧಾರಣೆಗಳು. ಬಸವಣ್ಣ, ಅಲ್ಲಮಪ್ರಭು, ಸಿದ್ಧರಾಮ, ಅಕ್ಕಮಹಾದೇವಿ ಮೊದಲಾದ ಶರಣ-ಶರಣೆಯರು ಸಾಮಾಜಿಕ ಸಮಾನತೆ, ಸರಳ ಜೀವನ, ಧಾರ್ಮಿಕ ಸುಧಾರಣೆ ಇತ್ಯಾದಿ ಜೀವಪರ, ಜನಪರ ಮೌಲ್ಯಗಳಿಗಾಗಿ ಕೊನೆಯ ವರೆಗೂ ಶ್ರಮಿಸಿದರು. ಪ್ರತಿ ಮಾನವನಿಗೂ ಆದರ್ಶವಾಗಿ ಬದುಕುವ ಕಾಯಕನಿಷ್ಠೆ ಸರಳತೆ ಮತ್ತು ಪ್ರಾಮಾಣಿಕತೆಗಳನ್ನು ಪ್ರಚುರಪಡಿಸಿದರು. ಪ್ರತಿ ಮಾನವನ ಕಲ್ಯಾಣಕ್ಕಾಗಿ ಹಗಲಿರುಳು ಶ್ರಮಿಸಿದರು. ನವಸಮಾಜ ಕಟ್ಟುವ ಈ ಸಂದರ್ಭದಲ್ಲಿ ಅವರು ಸಾಂದರ್ಭಿಕವಾಗಿ ರಚಿಸಿದ 'ವಚನ'ಗಳು ಶ್ರೇಷ್ಠಮಟ್ಟದ ಸಾಹಿತ್ಯವೆನಿಸಿದೆ. ಕರ್ನಾಟಕದ ಉತ್ತರ ಭಾಗದ ಕಲ್ಯಾಣದಲ್ಲಾದ ಈ ಚಳವಳಿ ದಕ್ಷಿಣದ ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳುನಾಡು, ಕೇರಳಗಳಲ್ಲಿ ಸಾಕಷ್ಟು ಪ್ರಭಾವ ಬೀರಿತು. ಈ ಭಾಗಗಳಲ್ಲಿ ಅನೇಕ ಶರಣರು ಸಂತರು ಕವಿಗಳು ಮೂಡಿಬಂದರು. ವೀರಶೈವ ಧರ್ಮ, ಶರಣರು, ಅವರ ಸಾಹಿತ್ಯ, ಅಂದಿನ ಸಾಮಾಜಿಕ ಧಾರ್ಮಿಕ ಪರಿಸರ ಇತ್ಯಾದಿಗಳ ಕುರಿತು ದಕ್ಷಿಣದ ಎಲ್ಲಾ ಭಾಷೆಗಳಲ್ಲಿ ವಿಪುಲವಾದ ಸಾಹಿತ್ಯ ಕೃತಿಗಳು ಮೂಡಿಬಂದವು.

ಕರ್ನಾಟಕದಲ್ಲಿ ಹರಿಹರ, ರಾಘವಾಂಕ, ಕೆರೆಯ ಪದ್ಮರಸ, ಪಾಲ್ಕುರಿಕೆ ಸೋಮನಾಥ, ಭೀಮಕವಿ, ಚಾಮರಸ, ವಿರೂಪಾಕ್ಷ ಪಂಡಿತ, ಷಡಕ್ಷರದೇವ ಮೊದಲಾದವರಿಂದ ೧೯ನೇ ಶತಮಾನದ ವರೆಗೂ ವೀರಶೈವ ಸಾಹಿತ್ಯ ಸೃಷ್ಟಿಯಾಗಿದೆ. ಮುಂದೆ ೨೦ನೇ ಶತಮಾನದಲ್ಲಿ ಸಹ ಕಾವ್ಯ, ಕಾದಂಬರಿ, ನಾಟಕ, ಜೀವನಚರಿತ್ರೆ ಇತ್ಯಾದಿಗಳ ಮೂಲಕ ಶರಣರ ಜೀವನ, ಧರ್ಮ, ಸಾಹಿತ್ಯಗಳು ಕ್ರಿಯಾಶೀಲವಾಗಿ ಹೊರಹೊಮ್ಮಿವೆ. ಪಕ್ಕದ ಆಂಧ್ರಪ್ರದೇಶದ ತೆಲುಗು ಭಾಷೆಯಲ್ಲಿಯೂ ೧೨ನೇ ಶತಮಾನದಿಂದಲೇ ಈ ತರಹದ ಸಾಹಿತ್ಯ ಸೃಷ್ಟಿಯಾಗಿದೆ. ಕನ್ನಡಾಂಧ್ರ ಭಾಷೆಗಳಲ್ಲಿ ಕಾವ್ಯ ಕೃತಿಗಳ ಜೊತೆಗೆ ಪುರಾಣಗಳು, ಮಾಹಾತ್ಮ್ಯಗಳು, ಪ್ರಬಂಧಗಳು, ಶತಕಗಳು, ಯಕ್ಷಗಾನಗಳು ಮೊದಲಾದವು ರಚನೆಯಾಗಿವೆ. ಅಲ್ಲದೆ ಜನಪದರಿಂದಲೂ ಶರಣರು, ಶರಣಧರ್ಮ, ಶರಣರ ಜೀವನ ಇತ್ಯಾದಿ ಕುರಿತಂತೆ ಜನಪದ ಗೀತೆ, ಕಥನಕಾವ್ಯಗಳು ಸೃಷ್ಟಿಯಾಗಿವೆ.

'ವೀರಶೈವಾಂಧ್ರ ವಾಙ್ಮಯ' ಕೃತಿ ತೆಲುಗಿನಲ್ಲಿ ೧೨ನೇ ಶತಮಾನದಿಂದ ಆಧುನಿಕ ಕಾಲದ ವರೆಗೆ ರಚಿತವಾದ ವೀರಶೈವ ಸಾಹಿತ್ಯದ ವಿವರವಾದ ವಿಶ್ಲೇಷಣೆಯಾಗಿದೆ. ಉಪೋದ್ಘಾತ ಸೇರಿದಂತೆ ೧೨ ಅಧ್ಯಾಯಗಳಲ್ಲಿ ಈ ವಿವರ ಬಂದಿದೆ. ಉಪೋದ್ಘಾತದಲ್ಲಿ ವೀರಶೈವ ಮತ, ಸಂಪ್ರದಾಯಗಳು, ಸಿದ್ಧಾಂತಗಳು, ಆಂಧ್ರದಲ್ಲಿ ವೀರಶೈವ ವಾಙ್ಮಯ ಇತ್ಯಾದಿಗಳನ್ನು ಕುರಿತು ವಿವರವಿದೆ. ತೆಲುಗಿನಲ್ಲಿ ವೀರಶೈವ ಧರ್ಮ, ಶರಣರನ್ನು ಕುರಿತಂತೆ ಮಲ್ಲಿಕಾರ್ಜುನ ಪಂಡಿತಾರಾಧ್ಯ, ಪಾಲ್ಕುರಿಕೆ ಸೋಮನಾಥ ಹಾಗೂ ಪಿಡುಪರ್ತಿ ಕವಿಗಳು ಮತ್ತವರ ಕೃತಿಗಳ ವಿವರವಾದ ವಿಶ್ಲೇಷಣ ೧, ೨ ಮತ್ತು ೩ನೆಯ ಅಧ್ಯಾಯಗಳಲ್ಲಿದೆ.

ಮಲ್ಲಿಕಾರ್ಜುನ ಪಂಡಿತಾರಾಧ್ಯ ಹಾಗೂ ಪಾಲ್ಕುರಿಕೆ ಸೋಮನಾಥರು ತೆಲುಗು ಸಾಹಿತ್ಯದ ಬ್ರಹ್ಮ ಮತ್ತು ವಿಷ್ಣು ಇದ್ದಂತೆ ಎನ್ನುತ್ತಾರೆ ಲೇಖಕರು. ಇದು ಸತ್ಯ ಕೂಡ. ಪಂಡಿತಾರಾಧ್ಯರ ಶಿವತತ್ವಸಾರ ಮತ್ತು ಸೋಮನಾಥನ ಬಸವಪುರಾಣ ಕೃತಿಗಳು ಶ್ರೇಷ್ಠವಾಗಿವೆ. ವೀರಶೈವ ಮತದ ಬಲವಾದ ಪ್ರಚಾರಕ ಹಾಗೂ ಅತ್ಯುಗ್ರ ಅಭಿಮಾನಿಯಾಗಿದ್ದ

ಸೋಮನಾಥ ಕನ್ನಡದಲ್ಲಿಯೂ ಶೀಲಸಂಪಾದನೆ, ಶರಣಬಸವರಗಳೆ, ಗಂಗೋತ್ತ್ರಿ ರಗಳೆ ಇತ್ಯಾದಿ ಕೃತಿಗಳನ್ನು ರಚಿಸಿದ್ದಾನೆ. ಪಂಡಿತಾರಾಧ್ಯರೂ ವಚನಗಳು, ಬಸವಗೀತ ಇತ್ಯಾದಿ ರಚಿಸಿದ್ದಾರೆ. ಸೋಮನಾಥನ ಶಿಷ್ಯರಾದ ಪಿಡುಪರ್ತಿ ಕವಿಗಳಲ್ಲಿ ಪಿಡುಪರ್ತಿ ಬಸವಣ್ಣ (ಗುರುದೀಕ್ಷಾಬೋಧೆ), ಸೋಮಣ್ಣ (ಪ್ರಭುಲಿಂಗಲೀಲೆ) ಮತ್ತು ಬಸವಪ್ಪ (ಪದ್ಯಪ್ರಭುಲಿಂಗಲೀಲೆ) ಮುಖ್ಯರಾಗಿದ್ದಾರೆ. ವಿಶೇಷವೆಂದರೆ ಇವರ ಪ್ರಭುಲಿಂಗಲೀಲೆ ಹೆಸರಿನ ಕೃತಿಗಳಿಗೆ ನಮ್ಮ ಕನ್ನಡದ ಚಾಮರಸನ ಪ್ರಭುಲಿಂಗಲೀಲೆ ಆಧಾರವಾಗಿರುವುದು. ಕನ್ನಡ ಹಾಗೂ ತೆಲುಗಿನ ಇಂಥ ಸಾಹಿತ್ಯವನ್ನು ತೌಲನಿಕವಾಗಿ ಅಭ್ಯಾಸ ಮಾಡಬಹುದಾಗಿದೆ.

ಮುಂದಿನ ಅಧ್ಯಾಯಗಳಲ್ಲಿ ಶೈವಮತ ಕುರಿತಂತೆ ತೆಲುಗಿನಲ್ಲಿ ಬಂದಿರುವ ಗುರುಬೋಧ, ಶೈವಾಗಮ ಶಿಖಾಮಣಿ ಇತ್ಯಾದಿ ಕೃತಿಗಳು; ಬಸವಪುರಾಣ, ಶಿವರಹಸ್ಯಖಂಡ ಇತ್ಯಾದಿ ಪುರಾಣ ಕೃತಿಗಳು ಶ್ರೀಶೈಲ ಪಂಚಾಕ್ಷರಿ ಇತ್ಯಾದಿ ಮಹತ್ವದ ಕೃತಿಗಳು: ನವನಾಥ ಚರಿತ್ರೆ, ಭಲ್ಲಾಣಚರಿತ್ರೆ ಇತ್ಯಾದಿ ಪ್ರಬಂಧಗಳು; ಶಿವಶತಕ, ಅಲ್ಲಮಪ್ರಭುಶತಕ ಇತ್ಯಾದಿ ಶತಕಗಳು: ಬಸವಕಲ್ಯಾಣ, ಅಕ್ಕಮಹಾದೇವಿ ಚರಿತ್ರೆ ಇತ್ಯಾದಿ ಯಕ್ಷಗಾನಗಳನ್ನು ಕುರಿತು ಚರ್ಚಿಸಿದ್ದಾರೆ. ಕೊನೆಯ ಅಧ್ಯಾಯದಲ್ಲಿ ಹಾಡುಗಳು, ರಗಳೆಗಳು, ದಂಡಕಗಳು ಮೊದಲಾದವುಗಳ ಬಗ್ಗೆ ವಿವರಿಸಿದ್ದಾರೆ.

ಈ ಕೃತಿ ಒಂದು ಪಿಎಚ್‌ಡಿ ಪ್ರಬಂಧದಂತಿದ್ದು ಅಭ್ಯಾಸ ಮತ್ತು ಸಂಗ್ರಹಯೋಗ್ಯವಾಗಿದೆ. ವೀರಶೈವ ಹಾಗೂ ಕನ್ನಡ ಸಾಹಿತ್ಯಾಭ್ಯಾಸಗಳೆಲ್ಲರೂ ಓದಲೇಬೇಕಾದ ಪುಸ್ತಕವಿದು. ಇದೇ ರೀತಿ ತಮಿಳು, ಮರಾಠೀ ಮತ್ತಿತರ ಭಾಷೆಗಳಲ್ಲಿ ಬಂದಿರುವ ವೀರಶೈವ ಸೇರಿದಂತೆ ಇನ್ನಿತರ ಎಲ್ಲ ಮತ, ಧರ್ಮ, ಪಂಥಗಳ ಸಾಹಿತ್ಯವನ್ನು ಕನ್ನಡಕ್ಕೆ ತರುವುದು ತುಂಬಾ ಅಗತ್ಯವಾಗಿದೆ. ಅನುವಾದಕರು ಹಾಗೂ ಪ್ರಕಾಶಕರು ಅಭಿನಂದನಾರ್ಹರು.

–ಡಾ. ಬಿ. ಜಿ. ಚನ್ನೇಶ್ ಹೊನ್ನಾಳಿ, ಮುಖ್ಯಸ್ಥರು, ಕನ್ನಡ ವಿಭಾಗ,
ಸ. ಪ್ರ. ದ ಕಾಲೇಜು, ಹಿರೇಕೆರೂರ (ಹಾವೇರಿ)

೫. **ಸಮನ್ವಯ : ಡಾ. ಎಸ್. ವಿ. ಪ್ರಭಾವತಿ,** ಸುಮುಖ ಬುಕ್ ಹೌಸ್, ೧೭೪ ಇ/೨೭, ೧ನೇಮೇನ್, ಮಾಗಡಿರಸ್ತೆ, ಬೆಂಗಳೂರು–೨೩, ಪ್ರಮು.೨೦೦೬, ಪು.೯೬, ರೂ.೩೫/–

ಹೊಸಗನ್ನಡ ಸಾಹಿತ್ಯ ಪರಂಪರೆಯನ್ನು ನವೋದಯ, ನವ್ಯ ಮತ್ತು ನವ್ಯೋತ್ತರ ಎಂದು ಗುರುತಿಸಿದಾಗ, ನವ್ಯ ಕಾಲದಲ್ಲಿ ಬರೆಯಲು ಪ್ರಾರಂಭಿಸಿ, ಬಂಡಾಯವನ್ನು ದಾಟಿ ಸ್ತ್ರೀವಾದಕ್ಕೆ ಬಂದು, ಅಲ್ಲಿ ತಮ್ಮದೇ ವೈಶಿಷ್ಟ್ಯವನ್ನು ಮೂಡಿಸಿ ನವ್ಯೋತ್ತರದಲ್ಲಿ ಬರೆಯುತ್ತಿರುವ ಲೇಖಕಿ ಡಾ. ಎಸ್.ವಿ. ಪ್ರಭಾವತಿ. ಇವರು ಹಲವಾರು ಕಾದಂಬರಿ, ಕವನ ಸಂಗ್ರಹಗಳನ್ನಲ್ಲದೇ 'ಕನ್ನಡ ಸಾಹಿತ್ಯದಲ್ಲಿ ದ್ರೌಪದಿ', 'ರಾಮಾಯಣ ಪರಂಪರೆಯಲ್ಲಿ ಕನ್ನಡ ರಾಮಾಯಣಗಳು', 'ಸ್ತ್ರೀವಾದದ ಪ್ರಸ್ತುತತೆ', 'ಜಾಗತೀಕರಣ ಮತ್ತು ಮಹಿಳೆ' ಮುಂತಾದ ವಿಮರ್ಶಾಕೃತಿಗಳನ್ನೂ ಪ್ರಕಟಿಸಿದ್ದಾರೆ. ಸ್ತ್ರೀವಾದಿ ಲೇಖಕಿ ಎಂದೇ ಗುರುತಿಸಿಕೊಂಡಿರುವ ಅವರ 'ಸಮನ್ವಯ' ಮತ್ತೊಂದು ಮಹತ್ವದ ಕೃತಿ.

ನವೋದಯ ಕಾಲದಲ್ಲಿ ನಡೆಯುತ್ತಿದ್ದದ್ದು ಕೃತಿನಿಷ್ಠ ವಿಮರ್ಶೆ. ಅದು ರಸವಿಮರ್ಶೆ ಯಾಗಿರುತ್ತಿತ್ತು. ಕ್ರಮೇಣ ಅದು ವೈಚಾರಿಕ ವಿಮರ್ಶೆ, ತೌಲನಿಕ ವಿಮರ್ಶೆಗಳೆಂದು ವಿಭಿನ್ನ ಆಯಾಮ ಪಡೆಯಿತು. ಈ ಹಂತದಲ್ಲಿ ವಿಮರ್ಶಕರ ಜವಾಬ್ದಾರಿ ಹೆಚ್ಚುತ್ತ ಹೋಯಿತು. ಇತ್ತೀಚೆಗೆ, ವಿಮರ್ಶೆಯಿಂದಲೇ ಕೃತಿಗಳನ್ನು ಅಳೆಯುವ ಹವ್ಯಾಸ ಬೆಳೆಯುತ್ತಿದೆ. ತೌಲನಿಕ ವಿಮರ್ಶೆಗೆ ಹೆಚ್ಚು ಒತ್ತು ಬಿದ್ದಿದೆ. 'ಸಮನ್ವಯ' ತೌಲನಿಕ ವಿಮರ್ಶಾಕೃತಿ.

ಇದರಲ್ಲಿ ಮೂರು ಭಾಗಗಳಿವೆ. ಮೊದಲ ಭಾಗ, 'ಕಾವ್ಯವೆಂದರೆ ಹೀಗೇ'ಯಲ್ಲಿ 'ಕನ್ನಡ ಕೃಷ್ಣಕಥಾ ಪರಂಪರೆ ಮತ್ತು ಶ್ರೀಹರಿಚರಿತ್ರೆ', 'ಡಿ.ವಿ.ಜಿ.ಯವರ ಪರೀಕ್ಷಣ ಕಾವ್ಯಗಳು', 'ಸುಮತೀಂದ್ರ ನಾಡಿಗರ ದಾಂಪತ್ಯಗೀತೆ', 'ನಿಸ್ಸಾರ್ ಅಹಮದರ ಕೆಲವು ಕವಿತೆಗಳು' ವಿಮರ್ಶೆಗೆ ಒಳಪಟ್ಟಿವೆ. ಮೊದಲ ಲೇಖನದಲ್ಲಿ ಪಂಪ, ರನ್ನ, ಲಕ್ಷ್ಮೀಶರ ಕಾವ್ಯಗಳ ತುಲನಾತ್ಮಕ ವಿಶ್ಲೇಷಣೆ ಇದೆ. ಭಾಗವತ, ಮಹಾಭಾರತ, ಪುರಾಣಕ್ಕೆ ಸೇರುವ ಕಥೆಗಳ ವಿಮರ್ಶೆಯೂ ಸೇರಿದೆ. ಎರಡನೆ ಭಾಗದಲ್ಲಿ ಜಾನಪದ ಮೂಲದ 'ಮಹಾಭಾರತ', 'ರಾಮಾಯಣ'ಗಳನ್ನು ವಿಶ್ಲೇಷಿಸಲಾಗಿದೆ. ಮೂರನೆಯ ಭಾಗದಲ್ಲಿ ಕುಮಾರವ್ಯಾಸ, ಲಕ್ಷ್ಮೀಶರ ಮಹಾಭಾರತ ಮತ್ತು ರಾಮಾಯಣಗಳ ವಿಶ್ಲೇಷಣೆ ಇದೆ. ಮತ್ತೊಂದು ಕಾವ್ಯ ರುದ್ರಭಟ್ಟನ 'ಜಗನ್ನಾಥ ವಿಜಯ'- ಭಕ್ತಿಮಾರ್ಗವಾಗಿ ಜ್ಞಾನಪ್ರಾಪ್ತಿ- ಈ ಗ್ರಂಥ ರಚನೆಯ ಉದ್ದೇಶವಾಗಿದ್ದು ಇದು ದೀರ್ಘ ಚಂಪೂಕಾವ್ಯವಾಗಿದೆ. ಇಲ್ಲಿ ಲೇಖಕಿ ಡಿ.ವಿ.ಜಿ., ಪು.ತಿ.ನ. ಅವರ 'ಶ್ರೀಹರಿಚರಿತೆ' ಮುಂತಾದ ಕೃತಿಗಳ ವಿಮರ್ಶೆ ನೀಡಿದ್ದಾರೆ.

'ಕಾದಂಬರಿ ಲೋಕದಲ್ಲಿ' ಎಂಬ ಎರಡನೆಯ ಭಾಗದಲ್ಲಿ ಕುಂದನಿಕಾ ಕಪಾಡಿಯಾ ಅವರ 'ಗೋಡೆಗಳಿಂದ ಆಚೆ ಆಕಾಶ', ಭೈರಪ್ಪನವರ 'ಪವನ' ಮತ್ತು 'ಮಂದ್ರ', ವ್ಯಾಸರಾಯ ಬಲ್ಲಾಳರ 'ಉತ್ತರಾಯಣ' ಈ ನಾಲ್ಕು ಕಾದಂಬರಿಗಳ ವಿಶ್ಲೇಷಣೆ ಮಾಡಿದ್ದಾರೆ. 'ಗೋಡೆಗಳಿಂದ ಆಚೆ ಆಕಾಶ' ಕಾದಂಬರಿಯು ಸಾಮಾಜಿಕ ವಸ್ತು ಹೊಂದಿದೆ. ಸ್ತ್ರೀವಾದಿ ನೆಲೆಗಳ ಹಿನ್ನೆಲೆಯಲ್ಲಿ ಇಲ್ಲಿಯ ವಿಮರ್ಶೆ ಅದ್ಭುತವಾಗಿ ಬಂದಿದೆ. ಅದೇ ರೀತಿ ಭೈರಪ್ಪನವರ ಕಾದಂಬರಿಗಳ ಸ್ತ್ರೀಪಾತ್ರಗಳ ವಿಶ್ಲೇಷಣೆ ಸಹ ಓದುಗರನ್ನು ಗಾಢವಾಗಿ ತಟ್ಟುತ್ತದೆ.

'ಗದ್ಯ ನಾಟಕ' ಎಂಬ ಮೂರನೇ ಭಾಗದಲ್ಲಿ ಕುವೆಂಪು ಅವರ 'ಶೂದ್ರ ತಪಸ್ವಿ', ಎ. ಎಸ್. ಮೂರ್ತಿರಾಯರ 'ದೇವರು' ಗದ್ಯ ಕೃತಿಗಳನ್ನು ವಿಶ್ಲೇಷಿಸಲಾಗಿದೆ.

'ಸಮನ್ವಯ' ಮಹತ್ವದ ತೌಲನಿಕ ವಿಶ್ಲೇಷಣ ಕೃತಿಗಳ ಸಾಲಿಗೆ ಸೇರಿರುವ ಕೃತಿ.

–ಪದ್ಮ ಟಿ. ಶೆಟ್ಟಿ, ನಂ.೬೫೫, ೬ನೇ ಮೇನ್, ವಿಜಯನಗರ, ಬೆಂಗಳೂರು–೪೦

೬. ಮಡಿಚಿಟ್ಟ ಕೌದಿ : ಡಿ. ಬಿ. ರಜಿಯಾ, ಸಿ ವಿ ಜಿ ಪ್ರಕಾಶನ, ಬೆಂಗಳೂರು, ಪ್ರಮು.೨೦೦೪, ಪು. ೯೪, ಬೆಲೆ ರೂ. ೮೦/-

'ಛಾಯೆ', 'ಕಳೆದು ಹೋಗುತ್ತೇವೆ', 'ಋತು'ಗಳ ಸಾಲಿನ ಕವನ ಸಂಕಲನ, 'ಮಡಿಚಿಟ್ಟ ಕೌದಿ'. ರಜಿಯಾ ಅವರು ಬದುಕಿನ ಮೂಸೆಗೆ ಕೈಹಾಕಿ ಎತ್ತಿಕೊಟ್ಟ ೫೨ ಕವನಗಳ ಗುಚ್ಛವಿದು. ಕೆಲವೊಮ್ಮೆ ಎಷ್ಟು ಗಾಢವಾಗಿ ಇಲ್ಲಿನ ಕವನಗಳಿರುತ್ತವೆಯೆಂದರೆ ಪ್ರತಿ ಸಾಲಿನ ನಡುವಣ ಅರ್ಥ ಗ್ರಹಿಸಿ ಮುಗಿಯುವುದಿಲ್ಲ. 'ಇದೆಯೆಂದರೆ ಅತಿಯಾದೀತು, ಇಲ್ಲವೆಂದರೆ ಮಿತಿಯಾದೀತು' ಎಂಬಂತಿವೆ ಇಲ್ಲಿಯ ಹಲವು ಕವನಗಳು.

ಸಂಕಲನದ ಮೊದಲ ಕವನ 'ತಂತು'. ಮಡಿಚಿಟ್ಟ ಆ ಕೌದಿಯನ್ನು ನಿರ್ಮಾಣ ಮಾಡಿರುವವರು ಎಂಥವರು? ಅವರ ಸಂಸ್ಕಾರವೇನು? ಇಡಿಯ ಕುಟುಂಬ ಆ ಕೌದಿಯ ತಂತುಗಳನ್ನು ಜೋಡಿಸುವಲ್ಲಿ ಹೇಗೆ ದುಡಿಮೆಗೈದಿದೆ? ಎಂಬಿತ್ಯಾದಿಗಳನ್ನು ಹೇಳುವುದರ ಜೊತೆಗೆ ರಜಿಯಾ ಅವರು ತಾವು ನಡೆದು ಬಂದ ದಾರಿಯನ್ನೇ ಸಿಂಹಾವಲೋಕನಕ್ಕೆ ಒಡ್ಡುತ್ತಾರೆ. ಆದ್ದರಿಂದ 'ತಂತು' ಇಡಿಯ ಕವನಸಂಕಲನಕ್ಕೆ ಮಾಡಿದ 'ಆಶಯ ವ್ಯಾಖ್ಯಾನ'ದಂತಿದೆ. ಮಾತ್ರವಲ್ಲದೆ ವಿವಿಧ ವರ್ಣಗಳ ಅನೇಕ ಸೀರೆಗಳನ್ನು ಜೋಡಿಸಿ ಒಂದು ಕೌದಿ ರಚಿಸುವ ಕಲ್ಪನೆಯಲ್ಲಿಯೇ ಸ್ತ್ರೀಸಮೂಹದ ಏಕತೆಯ ಇತಿಹಾಸವಿದೆ.

ಕೌಟುಂಬಿಕ ಅಭಿಮಾನವನ್ನು ರಜಿಯಾ ಅವರು ಹಲವು ಕವನಗಳಿಗೆ ವಿಸ್ತರಿಸಿದ್ದಾರೆ. ತಂದೆಯ ಬಗ್ಗೆ, ತಾಯಿಯ ಬಗ್ಗೆ ಕವನಗಳನ್ನು ಬರೆದಿದ್ದಾರೆ. ಅಂಥವುಗಳಲ್ಲಿ 'ಸಮರ್ಪಿತ'

ಕವನವೂ ಒಂದು. ತಂದೆಯವರ ನಿಸ್ವಾರ್ಥ ಬದುಕನ್ನು ಹೆಮ್ಮೆಯಿಂದ ಕವಯಿತ್ರಿ ವರ್ಣಿಸುತ್ತಾರೆ :

'ತನ್ನದೇನೆಂದು ತಡಕಾಡದೇ/ ಅನ್ನರಲೂ ಪಾರಿಜಾತವ / ಪರಿಮಳ ಬೀರಿದ' ಎಂಬ ಸಾಲುಗಳು ಅರ್ಥವತ್ತಾಗಿ ಮೂಡಿವೆ.

'ನೆರಳು ಒಂದು ಮಾಮೂಲಿ ವಿಷಯವಾದರೂ ಅದನ್ನು ರಜಿಯಾ ನಿರ್ವಹಿಸುವ ಬಗೆ ವಿನೂತನವಾಗಿದೆ. 'ವಿಚಲಿತವಾಗದ ಈ ನೆರಳು/ಮುಗಿಲೆತ್ತರ ಏರಿತು' ಎಂಬ ಸಾಲು, ನೆರಳಿಗೆ ಅಸಾಧಾರಣ ಮೌಲ್ಯವನ್ನು, ಕೀರ್ತಿಯನ್ನು ಕಟ್ಟಿಕೊಟ್ಟಿದೆ. 'ಸೊನ್ನೆ' ಕವನದಲ್ಲಿ ವಿದೇಶಕ್ಕೆ ಸಂಪಾದಿಸಹೋದ ಗಂಡ, ಆತನ ಸಂತಾನವೃದ್ಧಿಗೆ ಕಾಯುತ್ತ ಒಳಕುಳಿತು ಕೊಳೆಯುವ ಹೆಂಡತಿ-ಮತ್ತೆ ಆಕೆಯ ಬದುಕಿನ ನಿರರ್ಥಕತೆ ಇತ್ಯಾದಿಗಳು ಸಾಮುದಾಯಿಕ ಸಂಕುಚಿತತೆಯ ದ್ಯೋತಕವಾಗಿ ಬೆಳಕಿಗೆ ಬರುತ್ತವೆ. 'ಸಾವಿನ ವೆಜ್ಜ ಹೊತ್ತು ತಂದ/ ಅವಧೂತನಿಗಾಗಿ ಬದುಕುತ್ತಿದ್ದಾಳೆ' ಎಂಬ ಸಾಲಿನ ರೂಪಕಶಕ್ತಿ ಪುರುಷ ಸಮಾಜಕ್ಕೆ ನೀಡಿದ ಚಾಟಿಯೇಟು ಕೂಡ.

'ನೆಲೆ' ಕವನದ ಅವ್ವ- ಭೂಮಿತಾಯಿಯ ಪ್ರತೀಕವಾಗಿ ಒಂದೆಡೆ ಕಾಣಿಸಿದರೆ ಅತಂತ್ರತೆಯ ಸಂಕೇತವಾಗಿ ಮತ್ತೊಂದೆಡೆ ಕಾಣಿಸುತ್ತಾಳೆ. 'ಸ್ಥಿತ್ಯಂತರ' ಕವನದ ದಾಯಾದಿ ಕಲಹ, 'ಸ್ವಾಗತ'ದ ಸಾಮರಸ್ಯ ಕಲ್ಪನೆ, 'ಪಳೆಯುಳಿಕೆ'ಯ ಅಕ್ಕಂದಿರ ಗತಿಯೇ ತನಗೂ ಆಗಬಹುದೆಂಬ ಭೀತಿ; 'ಪಥ'ದೊಳಗಿನ ಹಸುರಿಡಲು ಬಯಸುವ ಬಯಕೆ, 'ನೆಲೆ' ಕವನದ ಅವ್ವನ ಅಂತ್ರತತೆ ಹೀಗೆ ನೋಡುತ್ತ ಹೋದರೆ ವೈವಿಧ್ಯಮಯ ವಸ್ತುಗಳೊಂದಿಗೆ ರಜಿಯಾ ಅವರು ಅನುಸಂಧಾನ ನಡೆಸಿದ್ದಾರೆ. ಗಾಢಾರ್ಥಗಳಿಂದ ಕೂಡಿದ, ಬನಿಯುಳ್ಳ ಕೆಲವು ಕವನಗಳು 'ಕೌದಿ'ಯ ಆಸ್ತಿ. ಆದರೆ ಇಡೀ ಸಂಗ್ರಹದಲ್ಲಿ ಮುದ್ರಣ ದೋಷಗಳು ಕಡಿಮೆ ಇರುವಂತೆ ನಿಗಾ ವಹಿಸಬೇಕಿತ್ತು.

-ಡಾ. ನಾ. ದಾಮೋದರ ಶೆಟ್ಟಿ, 'ಪ್ರಸಾಧನ', ಬಿಜೈ, ಭಾರತೀನಗರ, ಮಂಗಳೂರು-೪

ಸಂಕಲನ : ಅನಿಸಿಕೆ

೧. ಈ ಮಧ್ಯೆ ನನಗೆ ಬೆಂಗಳೂರಿಗೆ ವರ್ಗವಾದದ್ದರಿಂದ ಕೆಲ ಸಂಚಿಕೆಗಳು ತಡವಾಗಿ ಸಿಕ್ಕವು. ಹಾಗಾಗಿ ನನ್ನ ಚಂದಾ ನವೀಕರಿಸುವುದನ್ನೇ ಮರೆತುಬಿಟ್ಟಿದ್ದೆ. ಅಷ್ಟಕ್ಕೂ ೩-೩ ವರ್ಷಗಳಿಗೊಮ್ಮೆ ಚಂದಾ ನವೀಕರಿಸುತ್ತಿದ್ದುದರಿಂದ ಚಂದಾ ಮುಗಿದದ್ದೇ ಗೊತ್ತಾಗಲಿಲ್ಲ. ಕ್ಷಮಿಸಿ. ಅಂದ ಹಾಗೆ ನನ್ನ ಹಾಗೇ ಮರೆತವರೇ ಎಷ್ಟು ಮಂದಿಯೋ! ಅಲ್ಲದೇ ಈ ಎಂ.ಓ. ಮಾಡುವುದು, ಅಂಚೆ ಕಛೇರಿಗೆ ಅಲೆಯುವುದು ಇವೆಲ್ಲಾ ರೇಜಿಗೆ ಎನಿಸಿಯೋ, ಬಿಡುವಿರದೆಯೋ ನನ್ನಂತೆಯೇ ಎಷ್ಟೋ ಜನ ನಿಧಾನಿಸಿರಬಹುದು.

ಅದಕ್ಕೋಸ್ಕರ ಪತ್ರಿಕೆಯನ್ನೇ ಮುಚ್ಚುವ ನಿರ್ಧಾರ ತಿಳಿದು ಬೇಸರವಾಯಿತು. ಚಂದಾ ಕಟ್ಟಿಸಿಕೊಂಡ ಎಷ್ಟೋ ಪತ್ರಿಕೆಗಳು ಸಂಚಿಕೆಗಳನ್ನೇ ಮುದ್ರಿಸದೇ ನಿಂತು ಹೋಗುತ್ತಿರುವಂತಹ ಇವತ್ತಿನ ಕಾಲದಲ್ಲಿ, ಹಾಗೂ 'ನಿಯತಕಾಲಿಕ' ಎಂದು ಹೇಳಿಕೊಳ್ಳುತ್ತಲೇ 'ಅನಿಯತಕಾಲಿಕ'ವಾಗಿ ಬರುತ್ತಿರುವ ಇವತ್ತಿನ ಸಂಕೀರ್ಣ ಸಂದರ್ಭಗಳಲ್ಲಿ ನಿಜಕ್ಕೂ ನಿಗದಿತ ಕಾಲಕ್ಕೆ ಸರಿಯಾಗಿ ಬರುತ್ತಿದ್ದ ಸಾಹಿತ್ಯಿಕ ಪತ್ರಿಕೆ 'ಸಂಕಲನ' ಒಂದೇ!

ಚಂದಾದಾರರಿಗೋಸ್ಕರ ಪತ್ರಿಕೆ ಬರುವುದು ಬೇಡ. ಚಂದಾದಾರರು ಯಾವತ್ತೂ ನೆಪ ಮಾತ್ರ, ಸಂಕಲನ ಒಂದು ಸಾಹಿತ್ಯಿಕ-ಸಾಂಸ್ಕೃತಿಕ ದಾಖಲೆಯಾಗಿ ಉಳಿಯುವಂತಹದು.

ನಮ್ಮಂತಹ ಲೇಖಕರು, ಯಾರಾದರೂ ಪುಸ್ತಕ ಕೊಂಡುಕೊಳ್ಳುತ್ತಾರೆ ಎಂದು ನಂಬಿಯೇ ಪುಸ್ತಕ ಪ್ರಕಟಿಸುವುದಿಲ್ಲ. ಯಾರೂ ಕೊಳ್ಳದಿದ್ದರೂ ಪರವಾಗಿಲ್ಲ, ಪತ್ರಿಕೆಯನ್ನು ನಿಲ್ಲಿಸಬೇಡಿರೆಂದು ಬೇಡಿಕೊಳ್ಳುತ್ತೇನೆ. ಸಮಾನ ಮನಸ್ಕರಿಂದ ಒಂದಿಷ್ಟಿಷ್ಟು ಇಡಿಗಂಟನ್ನು ಸೇರಿಸಿಕೊಂಡಾದರೂ ಸರಿ, ಪತ್ರಿಕೆ ಬರುತ್ತಲೇ ಇರಲಿ. ಚಂದಾದಾರರಿಗೆ ನೆನಪೋಲೆಯೊಂದಿಗೆ ಸಂಚಿಕೆ ತಲುಪುತ್ತಲೇ ಇರಲಿ. ಅವರಿಗೆ ಬಿಡುವಾದಾಗ ಇಲ್ಲವೇ ವೈಯಕ್ತಿಕವಾಗಿ ಸಿಕ್ಕಾಗ ಖಂಡಿತ ಚಂದಾ ಕೊಡುತ್ತಾರೆ. ಕನ್ನಡಿಗರು ಅಷ್ಟೊಂದು ಸ್ವಾಭಿಮಾನ ಶೂನ್ಯರಲ್ಲ, ಅಲ್ಲವಾ? **–ಕಂನಾಡಿಗಾ ನಾರಾಯಣ,** ಬೆಂಗಳೂರು

೨. ಸಂಕಲನ ಪರಿಶುದ್ಧ, ಪ್ರಬುದ್ಧ ಪತ್ರಿಕೆಯಾಗಿದೆ. ಎಲ್ಲ ಸಾಹಿತ್ಯಾಸಕ್ತರು ಮನದಾಳದಿಂದ ಪ್ರೀತಿಸುವ ಸಂಕಲನದ ಹಿಂದೆ ಇರುವ ನಿಮ್ಮ ಪರಿಶ್ರಮದ ಕೊಡುಗೆಯನ್ನು ನಾಡು ಅರ್ಥ ಮಾಡಿಕೊಳ್ಳಬೇಕು, ಅದನ್ನು ಬೆಳಸಲೇಬೇಕು. ತಮ್ಮ ತೊಂದರೆ, ಓದುಗರ ಅನಾಸ್ಥೆ ಕಂಡು ಮರಗುತ್ತಿದ್ದೇನೆ. ಈಗ ನಿಷ್ಠ ಪತ್ರಿಕೆಗಳು ಎಷ್ಟೋ ಕಾಲದಿಂದ ಮರೆಯಾಗಿವೆ. ಇದು ಹಾಗಾಗುವುದು ಬೇಡ. ನಾವೆಲ್ಲರೂ ಕೂಡಿ ವಿಚಾರ ಮಾಡೋಣ.

–ಡಾ. ವಸಂತ ಕುಲಕರ್ಣಿ, ಬೆಂಗಳೂರು

೩. ನಿಮ್ಮ ಸಂಪಾದಕೀಯದ ಕೆಲವು ಮಾತುಗಳಲ್ಲಿ, ಹಾಗೂ ಇತ್ತೀಚಿನ ಎರಡು ಮೂರು ಸಂಚಿಕೆಗಳಲ್ಲಿ ಇಡಿ ಇಡಿಯಾಗಿ ಬರುತ್ತಿರುವ ಕೆಲವು ಲೇಖನಗಳ ಸಮುಚ್ಚಯಗಳನ್ನು ಲಕ್ಷಿಸಿದರೆ 'ಸಂಕಲನ' ನಿಲ್ಲಿಸಲು ಯೋಚಿಸುತ್ತಿರುವಿರೇನೋ ಎಂದು ಭಾಸವಾಗುತ್ತಿದೆ. ತುಂಬಾ ಬೇಸರದ ಸಂಗತಿ. **–ಸಿ. ಸೋಮಶೇಖರಯ್ಯ,** ಚಿತ್ರದುರ್ಗ

೪. ಸಿ. ಸೋಮಶೇಖರಯ್ಯ ಅವರು ಯಾವುದೇ ಕಠಿಣ ಶಬ್ದ, ವಿಮರ್ಶೆಯ ವಿಶಿಷ್ಟ ಶಬ್ದ ಜಾಲ, ಬೌದ್ಧಿಕ ವಿವರಣೆ ಇತ್ಯಾದಿ ಏನೂ ಇಲ್ಲದೆ ನೇರವಾಗಿ ಸಾಮಾನ್ಯರ ಭಾಷೆಯಲ್ಲಿ ಶಿವರಾಮ ಕಾರಂತರ ಕಾದಂಬರಿಗಳನ್ನು ವಿವರಿಸುವ, ತಿಳಿಸುವ ಸ್ತುತ್ಯ ಪ್ರಯತ್ನ ಮಾಡಿದ್ದಾರೆ. **–ಡಿ. ಎನ್. ಮುನಿಕೃಷ್ಣ,** ಬೆಂಗಳೂರು

೫. 'ಬಿಸಿ ಬಿಸಿ ಕಜ್ಜಾಯ ರುಚಿ ರುಚಿ ಕಜ್ಜಾಯ'ದ ಹಾಗೆ ೪೦ನೇ ಸಂಚಿಕೆಯ ಲೇಖನ. ಚುಟುಕು ಅನುಭವಸಾರವನ್ನು ಆಸ್ವಾದಿಸಿ ಜೀರ್ಣಿಸಿಕೊಂಡಿರುವೆ. ಜೊತೆಗೆ ಪುಳುಕಾನಂದ ಗೊಂಡಿರುವೆ. ನೀವು ಎರಡು ಮೂರು ಸಾರೆ (ಉದಾ.ಗೆ ರೆಫ್ರೆಶರ್ ಕೋರ್ಸ್‌ಗೆ ಬಂದಾಗ ಇತ್ಯಾದಿ) ಹೇಳಿದ ಮಾತು ನೆನಪಿದೆ. 'ನೀವು ನಿಮ್ಮ ಗತಕಾಲದ ಅನುಭವವನ್ನು ಇರುವ ಸ್ವರೂಪದಲ್ಲೇ ಬರೆದಿಡುವ ಅಭ್ಯಾಸವನ್ನು ಮಾಡಿಕೊಳ್ಳಿರಿ. ವೈವಿಧ್ಯತೆಯ ಲೋಕದರ್ಶನ ಎಂಥ ಆಶ್ಚರ್ಯವನ್ನು ಹುಟ್ಟಿಸಬಲ್ಲದು!' ಈ ಮಾತು ನನಗೆ ಇನ್ನೂ ಗುಂಗಾಗಿ ಕಾಡುತ್ತಿದೆ. 'ನನ್ನ ಅವ್ವ-ಅಪ್ಪ', 'ನನ್ನ ಶಾಲಾಗುರುಗಳು' ಇವುಗಳ ಮೂಲಕ ಸಾಕಾರಗೊಳ್ಳಲು ಅನುವು ಮಾಡಿಕೊಟ್ಟಂತಾಗಿದೆ. ಇದನ್ನು ಕಂಡು ನಾನು ಬರೆಯಬೇಕೆಂಬ ಒತ್ತಡಕ್ಕೆ ಒಳಗಾದದ್ದೂ ಇದೆ. ಮತ್ತೆ ಮೌನ ಆವರಿಸುತ್ತದೆ. ಕಾರಣ ಕುಲುಕುಲು ನಗುವುದಕ್ಕಿಂತ, ಮುಖ ಕಿವುಚುವ ಅಂಶಗಳೇ ಹೆಚ್ಚಾದೀತು ಎಂಬ ಕಸಿವಿಸಿ ನನ್ನಲ್ಲಿದೆ. ಇದರಿಂದಾಗಿ ಸುಮ್ಮನಿರುವೆ.

ಇನ್ನೊಂದು ವಿಷಯ. ಆಸೆ ತೋರಿಸಿ ಕಸಿದುಕೊಂಡಂತೆ ಕೆಲ ವಿವರಗಳನ್ನು ಕೊಟ್ಟಿರುವಿರಿ. ಆ ಪ್ರಕಾರ ಪ್ರೊ. ಶೆಟ್ಟರ್ ಅವರ 'ಕವಿರಾಜಮಾರ್ಗ' ಕುರಿತ ೩ ಪ್ರಕಟಣೆಗಳು ಕನ್ನಡ ಅಧ್ಯಾಪಕರಾದ ನಮ್ಮಂಥವರಿಗೆ ಬೇಗ ದೊರೆಯುವ ಹಾಗೆ ಮಾಡಿರಿ ಎಂದು ವಿನಂತಿ.

–ಡಾ. ಎಂ. ಜಿ. ವಾರಿ, ಬಾದಾಮಿ

೬. ಇತ್ತೀಚೆಗಂತೂ ಸಂಕಲನ ತುಂಬಾ ಆಕರ್ಷಕವಾಗಿ ಬರುತ್ತಿದೆ. ಜುಲಾಯಿ+ಆಗಸ್ಟ್ ಸಂಚಿಕೆಯ ಹೊದಿಕೆ ಹೊಳೆಯುತ್ತ ಬಂದು ಮನಸ್ಸಿಗೆ ಖುಶಿ ನೀಡಿತು. ವಿಷಯ ವೈವಿಧ್ಯದಲ್ಲಿಯೂ ಯಾವಾಗಲೂ ಹೊಸದಾಗಿಯೇ ಇರುತ್ತದೆ. ನಿಮ್ಮ ಮೊಳಕೈಗೆ ಬಿದ್ದ ನೋವಿನ ಹಿಂದು ಮುಂದಿನ ಕತೆಯನ್ನು ಕಡೀಪುಟದೊಳಗೆ ಓದಿದೆ. ಭಾಳ ತಲಿ ಕೆಡಿಸಿಕೋಬಾರದು ಅನ್ನೋ ಮಾತು ಓದಿ ನನ್ನ ಮನಸ್ಸಿನೊಳಗ ಇದ್ದ ನೋವೂ ಹೋತು. ವಾಲ್ಟ್ ವ್ಹಿಟ್‌ಮನ್‌ನ ಕುರಿತ ಲೇಖನ ಬಹಳ ಹಿಡಿಸಿತು.

–ಬಸು ಬೇವಿನಗಿಡದ, ಧಾರವಾಡ

೭. ಸಂಕಲನ–೪೦ ತುಂಬ ಮೌಲಿಕವಾಗಿ ಮೂಡಿಬಂದಿದೆ. ಕಡೀಪುಟ ನಿಜವಾಗಿಯೂ ಮನತಟ್ಟಿತು. 'ಕೈ ಅನ್ನೂದು ಮೂರ್ತ, ನೋವು ಅಮೂರ್ತ. ನೋವನ್ನ ನೆನಸಿದರ, ಭಾವಿಸಿದರ ಅದು ಸತ್ಯ. ಅದನ್ನ ಮರತರ, ನಿರ್ಲಕ್ಷ್ಯ ಮಾಡಿದರ ಕಲ್ಪನಾ... ನೋವಿನ ನೆನಪು ಭಾರ. ಮರೆವು ಹಾರ' ಮತ್ತೆ ಮತ್ತೆ ಓದಿ ಮನನ ಮಾಡಿಕೊಳ್ಳುವಂತಿದ್ದವು. ಕಡೀಪುಟದಷ್ಟು ಆಕರ್ಷಕವಾಗಿ ವಿಷಯ ದೃಷ್ಟಿಯಿಂದ ಮೌಲಿಕವಾಗಿ ಒನ್ನೇಪುಟವೂ ಬರ್ತಿತ್ತು. ಅದನ್ನ ಯಾಕ್ ಬಂದ್ ಮಾಡೀರಿ. ಮತ್ತೆ ಆರಂಭಿಸಿರಿ. 'ಅವ್ವ–ಅಪ್ಪ', 'ಶಾಲಾ ಗುರುಗಳು' ಅತ್ಯಂತ ಮೌಲಿಕ ಲೇಖನ ಮಾಲಿಕೆಗಳು. 'ಕಾರಂತರ ಜೀವಂತ ಪಾತ್ರಗಳು' ಅದ್ಭುತವಾಗಿ ಮೂಡಿ ಬರುತ್ತಿವೆ. ಎಲ್.ವಿ. ಶಾಂತಕುಮಾರಿಯವರ 'ವಾಲ್ಟ್ ವ್ಹಿಟ್‌ಮನ್‌ನ ವಿಶ್ವರೂಪ' ಅನನ್ಯ ಲೇಖನ. ಬಸವರಾಜ ವಕ್ಕುಂದರ 'ಮೀರಾ ಪ್ರೇಮ ಧಾರಾ' ತುಂಬ ಚೇತೋಹಾರಿ ಅನುವಾದ. ಇಡೀ ಸಂಚಿಕೆಯ ಪುಟ ಪುಟ ಅರ್ಥಪೂರ್ಣವಾಗಿದೆ.

–ಡಾ. ಅಶೋಕ ನರೋಡೆ, ಮಹಾಲಿಂಗಪುರ

೮. ಸಂಕಲನ–೩೯ ರಲ್ಲಿ ಬಂದ ಕುಂ.ವೀ. ಅವರ 'ಅರಮನೆ' ಕುರಿತ ಲೇಖನ ಹಾಗೂ ಡಾ. ಸಿ. ಎನ್. ರಾಮಚಂದ್ರನ್ ಅವರ ಲೇಖನ ತುಂಬ ಪ್ರಯೋಜನಕಾರಿಯಾಗಿವೆ. ಡಾ. ಗಿರಿಜಾ ಶಾಸ್ತ್ರಿಯವರ ನೆನಪಿನಂಗಳ ಲೇಖನ ಆಪ್ತವಾಗಿ ಬಂದಿವೆ. ಕಡೀಪುಟದಲ್ಲಿ ಸಂಡೂರಿನ ಪ್ರಭುಸ್ವಾಮಿಗಳನ್ನು ಕುರಿತು ಬರೆದದ್ದು ಪತ್ರಿಕೆಯ ಹೈಲೈಟ್.

–ಕೃಷ್ಣಮೂರ್ತಿ ಕಲುಮಂಗಿ, ಹೊಸದೆಹಲಿ

೯. ಬಸವರಾಜ ವಕ್ಕುಂದ ಅವರ 'ಮೀರಾ ಪ್ರೇಮ ಧಾರಾ' ಅನುವಾದ ಅತ್ಯಂತ ಖುಷಿಯ ಧಾರೆಯಾಗಿದೆ. ತುಂಬಾ ಸೊಗಸಾದ ಕನ್ನಡಾನುವಾದ. ಅಬ್ದುಲ್ ಮಜೀದ್ ಖಾನ್ ಅವರ 'ಗೀಜಾ ಪಿರಮಿಡ್‌ಗಳ ಬಳಿ' ನನಗೆ ಖುಷಿ ಕೊಟ್ಟ ಇನ್ನೊಂದು ಪದ್ಯ. ಸುಖ ಸಂಪತ್ತಿಗಾಗಿ ವಿಪರೀತ ಆಸೆಪಟ್ಟು ವೈಭವದಿ ಮೆರೆದ ಫೆರೋಗಳು ಹಾಗೂ ಅಂಥವನ್ನೆಲ್ಲ ತ್ಯಾಗ ಮಾಡಿ ಸಿದ್ಧಾರ್ಥನು ಬುದ್ಧನಾದ ಬಗೆ– ಇವುಗಳನ್ನು ಖಾನ್ ಅವರು ಅದ್ಭುತವಾಗಿ ಚಿತ್ರಿಸಿದ್ದಾರೆ. ಅಂದ ಹಾಗೆ, ನಿಮ್ಮ ಕಡೀಪುಟದಲ್ಲಿನ ನಿಮ್ಮ ಮೊಣಕೈಯ ನೋವಿನ ಬಗೆಗಿನ ಮಾತುಗಳು ಮನೋಜ್ಞವಾಗಿವೆ. ನಿಮ್ಮ ಬರವಣಿಗೆಯನ್ನೋದುವುದೇ ಒಂದು ವಿಶಿಷ್ಟ ಅನುಭವ.

ಪ್ರೊ. ಶ್ರೀನಿವಾಸ್ ವಿ. ಸುತ್ರಾವೆ, ದಾವಣಗೆರೆ

೧೦. ಸಂಕಲನ–೪೦ ರ ಕಡೀಪುಟ ಎಲ್ಲಿಂದ ಶುರುವಾಗಿ ಎಲ್ಲಿಗೆ ಕರಕೊಂಡು ಹೋಯ್ತು ನಮ್ಮನ್ನು... ಮತ್ತೆ ಮತ್ತೆ ಓದಿದೆ. ಭಾರೀ ಖುಷಿಯಾಯಿತು. ಸಂಕಲನ ಬಂದ ಕೂಡಲೇ ನಾನು ಮೊದಲು ಓದುವುದು ನಿಮ್ಮ ಕಡೀಪುಟವನ್ನೇ.

–ಬಸವರಾಜ ಹೂಗಾರ, ಮಂಡ್ಯ

೧೧. ಸಂಕಲನ–೪೦ ಒಂದು ತುಂಬ ಸುಂದರ ಮುದ್ದು ಮಗುವಿನಂತೆ ನಮ್ಮ ಕೈಗೆ ತಲುಪಿತು.

–ಡಾ. ಮಹಾಂತೇಶ ಮಲ್ಲನಗೌಡರ, ಕೊಪ್ಪಳ

ಕಡೀಪುಟ : ಸಿದ್ಧಲಿಂಗ ಪಟ್ಟಣಶೆಟ್ಟಿ

'ಸಾಹಿತಿಗಳು ವಿಚಿತ್ರ ಇರತಾರ. ತಮ್ಮ ಕತಿ ಕಾದಂಬರಿ ನಾಟಕ ಹಾಡು ವಿಚಾರಗಳ ಸಲವಾಗಿ ಅವರು ಸಿಕ್ಕಸಿಕ್ಕಲ್ಲೆ ತಿರಗ್ಯಾಡತಾರ, ಹರಗ್ಯಾಡತಾರ; ಸಿಕ್ಕಸಿಕ್ಹಂಗ ತಿಂತಾರ, ಕುಡೀತಾರ. ಅದರಿಂದಾಗಿ ಸಾಮಾನ್ಯರಿಗೆ ಆಗುವಂಥಾ ತ್ರಾಸು ಆಯಾಸ ರೋಗ - ರುಜಿನ ಅವರಿಗೆ ಯಾಕ ಬರುದುಲ್ಲಾ?' ಅಂತ ಅತ್ಯಂತ ಗಂಭೀರವಾಗಿ, ಕಳಕಳಿ ತುಂಬಿದ ದನಿಯೊಳಗ ಕೇಳಿದ ವಿರೂಪಾಕ್ಷ.

'ಇದೆಂಥಾ ಪ್ರಶ್ನಿ ನಿಂದು? ನೀ ಸ್ವತಃ ಎಲ್ಲಾ ಬಲ್ಲವ್ನ. ಸಾಹಿತಿಗಳು ತಮಗ ಬೇಕಾಗುವ ವಸ್ತುವಿನ ಸಲವಾಗಿ ಮಾಡುವ ಹುಡುಕಾಟಕ್ಕೂ, ಈಗ ನೀ ಹೇಳುವ ರೋಗ-ಪಾಗಕ್ಕೂ ಎಲ್ಲೀ ಸಂಬಂಧಾ?' ಅಂದೆ.

'ಸಂಬಂಧ ಅಯ್ತಿ. ಅದಕ್ಕ್ಅ ಹೇಳಾಕ್ಹತ್ತೇನಿ. ಈ ಸಾಹಿತಿ ಮಂದಿ ನನಗ ಭಾಳ ಗೊತ್ತದಾರ. ಇವರು ಪುಸ್ತಕದಾಗ ಬರ್ಯಾಕ ಬೇಕಂತ ವಿಷಯ ಸಂಗ್ರಹ ಮಾಡೂ ಮುಂದ ಏನೇನ ಮಾಡಬಾರದ್ದೆಲ್ಲಾ ಮಾಡತಾರ. ಆದರ ತಮ್ಮ ಚಿಕಿತ್ಸೆಯ ಸಲವಾಗಿ ಅವರು ಯಾವ ದವಾಖಾನಿಯೊಳಗೂ ಪಾಳೆ ಹಚ್ಚಿಕೊಂಡು ಕುಂತಿದ್ದನ್ನ ನಾ ನೋಡಿಲ್ಲ...' ಅಂತ ಈ ವಾರದ ತನ್ನ ಹೊಸಾ ಸಂಶೋಧನೆಯನ್ನ ಮಂಡಿಸಿದ.

'ಸ್ವತಃ ಇಷ್ಟು ಹೆಸರು ಮಾಡಿಕೊಂಡಿರುವಂಥಾ ನೀನು, ಸಾಹಿತಿಗಳ ಬಗ್ಗೆ ಹಿಂಗ ಸಂಕುಚಿತ ದೃಷ್ಟಿಯಿಂದ ವಿಚಾರ ಮಾಡಬಾರದು. ಅವರು ಹುಡುಕುವ ವಸ್ತು, ಬರಿಯುವ ಸಾಹಿತ್ಯ, ಹೇಳುವ ಸಿದ್ಧಾಂತ, ಪ್ರತಿಪಾದಿಸುವ ವಿಚಾರ ಎಲ್ಲಾನೂ ನಮ್ಮಂಥವರ ಬದುಕನ್ನ ಹಸನು ಮಾಡಾಕ, ಹೊಸಾದು ಮಾಡಾಕ, ವಿಶಾಲಗೊಳಿಸಾಕ ಅಂತ ಇರತಾವು. ನಮ್ಮಂಥವರ ಜೀವನದ ದುಃಖ ದಾರಿದ್ರ್ಯ ನೋವು ನಲಿವು ರೋಗ ಜಡ್ಡು ಜಾಪತ್ರಿ ಎಲ್ಲಾನೂ ಚಿತ್ರಿಸಿ, ಚರ್ಚಿಸಿ, ತಿಳಿಸಿ ಅವುಗಳಿಂದ ನಮಗ ಮುಕ್ತಿ ಸಿಗೂಹಂಗ ಮಾಡೂದು ಅವರ ಮುಖ್ಯ ಉದ್ದೇಶ ಆಗಿರತಯ್ತಿ. ಇನ್ನ, ಅವರು ದವಾಖಾನಿಗೆ ಹೋಗೂದುಲ್ಲ ಅನ್ನೂದು ಕಿಲಾಡಿತನದ ಮಾತು. ಸಾಹಿತಿಗಳೂ ನಮ್ಮಂಗ ಮನಸ್ಯಾರಲ್ಲೇನು? ಅವರು ರೋಗ ಪಾಗ ಬರದ್ಹಂಗ ಮದಲ್ಅ ಕಾಳಜಿ ತಗೋತಾರು. ಔಷಧ ತಗೋತಾರು...'

'ಹೌದ ಹೌದು... ಸಾಹಿತಿಗಳು ತೊಗೂಳೂ ಔಷಧ ನನಗ ಗೊತ್ತಿಲ್ಲೇನು? ಅವರನ್ನ ಪ್ರೀತಿಸುವ ರೋಗಗಳು ವಿಶಿಷ್ಟ ಆಗಿರತಾವ.'

'ಅವೆಂಥಾವಪಾ?'

'ಸಾಹಿತಿಗಳ ರೋಗಗಳು ಸಾಹಿತ್ಯಿಕವಾದುವು, ಸಾಂಸ್ಥಿಕವಾದುವು. ಅವುಕ್ಕ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಆಯಾಮಗಳು ಇರತಾವು. ಹಿಂಗಾಗಿ ಅವೆಲ್ಲವೂ ವ್ಯಕ್ತಿಮೂಲ ಬಾಧೆಯಿಂದ ಹುಟ್ಟಿದ ಮೂಲವ್ಯಕ್ತಿವ್ಯಾಧಿಗಳು. ಒಂದು ತರದ ರೋಗಗಳು ರೌರವ ನರಕ ಅಂತಾರಲ್ಲ, ಅಂಥಾವು, ಅವು ಖರೇ ಪ್ರಶಸ್ತಿ. ಇನ್ನೊಂದು ತರದ್ದು ಗೌರವ ನಖರಾದ್ದುವು, ಅವು ಪ್ರಶಾಸ್ತಿ...'

ಇರಪಕ್ಷಿ ಇವತ್ತ ಯಾವ ಔಷಧ ಕುಡಿದಿದ್ದನೋ. ಭರ್ರ್ರ ಮೂಡಿನೊಳಗಿದ್ದ. ತನ್ನ ಹೊಸ ಪುಸ್ತಕಕ್ಕ ಸಂಗ್ರಹ ಮಾಡಿದ ಯಾವುದೋ ವಿಷಯವನ್ನ ನನಗ ಹೇಳಲೇಬೇಕಂತ ನಿರ್ಧಾರ ಮಾಡಿದ್ದಂಗಿತ್ತು; ಘನಗಂಭೀರ ಸಾಹಿತ್ಯ ವಿಶ್ಲೇಷಣೆ ಮುಂದುವರೀತು.

'ರೌರವ ನರಕ ಅನ್ನೂದು ಸಾಹಿತಿಗಳಿಗೆ ಮರಣಾನಂತರ ಸಹಜವಾಗಿ, ಅನಾಯಾಸವಾಗಿ, ಅಯಾಚಿತವಾಗಿ ಲಭಿಸುವ ನಿತ್ಯನಿಶ್ಚಿತ ಪ್ರಶಸ್ತಿ. ಇನ್ನ, ಗೌರವ ಅನ್ನೂದು ಒಂದ ರೀತಿಯ ನರಕಾನ್‌ಅ. ಅದಕ್ಕಿಂತ ಹೆಚ್ಚಿಗೀ, ಅವರು ತಾವ್ನ್ನ ಪೋಷಿಸಿ ಪ್ರದರ್ಶಿಸುವ ನಖರಾ ಅದಕ್ಕಿಂತ ಮುಖ್ಯ. ಅದು ಮರಣಪೂರ್ವ ಅರ್ಥಾತ್, ಅಕ್ಷರಾಭ್ಯಾಸ ಮತ್ತು ಸಾಹಿತ್ಯ ಪ್ರೀತಿಯ ಹಂಬಲ ಅಂಕುರಿತಗೊಂಡ ಕ್ಷಣದಿಂದ ಚಿಗುರೊಡೆಯುವ ಸ್ವಪ್ರಯತ್ನಿತ, ಬಹುಯೋಜಿತ, ಬಹುಆಕಾಂಕ್ಷಿತ, ಈ ವರೆಗೂ ಯಾವ ಭಾಷಾದೊಳಗೂ, ಯಾವ ದೇಶ ಪ್ರದೇಶದೊಳಗೂ, ಯಾವ + ಯಾರ ಕಾಲದೊಳಗೂ, ಯಾವ ಭವವೈದ್ಯರಿಂದಲೂ ಅನಿವಾರಣೀಯ ಅನಿಸಿರುವಂಥಾ ಅನಿತ್ಯ ಅನಿಶ್ಚಿತ ಪ್ರಶಾಸ್ತಿ. ಅವರು ಬಳಸುವ ಕಲ್ಪನಾ, ರಚನಾ, ಸೃಜನ ಮುಂತಾದುವು ಶುದ್ಧ ಸುಳ್ಳುಗಳು. ಅವರ ಅಮಲಿನ ತೆವಲುಗಳು. ಅವು ತಮ್ಮ ಭಾರೀ ಮಹತ್ವದ ಶಕ್ತಿ ಅಂತ ಬಿಂಬಿಸುವ ಪ್ರಯತ್ನವನ್ನ ಯಾವಾಗಲೂ ಮಾಡತಿರ್ತಾರ. ಅವರ ರೌರವದ ಸ್ಥಿತಿ ಅಂತ ಹೇಳಿದ್ನೆಲ್ಲಾ, ಅದು ಆಗೂ ಕಾಲಕ್ಕ ತನ್ನ ಪಾಡಿಗೆ ಆಗಿಬಿಡತಯ್ತಿ. ಆದರ ಆ ಇನ್ನೊಂದ ಅಯ್ತೆಲ್ಲಾ, ಗೌರವ, ಅದರ ಪರಿಸ್ಥಿತಿ ಪ್ರತಿಕ್ಷಣ ಅನಿಶ್ಚಿತ, ಅಪ್ರತ್ಯಾಶಿತ. ಅದೊಂದು ಕೆಟ್ಟ ಹಪಾಹಪಿ. ಅದಕ್ಕ ಮೂಡುವ ಟಿಸಿಲುಗಳು ಅಸಂಖ್ಯ, ಅನಂತ, ವೈವಿಧ್ಯಪೂರ್ಣ, ಪ್ರಶಂಸೆ, ಪ್ರಸಿದ್ಧಿ, ಪ್ರಚಾರ, ಪ್ರದರ್ಶನ, ಕೀರ್ತಿ, ಹೆಸರು, ಅಹಂಕಾರ, ಅಭಿಮಾನ, ವಿನಯ, ವಿಶ್ರಾಂತಿ, ವಿರಾಮ, ಅನುಕೂಲ, ಸೌಲಭ್ಯ, ಧಿಮಾಕು, ಸಂಪತ್ತು, ಆಡಂಬರ, ವೇಷಭೂಷಣ, ಕೇಶಕರ್ತನ, ಪಾದರಕ್ಷಣ ಎಲ್ಲಾ ಎಲ್ಲಾ ಭಿನ್ನ ವಿಭಿನ್ನ ಬಹುವರ್ಣ, ಸ್ವಯಂಕೃತ ಬಹುಪ್ರಯತ್ನಿತ ನಖರಾಗಳು. ಈ ಸಾಹಿತಿಗಳು ಸಮಾಜಕ್ಕ ದಿಕ್ಕು ದಾರೀ ತೋರ್ಸುದುಲ್ಲಾ, ಅದನ್ನ ಹಾದೀ ಮ್ಯಾಲ ತಂದ ಒಗೀತಾರ...'

'ಸ್ವಲ್ಪ ತಡಿ ಇರಪಣ್ಣ, ನೀ ಇದೆಲ್ಲಾ ಏನ ಹೇಳಾಕ್ಹತ್ತೀ? ನನಗ ಏನೇನೂ ತಿಳಿವಲ್ಲದು, ನನ್ನ ತಲ್ಯಾಗ ಹೋಗವಲ್ಲದು...' ಅಂದೆ.

'ಛೀ, ನಿನ್ನಂಥಾ ದಡ್ಡರಿಗೆ ತಿಳಿಯೂ ಮಾತಲ್ಲ ಇದು. ಈಗ ಒಂಧ ತಿಂಗಳಿಂದ ಹಗಲೂ ರಾತ್ರೀ ಕುಂತು ನಾ ನಿನ್ನೆ ರಾತ್ರಿ ಬರೆದು ಮುಗಿಸಿದ ಕಾದಂಬರಿಯ ಸಾರಾಂಶ ಇದು' ಅಂದ ಇರಪಣ್ಣ.

ನಾನು ಗಾಬರಿಯಾದೆ. ನಮ್ಮ ಓಣಿಯ ವಿಶ್ವಪ್ರಸಿದ್ಧ ಗೌರವಸ್ತ ಸಾಹಿತಿಯಾದ ವಿರೂಪಾಕ್ಷ ಪಂಡಿತ ತನ್ನ ಎಂಥಾ ಅನುಭವವನ್ನ ನನಗ ಹೇಳ್ಯಾನಲ್ಲ ಅಂತ ಅಭಿಮಾನದಿಂದ ತಿಳಕೊಳ್ಳಾಕ ಮತ್ತು ಅಗತ್ಯ ಬಿದ್ದರ ಎಮರ್ಜನ್ಸಿ ವ್ಯವಸ್ಥಾ ಮಾಡೂದರ ಸಲವಾಗಿ ಒಂದೆರಡ ದವಾಖಾನಿ ವಿಳಾಸಗಳನ್ನ ನೆನಪ ಮಾಡಿಕೊಳ್ಳಾಕ ಪ್ರಯತ್ನ ಮಾಡಾಕ್ಹತ್ತಿದೆ...

SANKALANA : R N I No. KARKAN 14160 /10 / 1 / 2002 - TC

ಸಂಕಲನ-೪೧ : ಸೆಪ್ಟೆಂಬರ್ + ಅಕ್ಟೋಬರ್ ೨೦೦೮
ಸಂಪುಟ ೭ : ಸಂಚಿಕೆ ೫

ಸಂಪಾದಕರು : **ಸಿದ್ಧಲಿಂಗ ಪಟ್ಟಣಶೆಟ್ಟಿ + ಹೇಮಾ ಪಟ್ಟಣಶೆಟ್ಟಿ**

ಎಸ್. ಆರ್. ಗುಂಜಾಳ, ಯಶವಂತ ಸರದೇಶಪಾಂಡೆ,
ಬಾಳಣ್ಣ ಸೀಗೀಹಳ್ಳಿ, ರಾಗಿಣಿ ಆರ್.
ಸಿ. ಸೋಮಶೇಖರಯ್ಯ
ಸಿ. ನಾಗಭೂಷಣ, ಎಂ. ರಾಜ್‌ಕುಮಾರ್, ಬಸವರಾಜ ವಕ್ಕುಂದ
ಅಶೋಕ ನರೋಡೆ, ಚನ್ನಪ್ಪ ಅಂಗಡಿ ಬಮ್ಮನಹಳ್ಳಿ
ಚೇತನ್ ಮುಂಡಾಜೆ, ವಿ. ಹರಿನಾಥ ಬಾಬು
ರಜಿಯಾ ಡಿ. ಬಿ.

ಪ್ರಕಾಶ ಕಡಮೆ
ಸುನಂದಾ ಕಡಮೆ
ಬಿ. ಜಿ. ಚನ್ನೇಶ್ ಹೊನ್ನಾಳಿ
ಪದ್ಮ ಟಿ. ಶೆಟ್ಟಿ
ನಾ. ದಾಮೋದರ ಶೆಟ್ಟಿ

ಕಂನಾಡಿಗಾ ನಾರಾಯಣ, ವಸಂತ ಕುಲಕರ್ಣಿ
ಸಿ. ಸೋಮಶೇಖರಯ್ಯ, ಡಿ. ಎನ್. ಮುನಿಕೃಷ್ಣ
ಎಂ. ಜಿ. ವಾರಿ, ಬಸು ಬೇವಿನಗಿಡದ
ಅಶೋಕ ನರೋಡೆ, ಕೃಷ್ಣಮೂರ್ತಿ ಕಲುಮಂಗಿ
ಶ್ರೀನಿವಾಸ್ ವಿ. ಸುತ್ರಾವೆ, ಬಸವರಾಜ ಹೂಗಾರ
ಮಹಾಂತೇಶ ಮಲ್ಲನಗೌಡರ

ಸಿದ್ಧಲಿಂಗ ಪಟ್ಟಣಶೆಟ್ಟಿ

ಸಂಕಲನ ಪ್ರಕಾಶನ
ಹೂಮನೆ, ಶ್ರೀದೇವಿನಗರ, ವಿದ್ಯಾಗಿರಿ, ಧಾರವಾಡ - ೫೮೦ ೦೦೪